ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಡಿಸೆಂಬರ್ 15 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 238 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾಗೆ ಬಿಡಿಎ ರೂಪ!

● ಪ್ರತ್ಯೇಕ ಕಾಯ್ದೆ ತರಲು ಸರ್ಕಾರ ನಿರ್ಧಾರ ● ಇನ್ನು ಕಂಡ ಕಂಡವರು ಸದಸ್ಯರಾಗುವಂತಿಲ್ಲ; ಸರ್ಕಾರದಿಂದ ಮೂರ್‍ನಾಲ್ಕು ಮಂದಿ ನಾಮನಿರ್ದೇಶನ ● ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ● ಬೆಳಗಾವಿ ಅಧಿವೇಶನದಲ್ಲೇ ಮಸೂದೆ ಮಂಡನೆ ನಿರ್ಧಾರ

ಬೆಂಗಳೂರು, ಡಿ.14(ಕೆಎಂಶಿ)–ಭ್ರಷ್ಟಾಚಾರ ಹಗರಣಗಳ ಕೇಂದ್ರಬಿಂದು ಆಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಕ್ಕೆ ಬಿಡಿಎ ಮಾದರಿಯಲ್ಲಿ ಪ್ರತ್ಯೇಕ ಕಾಯ್ದೆ ರೂಪಿಸಲು ಸರ್ಕಾರ ತೀರ್ಮಾನಿಸಿದೆ.

ಬೆಳಗಾವಿಯ ಸುವರ್ಣಸೌಧದಲ್ಲಿ ನಿನ್ನೆ ರಾತ್ರಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿರುವ ಸರ್ಕಾರ, ಚಳಿಗಾಲದ ಅಧಿವೇಶನದಲ್ಲೇ ಮಸೂದೆ ಮಂಡನೆ ಮಾಡಿ ಅಂಗೀಕಾರ ಪಡೆಯಲು ಸಮ್ಮತಿಸಿದೆ.

ಕಾಯ್ದೆ ಜಾರಿಗೊಂಡ ನಂತರ ಭೂಸ್ವಾಧೀನ, ನಕ್ಷೆ, ನಿವೇಶನ ಹಂಚಿಕೆ ಸೇರಿದಂತೆ ಎಲ್ಲಾ ಕಾರ್ಯಗಳು ಬಿಡಿಎ ಮಾದರಿಯಲ್ಲೇ ನಡೆಯಲಿವೆ. ಭೂಸ್ವಾಧೀನ ನಂತರ ಮಾಲೀಕರಿಗೆ ಶೇ.50 ಇಲ್ಲವೇ 40ರಷ್ಟು ನಿವೇಶನ ಹಂಚಿಕೆ ಹಾಗೂ ಬೇಕಾಬಿಟ್ಟಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡುವ ಸ್ವಾತಂತ್ರ್ಯಕ್ಕೆ ಕಡಿವಾಣ ಬೀಳಲಿದೆ. ಅಷ್ಟೇ ಅಲ್ಲ, ಪ್ರಾಧಿಕಾರಕ್ಕೆ ಕೇವಲ ಮೂರರಿಂದ ನಾಲ್ಕು ಮಂದಿ ನಾಮನಿರ್ದೇಶನ ಸದಸ್ಯರಿರುತ್ತಾರೆ. ಈ ಮೊದಲು ಮುಡಾಕ್ಕೆ ನಾಮನಿರ್ದೇ



ಶಿತರ ಸಂಖ್ಯೆ ಅಧಿಕವಿತ್ತು. ನಗರಾಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮುಡಾಕ್ಕೆ ಇನ್ನು ಮುಂದೆ ಬಿಗಿಯಾದ ಕಾನೂನಿನ ಕುಣಿಕೆ ಬೀಳಲಿದೆ.

ಮುಡಾ 1987ರ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿತ್ತು. ಮಸೂದೆಗೆ ಅನುಮತಿ ದೊರೆಯುತ್ತಿದ್ದಂತೆ ಎಲ್ಲವನ್ನೂ ಹೊಸ ಕಾಯ್ದೆಯಡಿಯಲ್ಲೇ ನಿರ್ವಹಿಸಬೇಕಾಗುತ್ತದೆ. ಪ್ರಾಧಿಕಾರ ಇದುವರೆಗೂ ಮೈಸೂರು ನಗರದಲ್ಲಿ ಅನೇಕ ಹೊಸ ಹೊಸ ಬಡಾವಣೆಗಳನ್ನು ನಿರ್ಮಿಸಿ, ನಿವೇಶನಗಳನ್ನು ಹಂಚಿಕೆ ಮಾಡಿದೆ.

ಆದರೆ, ಸಾವಿರಾರು ಬಿಡಿ ನಿವೇಶನಗಳನ್ನು ಆಡಳಿತ ಮಂಡಳಿಯೊಂದಿಗೆ ಅಧಿಕಾರಿಗಳು ಶಾಮೀಲಾಗಿ ಬೇಕಾಬಿಟ್ಟಿ ಹಂಚಿ, ಮುಡಾಗೆ ಸಾವಿರಾರು ಕೋಟಿ ರೂ. ನಷ್ಟ ಉಂಟು ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ 14 ನಿವೇಶನಗಳನ್ನು ತಮ್ಮ ಜಮೀನಿನ ಸ್ವಾಧೀನಕ್ಕೆ ಬದಲಾಗಿ ಪಡೆದುಕೊಂಡಿದ್ದೇ ಪ್ರಾಧಿಕಾರದಲ್ಲಿ ನಡೆದಿರುವ ಭ್ರಷ್ಟಾಚಾರಗಳು ಬಯಲಿಗೆ ಬರಲು ಕಾರಣವಾಗಿದ್ದು, ಈ ಬೆಳವಣಿಗೆ ನಂತರ ರಾಜಭವನ ಮಧ್ಯೆ ಪ್ರವೇಶಿಸಿ ನ್ಯಾಯಾಲಯದ ಆದೇಶದಂತೆ ತನಿಖೆಯೂ ನಡೆದಿದೆ. ಇದರ ನಡುವೆ ಜಾರಿ ನಿರ್ದೇಶನಾಲಯ ಪ್ರತ್ಯೇಕ ದೂರು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದು, ಮುಂದಿನ ದಿನಗಳಲ್ಲಿ ಸರ್ಕಾರದ ಮಟ್ಟದಲ್ಲಿ ದೊಡ್ಡ ಸಂಚಲನ ಉಂಟಾಗಲಿದೆ ಎಂಬ ಮಾತುಗಳು ಬಲವಾಗಿ ಕೇಳಿಬರುತ್ತಿವೆ.

ಹುತ್ತರಿ ಆಚರಣೆ



ಮೈಸೂರು ಕೊಡವ ಸಮಾಜದ ವತಿಯಿಂದ 'ಪುತರಿ ನಮ್ಮೆ (ಹುತರಿ)' ಭಕ್ತಿಭಾವದಿಂದ ಆಚರಿಸಲಾಯಿತು. ಈ ವೇಳೆ ಗದ್ದೆಯಲ್ಲಿ ಪೂಜಾ ಕೈಂಕರ್ಯದೊಂದಿಗೆ 'ನೆರೆ ಕಟ್ಟ್' (ಭತ್ತದ ಕದಿರು ಕೊಯ್ದು) ಧಾನ್ಯ ಲಕ್ಷ್ಮಿಯನ್ನು ಬರಮಾಡಿಕೊಳ್ಳುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ವಕ್ಫ್ ಆಸ್ತಿ ವಿಚಾರದಲ್ಲಿ ಸುಮ್ಮನಿರಲು ಅನ್ವರ್ ಮಾಣಿಪ್ಪಾಡಿಗೆ ಬಿ.ವೈ.ವಿಜಯೇಂದ್ರ 150 ಕೋಟಿ ಆಮಿಷ

■ ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಸ ಬಾಂಬ್; ಸಿಬಿಐ ತನಿಖೆಗೆ ಆಗ್ರಹ
■ ಬಿಜೆಪಿ ಅಧಿಕಾರಾವಧಿಯಲ್ಲಿ ವಕ್ಫ್ ಆಸ್ತಿ ಕಬಳಿಕೆ ವಿಚಾರದಲ್ಲಿ ಮೌನ ವಹಿಸಲು ವಿಜಯೇಂದ್ರ ಆಮಿಷದ ಬಗ್ಗೆ ಪ್ರಧಾನಿಗೆ ಪತ್ರ ಬರೆದಿರುವ ಮಾಣಿಪ್ಪಾಡಿ!



ಮುಖ್ಯಮಂತ್ರಿ ಸಿದ್ದರಾಮಯ್ಯ



ವಿಜಯೇಂದ್ರ



ಮಾಣಿಪ್ಪಾಡಿ

ಬೆಂಗಳೂರು, ಡಿ.14– ವಕ್ಫ್ ಆಸ್ತಿ ಕಬಳಿಕೆಯ ಬಗ್ಗೆ ಮೌನವಾಗಿರಲು ಬಿ.ವೈ.ವಿಜಯೇಂದ್ರ ಅವರು ತಮಗೆ 150 ಕೋಟಿ ರೂ. ಆಮಿಷವೊಡ್ಡಿದ್ದರು ಎಂದು ಬಿಜೆಪಿ ಸರ್ಕಾರದಲ್ಲಿ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರಾಗಿದ್ದ ಅನ್ವರ್ ಮಾಣಿಪ್ಪಾಡಿ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ ನೇರವಾಗಿ ಪತ್ರ ಬರೆದಿರುವುದು ಬಯಲಾಗಿದೆ. ಪ್ರಧಾನಮಂತ್ರಿಯವರು ಈ ಆರೋಪವನ್ನು ಗಂಭೀರವಾಗಿ ■ 6ನೇ ಪುಟಕ್ಕೆ

ವಾಲ್ಮೀಕಿ, ಮುಡಾ ಹಗರಣದಿಂದ ಬಚಾವಾಗಲು ಇದು ಹೊಸ ವರಸೆ

ಮಾನ್ಯ @siddaramaiah ನವರೇ,

ಸಿಬಿಐ, ಇಡಿ ತನಿಖೆಗಳಿಗೆ ಬೆಚ್ಚಿಬಿದ್ದಿರುವ ನೀವು ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ನೀಡಿದ ಅನುಮತಿಯನ್ನು ಪ್ರಶ್ನಿಸಿ ಘಟಾನುಘಟಿ ಹಿರಿಯ ವಕೀಲರನ್ನು ದೆಹಲಿಯಿಂದ ಕರೆಸಿಕೊಂಡು ಕಾನೂನು ರಕ್ಷಣೆ ಪಡೆಯಲು ವ್ಯರ್ಥ ಪ್ರಯತ್ನ ನಡೆಸಿದಿರಿ. ಉಚ್ಚ ನ್ಯಾಯಾಲಯದ ತೀರ್ಪಿನಿಂದ ಮುಖಭಂಗಕ್ಕೀಡಾದ ನಿಮಗೆ ಇನ್ನೊಬ್ಬರ ಬಗ್ಗೆ ಸಿಬಿಐ ತನಿಖೆಗೆ ಆದೇಶಿಸಲು ಯಾವ ನೈತಿಕತೆ ಇದೆ?.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮುಡಾ ಹಗರಣ ಸೇರಿದಂತೆ ಹತ್ತು ಹಲವು ಭ್ರಷ್ಟಾಚಾರದ ಆರೋಪಗಳು ನಿಮ್ಮ ಹಾಗೂ ನಿಮ್ಮ ಸರ್ಕಾರದ ಕೊರಳಿಗೆ ಸುರಳಿಯಾಗಿ ಸುತ್ತಿಕೊಂಡಿವೆ. ಹೇಗಾದರೂ ಮಾಡಿ ಈ ಹಗರಣದಿಂದ ಬಚಾವಾಗಲೇಬೇಕೆಂದು ನಿಮ್ಮ ಕೈ ಕೆಳಗಿನ ಅಧಿಕಾರಿಗಳು ನಡೆಸುವ ಲೋಕಾಯುಕ್ತದ ತನಿಖೆಯಲ್ಲಿ ಕ್ಲೀನ್‌ಚಿಟ್ ಪಡೆದುಕೊಳ್ಳಲು ಮುಖ್ಯಮಂತ್ರಿ ಸ್ಥಾನದ ಅಧಿಕಾರವನ್ನೆಲ್ಲಾ ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ.

ಉಚ್ಚ ನ್ಯಾಯಾಲಯ ಸಿಬಿಐ ತನಿಖೆಗೆ ಆದೇಶಿಸದಂತೆ ತಡೆಯಲು ಈ ಕ್ಷಣಕ್ಕೂ ದೆಹಲಿಯ ಸಂವಿಧಾನ ತಜ್ಞ ವಕೀಲರನ್ನೇ ಕರೆಸಿ ಕನ್ನಡಿಗರ ತೆರಿಗೆ ಹಣವನ್ನು ನೀರಿನಂತೆ ಪೋಲು ಮಾಡಿ ವಾದ ಮಾಡಿಸಿಕೊಳ್ಳುತ್ತಿದ್ದೀರಿ. ನಿಮಗೆ ಮೆತ್ತಿಕೊಂಡಿರುವ ಕಪ್ಪು ಮಸಿ ಅಳಿಸುವ ಯಾವ ರಾಸಾಯನಿಕವೂ ನಿಮಗೆ ದೊರೆಕುತ್ತಿಲ್ಲ. ಇದರಿಂದ ನೀವು ಹತಾಶರಾಗಿ ತಳ–ಬುಡವಿಲ್ಲದ ಕಪೋಲಕಲ್ಪಿತ ವಿಷಯ ಹಿಡಿದುಕೊಂಡು ಬ್ರಹ್ಮಾಸ್ತ್ರವೆಂದು ಭ್ರಮಿಸಿ ಪ್ರಯೋಗಿಸಲು ಹೊರಟಿದ್ದೀರಿ.

ಇದರಿಂದ ನೀವು ನನ್ನ ವಿರುದ್ಧ ಅಪಪ್ರಚಾರದ ವ್ಯರ್ಥ ಪ್ರಯತ್ನ ನಡೆಸಬಹುದೇ ಹೊರತು ಇನ್ನೇನನ್ನೂ ಸಾಧಿಸಲಾಗದು. ನಿಮ್ಮ ವಿರುದ್ಧದ ಆರೋಪಗಳಿಗೆಲ್ಲ ಸಾಕ್ಷಿಗಳು ದಿನನಿತ್ಯವೂ ಸರಣಿ ರೂಪದಲ್ಲಿ ಮೇಲೆದ್ದು ನಿಮ್ಮ ಮುಖಕ್ಕೆ ರಾಚುತ್ತಲೇ ಇವೆ. ಇಷ್ಟಾಗಿಯೂ ಭಂಡತನದಿಂದ ವರ್ತಿಸುತ್ತಿರುವ ನೀವು ಕರ್ನಾಟಕದ ಮುಖ್ಯಮಂತ್ರಿ ಸ್ಥಾನದ ಘನತೆ–ಗೌರವವನ್ನು ಮಣ್ಣು ಪಾಲು ಮಾಡಿದ ಏಕೈಕ ಮುಖ್ಯಮಂತ್ರಿ ಎಂಬುದು ಇತಿಹಾಸದಲ್ಲಿ ಈಗಾಗಲೇ ದಾಖಲಾಗಿ ಹೋಗಿದೆ.

ಅನ್ವರ್ ಮಾಣಿಪ್ಪಾಡಿ ವರದಿಯಲ್ಲಿರುವುದು ಕಾಂಗ್ರೆಸ್ಸಿಗರು ಆಕ್ರಮಿಸಿರುವ ವಕ್ಫ್ ಆಸ್ತಿಗಳ ಕುರಿತೇ ಹೊರತು ಬಿಜೆಪಿಯವರನ್ನು ಕುರಿತು ಅಲ್ಲ.

–ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮೈಸೂರು ನಗರದಾದ್ಯಂತ 500ಕ್ಕೂ ಅಧಿಕ ಅನಧಿಕೃತ ಜಾಹೀರಾತು ಫಲಕಗಳು ರಾರಾಜಿಸುತ್ತಿವೆ

ಅಚ್ಚರಿ ವಿಚಾರವೆಂದರೆ ಮೈಸೂರು ನಗರಪಾಲಿಕೆಯಿಂದ ಅನುಮತಿ ನೀಡಿರುವುದು ಬರೀ 210ಕ್ಕೆ ಮಾತ್ರ



ಮೈಸೂರು,ಡಿ.14(ಆರ್‌ಕೆ)– ಸಾಂಸ್ಕೃತಿಕ ನಗರಿ ಮೈಸೂರು ನಗರದಾದ್ಯಂತ 500ಕ್ಕೂ ಹೆಚ್ಚು ಅನಧಿಕೃತ ಜಾಹೀರಾತು ಫಲಕಗಳು ರಾರಾಜಿಸುತ್ತಿದ್ದು, ಪಾಲಿಕೆ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ.

ಪಾರಂಪರಿಕ ನಗರಿ ಮೈಸೂರನ್ನು ಫ್ಲೆಕ್ಸ್ ಮುಕ್ತ ನಗರಿ ಮಾಡುತ್ತೇವೆಂಬ ಪಾಲಿಕೆ ಘೋಷಣೆಗೆ ಇದೀಗ ಬೆಲೆ ಇಲ್ಲದಂತಾಗಿದೆ. ಪ್ಲಾಸ್ಟಿಕ್ ನಿಷೇಧ ಮಾಡಿದ್ದು, ಪಾಲಿಕೆ ಅಧಿಕಾರಿಗಳು ದಾಳಿ ನಡೆಸಿ ಅನಧಿಕೃತವಾಗಿ ದಾಸ್ತಾನು ಮಾಡಿರುವ ಅಂಗಡಿಗಳಿಂದ ಪ್ಲಾಸ್ಟಿಕ್ ಪದಾರ್ಥಗಳನ್ನು ವಶಪಡಿಸಿಕೊಳ್ಳುತ್ತಿರುವ ಕಾರ್ಯಾಚರಣೆ ಮುಂದುವರಿದಿದೆ. ಆದರೆ ಫ್ಲೆಕ್ಸ್‌ನಲ್ಲಿ ತಯಾರಿಸಿದ ಬೃಹದಾಕಾರದ ಜಾಹೀರಾತು ಫಲಕಗಳನ್ನು ಮೈಸೂರು ನಗರದ ಪ್ರಮುಖ ರಸ್ತೆಗಳು, ಜಂಕ್ಷನ್‌ಗಳು, ವೃತ್ತಗಳಲ್ಲಿ ಅನುಮತಿ ಪಡೆಯದೆ ಅನಧಿಕೃತವಾಗಿ ಅಳವಡಿಸಿದ್ದರೂ ಪಾಲಿಕೆ ಅಧಿಕಾರಿಗಳು ಮಾತ್ರ ತಮಗೆ ಸಂಬಂಧಿಸಿಲ್ಲ ಎಂಬಂತೆ ಮೌನವಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮೈಸೂರಿನ ಹೃದಯ ಭಾಗದ ಮೆಟ್ರೋಪೋಲ್ ಸರ್ಕಲ್‌ನಿಂದ ಹಿನಕಲ್ ರಿಂಗ್ ರೋಡ್ ಜಂಕ್ಷನ್‌ವರೆಗೆ ಹುಣಸೂರು ರಸ್ತೆಯಲ್ಲಿ 25, ರಾಯಲ್ ಇನ್ ಜಂಕ್ಷನ್‌ಯಿಂದ ದಾಸಪ್ಪ ಸರ್ಕಲ್‌ವರೆಗೆ ಕೆಆರ್‌ಎಸ್ ರಸ್ತೆಯಲ್ಲಿ 10, ದಾಸಪ್ಪ ಸರ್ಕಲ್‌ನಿಂದ ನಂಜನಗೂಡು ರಸ್ತೆ(ಜೆಎಸ್‌ಎಸ್ ಕಾಲೇಜು) ವರೆಗೆ ಜೆಎಲ್‌ಬಿ ರಸ್ತೆಯಲ್ಲಿ 30 ಸೇರಿದಂತೆ ಸಯ್ಯಾಜಿರಾವ್ ರಸ್ತೆ ಬೆಂಗಳೂರು–ನೀಲಗಿರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಮಹಾತ್ಮ ಗಾಂಧಿ ಜೋಡಿ ರಸ್ತೆ ಸೇರಿದಂತೆ ಮೈಸೂರು ನಗರದಾದ್ಯಂತ ಒಟ್ಟು 750ಕ್ಕೂ ಹೆಚ್ಚು ವಿವಿಧ ಅಳತೆಯ ಜಾಹೀರಾತು ಫಲಕಗಳನ್ನು ಅಳವಡಿಸಲಾಗಿದೆ. ಕೆಲ ವೆಡೆ ಮಾರ್ಗಸೂಚಿ ಫಲಕಗಳು ಒಂದು ಬದಿಯಲ್ಲಿ ಅಧಿಕೃತ ಮಾಹಿತಿ ನಮೂದಾಗಿದ್ದರೆ ಮತ್ತೊಂದು ಬದಿಯಲ್ಲಿ ಖಾಸಗಿ ಜಾಹೀರಾತು ಫಲಕಗಳನ್ನು ಅಳವಡಿಸಲಾಗಿದೆ. ಆದರೆ, ಮೈಸೂರು ಮಹಾನಗರ ಪಾಲಿಕೆ ವತಿಯಿಂದ 2024–25ನೇ ಸಾಲಿನಲ್ಲಿ ಕೇವಲ 210 ಜಾಹೀರಾತು ಫಲಕಗಳನ್ನು ಅಳವಡಿಸಲು ವಿವಿಧ ಏಜೆನ್ಸಿಗಳಿಗೆ ಶುಲ್ಕ ಪಾವತಿಸಿಕೊಂಡು ಅನುಮತಿ ನೀಡಲಾಗಿದೆ. ಆದರೆ, ಅದೇ ನೆಪದಲ್ಲಿ 500ಕ್ಕೂ ಹೆಚ್ಚು ಜಾಹೀರಾತು ■ 6ನೇ ಪುಟಕ್ಕೆ

ವಾರದ ಗಡುವು

ಮೈಸೂರು,ಡಿ.14(ಆರ್‌ಕೆ)–ಪಾಲಿಕೆಯಿಂದ ಅನುಮತಿ ಪಡೆಯದೆ ಅನಧಿಕೃತವಾಗಿ ಮೈಸೂರು ನಗರದಾದ್ಯಂತ ಅಳವಡಿಸಿರುವ ಖಾಸಗಿ ಜಾಹೀರಾತು ಫಲಕಗಳನ್ನು ತೆರವುಗೊಳಿಸಲು ಒಂದು ವಾರ ಗಡುವು ನೀಡಲಾಗಿದೆ ಎಂದು ಮೈಸೂರು ನಗರಪಾಲಿಕೆ ಉಪ ಆಯುಕ್ತ (ಕಂದಾಯ) ಸೋಮಶೇಖರ್ ತಿಳಿಸಿದ್ದಾರೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಅವರು, ನಾವು ಈವರೆಗೆ ಕೇವಲ 210 ನಾಮಫಲಕ ಗಳನ್ನು ಅಳವಡಿಸಲು ಮಾತ್ರ ಅನುಮತಿ ನೀಡಿದ್ದು, ಅದರಂತೆ ನಾವು ನಿಗದಿಪಡಿಸಿರುವ ಸ್ಥಳದಲ್ಲಿ ಏಜೆನ್ಸಿಯವರು ನಾಮಫಲಕ ಅಳವಡಿಸಿದ್ದಾರೆ. ಆದರೆ ನಾವು ಅನುಮತಿ ■ 6ನೇ ಪುಟಕ್ಕೆ

ನಮ್ಮ ಮೆಟ್ರೋದಲ್ಲಿ ಭಿಕ್ಷಾಟನೆ: ಪ್ರಯಾಣಿಕರು ಶಾಕ್!

ಬೆಂಗಳೂರು: ಬಸ್ ನಿಲ್ದಾಣ, ರೈಲು ನಿಲ್ದಾಣ, ಟ್ರಾಫಿಕ್ ಸಿಗ್ನಲ್ ಗಳಲ್ಲಿ ಭಿಕ್ಷುಕರು ಭಿಕ್ಷಾಟನೆ ಮಾಡುವುದನ್ನು ನೋಡಿದ್ದೇವೆ. ಆದರೆ ಇದೀಗ ನಮ್ಮ ಮೆಟ್ರೋ ಒಳಗೆ ವ್ಯಕ್ತಿಯೋರ್ವ ಭಿಕ್ಷಾಟನೆ ಮಾಡಿದ್ದು, ಪ್ರಯಾಣಿಕರು ದಂಗಾಗಿದ್ದಾರೆ. ವಿಶೇಷ ಚೇತನ ವ್ಯಕ್ತಿಯೊಬ್ಬ ನಮ್ಮ ಮೆಟ್ರೋ ರೈಲಿನಲ್ಲಿ ಭಿಕ್ಷಾಟನೆ ಮಾಡಿದ್ದಾನೆ. ಚಲ್ಲಘಟ್ಟದಿಂದ ವೈಟ್ ಫೀಲ್ಡ್ ಮಾರ್ಗದ ಮೆಟ್ರೋದಲ್ಲಿ ಪ್ರಯಾಣಿಕರಂತೆ ಬಂದ ವ್ಯಕ್ತಿ, ಭಿಕ್ಷಾಟನೆ ನಡೆಸಿದ್ದಾನೆ. ತನಗಿರುವ ಅಂಗವೈಕಲ್ಯದ ಬಗ್ಗೆ ತೋರಿಸಿ ಭಿಕ್ಷೆ ಬೇಡಿ ಹಣ ಪಡೆದಿರುವ ಘಟನೆ ನಡೆದಿದೆ. ಈ ಹಿಂದೆ ರೈತರೊಬ್ಬರಿಗೆ ಮೆಟ್ರೋ ಪ್ರವೇಶಕ್ಕೆ ಅವಕಾಶ ನೀಡಿಲ್ಲ ಎಂಬ ಆರೋಪ ಕೇಳಿಬಂದಿತ್ತು. ಇದೀಗ ವ್ಯಕ್ತಿಯೋರ್ವ ಕ್ಯೂ ಆರ್ ಕೂಡ್ ಸ್ಕ್ಯಾನ್ ಮಾಡಿ ಟಿಕೆಟ್ ಪಡೆದು ಮೆಟ್ರೋದೊಳಗೆ ಬಂದು ಭಿಕ್ಷಾಟನೆ ನಡೆಸಿದ್ದು, ಅಚ್ಚರಿಗೆ ಕಾರಣವಾಗಿದೆ. ಇನ್ನುಂದೆ ನಮ್ಮ ಮೆಟ್ರೋದಲ್ಲಿ ಭಿಕ್ಷೆ ಬೇಡಲು ಶುರು ಮಾಡುತ್ತಾರಾ? ಎಂಬ ಪ್ರಶ್ನೆ ಮೂಡಿದೆ. ಮೆಟ್ರೋ ಟ್ರೇನ್ ನಲ್ಲಿ ವ್ಯಕ್ತಿ ಭಿಕ್ಷಟನೆ ಮಾಡಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ನಿಧನ



ಡಾ.ಎಸ್.ಅನಂತಲಕ್ಷ್ಮಿ

ಮೈಸೂರು,ಡಿ.14–ಮೈಸೂರಿನ ವಿ.ವಿ.ಮೊಹಲ್ಲಾ ನಿವಾಸಿ ಡಾ.ಅನಂತಲಕ್ಷ್ಮಿ (84) ಶನಿವಾರ ಬೆಳಗ್ಗೆ ನಿಧನರಾದರು. ಇವರು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಪದವಿ ಮುಗಿಸಿದ ನಂತರ ಅಮೇರಿಕಾದ ನ್ಯೂಯಾರ್ಕ್ ಬ್ರೂಕ್‌ಲಿನ್ ಮೆಥೋಡಿಸ್ಟ್ ಆಸ್ಪತ್ರೆಯಲ್ಲಿ ಆಬ್‌ಸ್ಟೆಟ್ರಿಕ್ಸ್ ಮತ್ತು ಗೈನಕಾಲಜಿಯಲ್ಲಿ ಉನ್ನತ ವ್ಯಾಸಂಗ ಮಾಡಿದ್ದರು. ಫೆಲೋಶಿಪ್ ಪೂರ್ಣಗೊಳಿಸಿದ ನಂತರ ಭಾರತಕ್ಕೆ ಹಿಂದಿರುಗುವ ಮೊದಲು ಕೆಲವು ವರ್ಷಗಳ ಕಾಲ ನ್ಯೂಯಾರ್ಕ್‌ನಲ್ಲಿ ಪ್ರಾಕ್ಟೀಸ್ ಮಾಡಿದ್ದರು. ಖಾಸಗಿ ಪ್ರಾಕ್ಟೀಸ್ ಪ್ರಾರಂಭಿಸುವ ಮೊದಲು ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ್ದರು. ಮೃತರು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಎಂ.ದೇವೇಗೌಡ

ಮೈಸೂರು, ಡಿ.14– ಮೈಸೂರು ಕೆ.ಜಿ.ಕೊಪ್ಪಲು ನಿವಾಸಿ ಹಾಗೂ ಖ್ಯಾತ ರಂಗಭೂಮಿ ಕಲಾವಿದ ಎಂ.ದೇವೇಗೌಡರು (ನಟ ಭಯಂಕರ ದೇವೇಗೌಡರು) ಶನಿವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ಇವರಿಗೆ 70 ವರ್ಷ ವಯಸ್ಸಾಗಿತ್ತು. ಮೃತರು ತಾಯಿ ಹೊಂಬಾಳಮ್ಮ, ಪತ್ನಿ ದೇವಮ್ಮ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಭಾನುವಾರ) ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ.

ಜಯಮ್ಮ



ನಂಜನಗೂಡು ತಾಲೂಕು ಮಲ್ಲಹಳ್ಳಿ ಗ್ರಾಮದ ಜಯಮ್ಮ (70) ಶುಕ್ರವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಪಘಾತ ಸಂಬಂಧ ಜಗಳವಾಗಿ ಇಬ್ಬರನ್ನು ಕೊಲೆಗೈದಿದ್ದ ಆರೋಪಿಗೆ ಜೀವಾವಧಿ ಶಿಕ್ಷೆ

ಮೈಸೂರು,ಡಿ.14(ಆರ್‌ಕೆ)– ರಸ್ತೆ ಅಪಘಾತವೊಂದರಲ್ಲಿ ಮಾತಿಗೆ ಮಾತು ಬೆಳೆದು ಜಗಳವಾಡಿ ಇಬ್ಬರನ್ನು ಹತ್ಯೆಗೈದಿದ್ದ ಆರೋಪಿಗೆ ಮೈಸೂರಿನ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿ, ತೀರ್ಪು ನೀಡಿದೆ.

ಹೆಚ್.ಡಿ.ಕೋಟೆ ತಾಲೂಕು ಕೋಟೆಹುಂಡಿ ಗ್ರಾಮದ ಯೋಗೇಶ್ ಶಿಕ್ಷೆಗೆ ಗುರಿಯಾದ ಆರೋಪಿ. 2024ರ ಮೇ 24ರಂದು ಯೋಗೇಶ್ ತನ್ನ ಪ್ಯಾಸೆಂಜರ್ ಆಟೋದಲ್ಲಿ ಹೆಚ್.ಡಿ.ಕೋಟೆ ರಸ್ತೆಯ ಕೋಟೆಹುಂಡಿ ಗ್ರಾಮದ ಮುಖ್ಯರಸ್ತೆಯಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದಾಗ ದಿಢೀರ್ ಬಲಕ್ಕೆ ಆಟೋ ತಿರುಗಿಸಿದ ಪರಿಣಾಮ ಮಂಜುನಾಥ್ ಅವರು ಚಾಲನೆ ಮಾಡಿಕೊಂಡು ಬರುತ್ತಿದ್ದ ಮಹೇಂದ್ರ ಗೂಡ್ಸ್ ವಾಹನದ ಮುಂಭಾಗ ಜಖಂ ಆಗಿತ್ತು. ಈ ವಿಚಾರವಾಗಿ ಗೂಡ್ಸ್ ವಾಹನದಲ್ಲಿದ್ದ ಟಿ.ಮಂಜುನಾಥ್



ಹಾಗೂ ಆರ್.ಮಂಜುನಾಥ್ ಅವರು ಪ್ಯಾಸೆಂಜರ್ ಆಟೋದ ಯೋಗೇಶ್‌ನನ್ನು ತಮ್ಮ ವಾಹನ ರಿಪೇರಿ ಮಾಡಿಸಿಕೊಡುವಂತೆ ಕೇಳಿದ ಹಿನ್ನೆಲೆಯಲ್ಲಿ ಜಗಳ ಆರಂಭವಾಗಿತ್ತು.

ಮಾತಿಗೆ ಮಾತು ಬೆಳೆದು ಕೋಪಗೊಂಡ ಯೋಗೇಶ್ ಚಾಕುವಿನಿಂದ ಗೂಡ್ಸ್ ಆಟೋದಲ್ಲಿದ್ದ ಇಬ್ಬರನ್ನು ಇರಿದು ಕೊಲೆ ಮಾಡಿದ್ದ. ಈ ಸಂಬಂಧ ಜಯಪುರ ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ಕೆ.ಜೀವನ್ ಅವರು ಪ್ರಕರಣ ದಾಖಲಿಸಿಕೊಂಡು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಧಿಕ ಸತ್ರ ನ್ಯಾಯಾಲಯದ ನ್ಯಾಯಮೂರ್ತಿ ಗುರುರಾಜ್ ಸೋಮಕ್ಕಳವರ್ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ, ಕೊಲೆ ಮಾಡಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ ಐಪಿಸಿ ಸೆಕ್ಷನ್ 302ರಡಿ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ದಂಡ ಹಾಗೂ ಐಪಿಸಿ ಸೆಕ್ಷನ್ 504ರಡಿ 1 ವರ್ಷ ಕಠಿಣ ಶಿಕ್ಷೆ ಮತ್ತು 1 ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಇ.ಯೋಗೇಶ್ವರ್ ವಾದ ಮಂಡಿಸಿದ್ದರು.

ನಾಳೆಯಿಂದ ಕೀಲು, ಮೂಳೆ ಉಚಿತ ತಪಾಸಣಾ ಶಿಬಿರ

ಮೈಸೂರು, ಡಿ.14–ಮೈಸೂರಿನ ಸುಯೋಗ್ ಆಸ್ಪತ್ರೆಯು ವತಿಯಿಂದ ಡಿಸೆಂಬರ್ 16ರಿಂದ 21ರವರೆಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 6ಗಂಟೆವರೆಗೆ ಕೀಲು, ಮೂಳೆ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಭುಜದ ನೋವು, ಬೆನ್ನುನೋವು, ಮಂಡಿನೋವು, ಸೊಂಟದ ನೋವು, ಮೈಕೈ ನೋವು ಮುಂತಾದ ಸಮಸ್ಯೆಗಳಿಗೆ ತಪಾಸಣೆ ಹಾಗೂ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ಶೇ.30 ರಿಯಾಯತಿ ಲಭ್ಯವಿರುತ್ತದೆ. ಆಸಕ್ತರು 0821-2566966, 9986399862 ಸಂಪರ್ಕಿಸಿ, ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಮೈಸೂರು ನಗರಪಾಲಿಕೆಯ ಕಾಯಂ ಅಲ್ಲದ ಪೌರಕಾರ್ಮಿಕರ ಹಂತಹಂತವಾಗಿ ಕಾಯಂ

ಶಾಸಕ ಹರೀಶ್‌ಗೌಡರಿಗೆ ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಮಾಹಿತಿ

ಮೈಸೂರು,ಡಿ.14(ಎಂಕೆ)– ಮೈಸೂರು ನಗರಪಾಲಿಕೆಯಲ್ಲಿ ಕಳೆದ 10 ವರ್ಷಗಳಿಂದ 1366 ಮಂದಿ ಕಾಯಂ ಅಲ್ಲದ ಪೌರಕಾರ್ಮಿಕರು ದುಡಿಯುತ್ತಿದ್ದಾರೆ ಎಂದು ಸಚಿವ ಬಿ.ಎಸ್.ಸುರೇಶ್ ಮಾಹಿತಿ ನೀಡಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಚುಕ್ಕೆ ಪ್ರಶ್ನೆ ವೇಳೆ ಮೈಸೂರು ನಗರಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಯಂ ಅಲ್ಲದ ಪೌರಕಾರ್ಮಿಕ ಸಂಖ್ಯೆ, ಅವರಿಗೆ ನೀಡುತ್ತಿರುವ ಸಂಬಳ, ಕಾಯಂಗೊಳಿಸಲು ಸರ್ಕಾರದ ಮುಂದಿರುವ ಸವಾಲುಗಳನ್ನು ಕುರಿತು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಪ್ರಶ್ನಿಸಿದ್ದಾರೆ.

ಶಾಸಕರ ಪ್ರಶ್ನೆಗಳಿಗೆ ಉತ್ತರಿಸಿರುವ ಸಚಿವರು, ಕಾಯಂ ಅಲ್ಲದ ಪೌರಕಾರ್ಮಿಕರಿಗೆ ಇಎಸ್‌ಐ ಮತ್ತು ಪಿಎಫ್ ಸೇರಿ 21,115 ರೂ. ಹಾಗೂ ಸಂಕಷ್ಟ ಭತ್ಯೆ 2000 ರೂ. ಸೇರಿ ಒಟ್ಟು 24,115 ರೂ. ನೀಡಲಾಗುತ್ತಿದೆ.



ಬಿ.ಎಸ್.ಸುರೇಶ್

ಖಾಯಂಗೊಳಿಸಿದಲ್ಲಿ 35,453 ರೂ. ಮಾಸಿಕ ವೇತನ ನೀಡಬೇಕಾಗುತ್ತದೆ. 2017, 2022, 2023 ಮತ್ತು 2024ನೇ ಸಾಲಿನಲ್ಲಿ ವಿಶೇಷ ನೇಮಕಾತಿ ಮುಖೇನ ಹಂತಹಂತವಾಗಿ ಕಾಯಂಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಮೈಸೂರು ಪಾಲಿಕೆಯಲ್ಲಿ ಕಾಯಂ ಅಲ್ಲದ ಪೌರಕಾರ್ಮಿಕರನ್ನು ಕಾಯಂಗೊಳಿಸಿದ್ದಲ್ಲಿ ಒಬ್ಬರಿಗೆ ಹೆಚ್ಚುವರಿಯಾಗಿ 11,338 ರೂ. ಹಾಗೂ ವಾರ್ಷಿಕವಾಗಿ 18,58,52,496 ರೂ. ಹೊರೆಯಾಗಲಿದೆ. ಬಿಬಿಎಂಪಿ ಸೇರಿದಂತೆ 24,005 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಿ, ಭರ್ತಿ ಮಾಡಲು ಸಾಧ್ಯವಾಗದೆ ಉಳಿದಿರುವ 2127 ಹುದ್ದೆಗಳನ್ನು ನೇರ ನೇಮಕಾತಿ ಮುಖೇನ ಕಾಯಂಗೊಳಿಸಲು ಅನುಮತಿ ನೀಡಲಾಗಿದೆ. ಅದರಲ್ಲಿ ರಾಜ್ಯದ ಪಾಲಿಕೆಗಳಲ್ಲಿ 327 ಪೌರಕಾರ್ಮಿಕ ಹುದ್ದೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಮುಕ್ತ ಯೋಗಾಸನ ಸ್ಪರ್ಧೆ ವಿಜೇತ



ಸ್ವಾಮಿ ವಿವೇಕಾನಂದ ಕನ್ನಡ ಯುವ ಯೋಗ ಬಳಗ ಮಂಡ್ಯ ವತಿಯಿಂದ ಆಯೋಜಿಸಿದ್ದ ದಕ್ಷಿಣ ರಾಜ್ಯಗಳ ಮುಕ್ತ ಯೋಗಾಸನ ಸ್ಪರ್ಧೆಯಲ್ಲಿ ಅನಂತಗೀತ ವಿದ್ಯಾಲಯದ ವಿದ್ಯಾರ್ಥಿ ಯಶಸ್ ರಾಮ್ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದಿದ್ದಾನೆ. ಶಾಲೆ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ನಿರ್ದೇಶಕರಾದ ಶ್ರೀಮತಿ ಮಂಜುಳಾ, ಕಾರ್ಯದರ್ಶಿ ಗೀತಾ ಅನಂತರಾಮಯ್ಯ, ಮುಖ್ಯ ಶಿಕ್ಷಕ ಲೋಕೇಶ್ ಹೆಚ್.ಪಿ., ದೈಹಿಕ ಶಿಕ್ಷಕ ಜಗದೀಶ್, ಶಿಕ್ಷಕರಾದ ಶಿಲ್ಪ, ವಿದ್ಯಾರ್ಥಿಗಳು, ಪೋಷಕರು ಅಭಿನಂದಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ರೋಟರಿ ಮೈಸೂರು ನಾರ್ಥ್ :** ರೊಮೈನೊ ಜಿಲ್ಲಾ ಕ್ರೀಡಾಕೂಟ, ಉದ್ಘಾಟನೆ: ಜಿಲ್ಲಾ ಗವರ್ನರ್ ವಿಕ್ರಂ ದತ್ತ, ಮುಖ್ಯ ಅತಿಥಿಗಳು: ಕೆ.ಪಿ.ನಾಗೇಶ್, ಸಂಸದ ಯದುವೀರ್ ಒಡೆಯರ್, ಸತೀಶ್ ಬೋಲಾರ್, ಎಂ. ರಾಜೀವ್, ಕೇಶವ್ ಪ್ರಕಾಶ್, ಆನಂದ ಶೆಟ್ಟಿ, ವಿಜಯ್ ಕುಮಾರ್ ಅಮ್ಮೆ, ಕೃಷ್ಣ ಶೆಣೈ, ಪ್ರವೀಣ್ ಪಾಲ್, ಬಿ.ನಾಗರಾಜ್, ಸ್ಥಳ: ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನ, ಬೆಳಗ್ಗೆ 7.30ಕ್ಕೆ.

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್:** ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30 ರಿಂದ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 10ರಿಂದ ರಥೋತ್ಸವ, ಗಣಪತಿ ಹೋಮ, ವಿಷ್ಣು ಸಹಸ್ರನಾಮ ಹೋಮ, ಶ್ರೀ ಭಾವಸಾರ ಕ್ಷತ್ರಿಯ ಭಜನಾ ಮಂಡಳಿ ಅವರಿಂದ ಅಖಂಡ ಭಜನೆ, ಮಧ್ಯಾಹ್ನ 1ಕ್ಕೆ ಅನ್ನಪೂರ್ಣೇಶ್ವರಿ ಪೂಜೆ, ಅನ್ನಸಂತರ್ಪಣೆ ಕಾರ್ಯಕ್ರಮ, ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ಸರ್ಕಾರಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು ಯೋಗ ಒಕ್ಕೂಟ :** ಉಚಿತ ಆರೋಗ್ಯ ತಪಾಸಣೆ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್, ರಾಮಕೃಷ್ಣನಗರ, ಬೆಳಗ್ಗೆ 8.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ಕಾಯಿಲೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ತರಳಬಾಳು ಶಿಕ್ಷಣ ಕೇಂದ್ರ :** ಬೆಳಗ್ಗೆ 9ಕ್ಕೆ ಬಹುಮಾನ ವಿತರಣೆ, ಪ್ರತಿಭಾ ಪುರಸ್ಕಾರ, ವಾರ್ಷಿಕೋತ್ಸವ, ಬಹುಮಾನ ವಿತರಣೆ : ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಮುಖ್ಯ ಅತಿಥಿಗಳು : ನಿವೃತ್ತ ಸಸ್ಯಶಾಸ್ತ್ರ ಪ್ರಾಧ್ಯಾಪಕ ಡಾ.ಜಿ.ಆರ್. ಶಿವಮೂರ್ತಿ, ಅಧ್ಯಕ್ಷತೆ : ತರಳಬಾಳು ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಡಿ. ನಾಗೇಂದ್ರಪ್ಪ, ಉಪಸ್ಥಿತರು: ತರಳಬಾಳು ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿ. ಆನಂದಪ್ಪ; ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಎಡಿಸಿ ಡಾ.ಪಿ. ಶಿವರಾಜು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸಮಾರೋಪ ಭಾಷಣ : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಿ. ನಾಗೇಂದ್ರಪ್ಪ, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ.

■ **ಹವೀಕ ಸಂಘ:** ಬೆಳಗ್ಗೆ 9.30ರಿಂದ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ.ಗಿರಿಧರ ಖಜೆ, ಉಪಸ್ಥಿತರು : ಡಾ.ಗುರುಪಾದ ಕೆ. ಹೆಗಡೆ, ಬೇತಾ ಕೃಷ್ಣ ಭಟ್ಟ, ರಾಮಚಂದ್ರ ಭಟ್ಟ, ಡಿ.ಎನ್.ಕೃಷ್ಣಮೂರ್ತಿ; ಮಧ್ಯಾಹ್ನ 2 ರಿಂದ ದಿಯಾ ಹೆಗಡೆ ಅವರಿಂದ ಚಲನಚಿತ್ರ ಗೀತೆ, ವಿದುಷಿ ಜ್ಯೋತಿ ಹೆಗಡೆ ಅವರಿಂದ ಭರತನಾಟ್ಯ, ಸ್ಥಳ: ಸಂಘದ ಆವರಣ, ಬೋಗಾದಿ 2ನೇ ಹಂತ.

■ **ವಿಶ್ವ ಹಿಂದೂ ಪರಿಷತ್ :** ಸಾಮಾಜಿಕ ಸಾಮರಸ್ಯ ರಥಯಾತ್ರೆ, ಉಪಸ್ಥಿತರು : ಶ್ರೀ ಸೋಮೇಶ್ವರಾ ನಂದ ಸ್ವಾಮೀಜಿ, ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಸ್ಥಳ: ಚಾಮುಂಡಿಬೆಟ್ಟ, ಬೆಳಗ್ಗೆ 9.30 ರಿಂದ.

■ **ಭಾರತೀ ಯೋಗಧಾಮ, ಅರ್ಧಮಂಡಲೋತ್ಸವ:** ಬೆಳಗ್ಗೆ 9.30ಕ್ಕೆ ಉದ್ಘಾಟನೆ ಮತ್ತು ಪುಸ್ತಕ ಲೋಕಾರ್ಪಣೆ, ಅಧ್ಯಕ್ಷತೆ: ಅಷ್ಟಾಂಗಯೋಗ ವಿಜ್ಞಾನ ಮಂದಿರಮ್ ಅಧ್ಯಕ್ಷ ಡಾ.ಟಿ.ಶ್ರೀನಿವಾಸ, ಮುಖ್ಯ ಅತಿಥಿಗಳು: ವಿದ್ವಾಂಸ ವಿದ್ಯಾವಾಚಸ್ಪತಿ ಉಮಾಕಾಂತ ಭಟ್, ಲೇಖಕ ರಂಗಸ್ವಾಮಿ ಮೂಕನಹಳ್ಳಿ, ಬೆಳಗ್ಗೆ 11.30ಕ್ಕೆ ದೈವ ಮತ್ತು ಪುರುಷ ಪ್ರಯತ್ನ, ವಿದ್ವಾಂಸರಿಂದ ವಿವಿಧ ಶಾಸ್ತ್ರ ವಿಚಾರ–ಮಂಥನ, ಅಧ್ಯಕ್ಷತೆ : ಲೇಖಕ ಪ್ರೊ. ಕೆ.ಎಸ್. ಕಣ್ಣನ್, ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಭಾರತೀ ಯೋಗಧಾಮ ಸಂಸ್ಥಾಪಕ ಡಾ. ಕೆ.ಎಲ್. ಶಂಕರನಾರಾಯಣ ಜೋಯಿಸ್, ಮುಖ್ಯ ಅತಿಥಿಗಳು : ಎನ್.ರವಿಶಂಕರ್, ಡಾ.ಎನ್. ಸುರೇಶ್, ಎ. ವಿಶ್ವನಾಥ್, ಸ್ಥಳ: ವಿಜಯಗಿರಿ, ಭಾರತೀ ಯೋಗಧಾಮ, ಉತ್ತನಹಳ್ಳಿ.

■ **ಮೈಸೂರು ಯೋಗ ಒಕ್ಕೂಟ :** ಒಕ್ಕೂಟದ 24ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಆರೋಗ್ಯ ಸಪ್ತಾಹ ಕಾರ್ಯಕ್ರಮ, ಸ್ಥಳ: ಮೈಸೂರು ಯೋಗ ಒಕ್ಕೂಟ, ಕೆ.ಆರ್.ಮೊಹಲ್ಲಾ, ಬೆಳಗ್ಗೆ 10ರಿಂದ.



ಇಂದಿನ ಪಂಚಾಂಗ

15.12.2024 ಭಾನುವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಮೃಗಶಿರ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್ ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ:** ವಿಶ್ವ ಅಂಗವಿಕಲರ ದಿನಾಚರಣೆ ಹಾಗೂ 3ನೇ ವರ್ಷದ ಮಾನ್ಯತಾ ದಿನದ ಸಮಾರೋಪ ಸಮಾರಂಭ, ಉದ್ಘಾಟನೆ: ಜಿಲ್ಲಾ ಪಂಚಾಯತ್ ಸಿಇಓ ಕೆ.ಎಂ.ಗಾಯತ್ರಿ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಡಾ.ಬಿ.ಶರಣಪ್ಪ, ಮುಖ್ಯ ಅತಿಥಿಗಳು: ಅಂಗವಿಕಲರ ಅಧಿನಿಯಮದ ಆಯುಕ್ತ ದಾಸ್ ಸೂರ್ಯವಂಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಬಿ.ಬಸವರಾಜು, ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ಶಂಕರಗೌಡ ಪಾಟೀಲ್, ಸ್ಥಳ: ಬೂದ ಗುಂಟೆ ಚಾರಿಟಬಲ್ ಟ್ರಸ್ಟ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ನಿರ್ದಿಗಂತ :** ಶಾಲಾರಂಗ ಮಕ್ಕಳ ಹಬ್ಬ, ಬೆಳಗ್ಗೆ 10ಕ್ಕೆ ಮೈಸೂರಿನ ಕಲಿಯುವ ಮನೆ ಮಕ್ಕಳಿಂದ ಬೆಳಕಿನ ಕಡೆಗೆ ನಾಟಕ ಪ್ರದರ್ಶನ, ಮಧ್ಯಾಹ್ನ 12ಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಜಕ್ಕನಹಳ್ಳಿ ಮಕ್ಕಳಿಂದ 'ಪ್ರೀತಿಯ ಕಾಳು' ನಾಟಕ ಪ್ರದರ್ಶನ, ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ, ಸಂಜೆ 7ಕ್ಕೆ ಡಾ. ಸವಿತಾರಾಣಿ ನಿರ್ದೇಶನದ 'ರಸೀದಿ ಟಿಕೆಟ್' ನಾಟಕ ಪ್ರದರ್ಶನ, ಸ್ಥಳ:ಕಲಾಮಂದಿರದ ಕಿರು ರಂಗಮಂದಿರ.

■ **ದಿ ಬಲಿಜ ಸಂಘಂ:** ವಧು–ವರರ ಸಮಾವೇಶ, ಸ್ಥಳ: ಸಂಘದ ಆವರಣ, ಬೆಳಗ್ಗೆ 10ಕ್ಕೆ.

■ **ಕಲಾಸೌರಭ :** ವೇಣು–ಗಾನ–ನೃತ್ಯ ಸಂಭ್ರಮ, ಅಧ್ಯಕ್ಷತೆ : ವಿದುಷಿ ಡಾ. ಸುಕನ್ಯಾ ಪ್ರಭಾಕರ್, ಮಾ. ಭರತವರ್ಷ ಕೆ. ಅಡಿದಂ ಅವರಿಂದ ವೇಣುವಾದನ, ಕು. ಭೂಮಿ ಕೆ. ಅಡಿದಂ –ಗಾಯನ, ಕು. ಶ್ರೀಲಲಿತ–ಪಿಟೀಲು, ಮಾ. ಭುವನ್ ರವಿಶಂಕರ್–ಮೃದಂಗ, ಡಾ. ಕೆ.ಎಸ್. ಪವಿತ್ರ ಅವರಿಂದ ಶ್ರೀ ರಾಮಾಯಣ ದರ್ಶನಂ ಕುರಿತು ಉಪನ್ಯಾಸ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್, ಮಕ್ಕಳ ಕಲಾ ಸಾಹಿತ್ಯ ಪರಿಷತ್ತು:** ಮಕ್ಕಳ ದಿನಾಚರಣೆ ಪ್ರಯುಕ್ತ ಮಕ್ಕಳ ಕಲಾ ಸಾಹಿತ್ಯೋತ್ಸವ, ಉದ್ಘಾಟನೆ: ಕು. ನಾದಶ್ರೀ ಭಟ್, ಅಧ್ಯಕ್ಷತೆ: ಕು. ಸಮನ್ವಿತ ರಘುನಂದನ್, ಮುಖ್ಯ ಅತಿಥಿಗಳು: ಚಿ.ಅಭಯ ಸಿಂಹ, ಉಪಸ್ಥಿತರು: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಲೇಖಕ ಎಸ್.ರಾಮಪ್ರಸಾದ್, ಡಾ.ಕೆ.ರಘುರಾಂ ವಾಜಪೇಯಿ, ಡಾ.ಅನುಸೂಯ ಗೋಪಾಲ್, ಸುಮತಿ ಸುಬ್ರಹ್ಮಣ್ಯ, ಎಂ.ಎಸ್.ಕೌಸಲ್ಯ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 10.30 ರಿಂದ.

■ **ಪ್ರಜಾಪತಿ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ವಿಶೇಷ ವ್ಯಕ್ತಿಗಳಿಗೆ ಸನ್ಮಾನ ಸಮಾರಂಭ, ಸಾನ್ನಿಧ್ಯ : ಮುಖ್ಯ ಸಂಚಾಲಕರಾದ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ, ಮುಖ್ಯ ಅತಿಥಿಗಳು: ಮಾಜಿ ಸಚಿವ ಡಾ.ಕೆ.ಸಿ. ನಾರಾಯಣ ಗೌಡ, ಜಿಲ್ಲಾ ಕೇಂದ್ರ ಕಾರಾಗೃಹ ಮುಖ್ಯ ಅಧೀಕ್ಷಕ ಪಿ.ಎಸ್. ರಮೇಶ್, ಡಾ.ನಾಗರಾಜ್ ವಿ.ಬೈರಿ, ಡಾ. ಇ.ವಿ. ಸ್ವಾಮಿನಾಥನ್, ಡಾ.ಇ.ವಿ.ಗಿರೀಶ್, ಸ್ಥಳ: ಜ್ಞಾನ ಸರೋವರ ರಿಟ್ರೀಟ್ ಸೆಂಟರ್, ಲಿಂಗದೇವರಕೊಪ್ಪಲು, ಬೆಳಗ್ಗೆ 10.30ಕ್ಕೆ.

■ **ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ :** ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ಸ್ಥಳ: ಸಂಘದ ಆವರಣ, ಡಿ.ಬನುಮಯ್ಯ ರಸ್ತೆ, ಬೆಳಗ್ಗೆ 10.30ಕ್ಕೆ

■ **ಮಾನವ ಹಕ್ಕುಗಳ ಸೇವಾ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಮಾನವ ಹಕ್ಕುಗಳ ದಿನಾಚರಣೆ ಪ್ರಯುಕ್ತ ಕಾನೂನು ಅರಿವು ನೆರವು ಕಾರ್ಯಕ್ರಮ, ಸಾಧಕರಿಗೆ ಕರ್ನಾಟಕ ಚೇತನ ರಾಜ್ಯ ಪ್ರಶಸ್ತಿ ಪ್ರದಾನ, ಉಚಿತ ಕಣ್ಣು ತಪಾಸಣೆ, ಉಚಿತ ಕನ್ನಡಕ ವಿತರಣೆ, ಅನ್ನದಾತ ರೈತರಿಗೆ, ಮಾಜಿ ವೀರ ಯೋಧರಿಗೆ ಸನ್ಮಾನ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ವಿಶೇಷ ಆಹ್ವಾನಿತರು: ಮುಖ್ಯ ಕಾನೂನು ನೆರವು ಅಭಿರಕ್ಷಕ ಎಂ.ಎಸ್.ನವೀನ, ಸಹಾಯಕ ಕಾನೂನು ನೆರವು ಅಭಿರಕ್ಷಕ ಹುಲಗಪ್ಪ ಹೆಚ್.ಬೈಯ್ಯಾಪುರ್, ಉದ್ಘಾಟನೆ: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಅಧ್ಯಕ್ಷತೆ: ಮಾನವ ಹಕ್ಕುಗಳ ಸೇವಾ ಸಮಿತಿ ರಾಜ್ಯಾಧ್ಯಕ್ಷ ಡಾ.ಸೀತಾ ರಾಮೇಗೌಡ, ವಿಶೇಷ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಡಾ.ಸಂದೀಪ್ ಪಾಂಡೆ, ಡಾ.ಲತಾಶೆಟ್ಟಿ ಇತರರು, ಸ್ಥಳ: ಪುರಭವನ, ಬೆಳಗ್ಗೆ 11ಕ್ಕೆ.

■ **ಪ್ರಕಾಶ್ ಪ್ರದರ್ಶಕ ಕಲೆಗಳ ಟ್ರಸ್ಟ್ :** ಧ್ವನಿ ಕಾರ್ಯಕ್ರಮ, ವಿದ್ವಾನ್ ಎ.ಪಿ.ಕೃಷ್ಣಪ್ರಸಾದ್ ಅವರ ಶಿಷ್ಯರಿಂದ ವೀಣಾ ವಾದನ, ವಿದ್ವಾನ್ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ವಿಕ್ರಂ ಭಾರದ್ವಾಜ್–ಮೃದಂಗ, ಸ್ಥಳ: 33, ಸೂರ್ಯ ಬಡಾವಣೆ, ಶ್ರೀರಾಂಪುರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀ ಕ್ಷೇತ್ರಗೊಮ್ಮಟಗಿರಿ ಸೇವಾ ಸಮಿತಿ :** ಶ್ರೀಕ್ಷೇತ್ರ ಗೊಮ್ಮಟಗಿರಿ ಭಗವಾನ್ ಬಾಹುಬಲಿಸ್ವಾಮಿಯ 75ನೇ ಮಹಾಮಸ್ತಕಾಭಿಷೇಕ ಅಮೃತ ಮಹೋತ್ಸವ, ಜಾತ್ರಾ ಮಹೋತ್ಸವ, ಬೆಳಗ್ಗೆ 11ಕ್ಕೆ ಮಹಾ ಮಸ್ತಕಾಭಿಷೇಕ, ಬೃಹತ್ ಸಮವಸರಣ ನಿರ್ಮಾಣದ ಭೂಮಿಪೂಜೆ, ಅಧ್ಯಕ್ಷತೆ : ಶ್ರೀ ಗೊಮ್ಮಟಗಿರಿ ಸೇವಾ ಸಮಿತಿ ಅಧ್ಯಕ್ಷ ಎಸ್.ಡಿ.ಮನ್ಮಥ್‌ರಾಜ್, ಮುಖ್ಯ ಅತಿಥಿಗಳು: ಶಾಸಕರಾದ ಹೆಚ್.ವಿಶ್ವನಾಥ್, ಮಂಜೇಗೌಡ, ವಿವೇಕಾನಂದ, ಡಾ.ಯತೀಂದ್ರ, ಮಾಜಿ ಶಾಸಕ ಗೋ. ಮಧುಸೂದನ್, ಹಳೇಬೀಡು ಗ್ರಾಮ ಉಪಾಧ್ಯಕ್ಷ ವಿ. ಮಲ್ಲೇಶ್, ಪಿಡಿಓ ರಾಮಣ್ಣ, ಸ್ಥಳ: ಶ್ರೀಕ್ಷೇತ್ರ ಗೊಮ್ಮಟಗಿರಿ, ಇಲವಾಲ.

■ **ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್:** ಶಿಕ್ಷಣ–ಮಾನವತೆ–ಸಂಸ್ಕೃತಿ ಉಳಿಸುವ ಉದ್ದೇಶದಿಂದ ರಾಜ ನೈತಿಕ ಶಾಲೆ ಶಿಬಿರ, ಉಪಸ್ಥಿತರು : ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ, ಎಐಡಿಎಸ್‌ಓ ಉಪಾಧ್ಯಕ್ಷೆ ಅಭಯಾ ದಿವಾಕರ್, ಸ್ಥಳ: ನೃಪತುಂಗ ಶಾಲೆ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ

■ **ಸ್ಕಿನ್ ಅಂಡ್ ಬ್ಯೂಟಿ ಕೇರ್ ಸೆಂಟರ್ :** ಚರ್ಮರೋಗ ತಜ್ಞ ವೈದ್ಯರತ್ನ ಡಾ.ಹೆಚ್.ಹನುಮಂತಪ್ಪ ಅವರ ಚರ್ಮದ ಕಾಯಿಲೆಗಳು ಮತ್ತು ಸಂರಕ್ಷಣೆ ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ, ಕೃತಿ ಲೋಕಾರ್ಪಣೆ : ವಿಶ್ರಾಂತ ಡಿವೈಎಸ್ಪಿ ಜೆ.ಬಿ.ರಂಗಸ್ವಾಮಿ, ಕೃತಿ ಕುರಿತು : ಡಾ.ಜಿ.ಎಂ. ವಾಮದೇವ, ಪ್ರತಿಭಾ ಪುರಸ್ಕಾರ ವಿತರಣೆ : ಡಾ.ಹೆಚ್.ಹನುಮಂತಪ್ಪ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅತಿಥಿಗಳು: ಡಾ.ಎಂ.ಜಿ.ಆರ್. ಅರಸ್, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಹನುಮ ಜಯಂತಿ, ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್, ಬನ್ನಿಮಂಟಪ 'ಸಿ' ಬಡಾವಣೆ, ಹನುಮಂತನಗರ.

■ **ಶ್ರೀಕಾಂತ ವಿದ್ಯಾಸಂಸ್ಥೆಗಳು, ಶ್ರೀಕಾಂತ ಸಂಸ್ಕೃತ ಪಾಠಶಾಲೆ:** ಗೀತಾ ಜಯಂತಿ ಸ್ಪರ್ಧೆಗಳ ಸಮಾರೋಪ ಮತ್ತು ಬಹುಮಾನ ವಿತರಣೆ, ಅಧ್ಯಕ್ಷತೆ : ಕೆ.ಎಸ್. ಪ್ರದೀಪ್ ಕುಮಾರ್, ಮುಖ್ಯ ಅತಿಥಿಗಳು : ಡಾ. ವಿಷ್ಣು ಶರಣದಾಸರು, ಸ್ಥಳ: ವಿದ್ಯಾಸಂಸ್ಥೆಯ ಸಭಾಭವನ, ಮಧ್ಯಾಹ್ನ 2ಕ್ಕೆ.

■ **ಲಯನ್ಸ್ ಇಂಟರ್‌ನ್ಯಾಷನಲ್ ಮಲ್ಟಿಪಲ್ ಡಿಸ್ಟ್ರಿಕ್ಟ್ 317, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ :** ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅವರಿಗೆ ಅಭಿನಂದನೆ, ಸಾನ್ನಿಧ್ಯ: ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವಥನಾರಾ ಯಣ್, ವಿಶೇಷ ಆಹ್ವಾನಿತರು : ಸಂಸದ ಯದುವೀರ್ ಒಡೆಯರ್, ಮಾಜಿ ಸಚಿವ ಹೆಚ್.ವಿಶ್ವನಾಥ್, ಅಧ್ಯಕ್ಷತೆ: ಮಾಜಿ ಜಿಲ್ಲಾ ರಾಜ್ಯಪಾಲ ಲಯನ್ ಕೆ.ದೇವೇಗೌಡ, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 3.30ಕ್ಕೆ

■ **ಪಾವನ ಮೆಲೋಡಿಸ್ :** ಜನಪ್ರಿಯ ಕನ್ನಡ ಚಲನಚಿತ್ರ ಗೀತೆಗಳ ರಸಸಂಜೆ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4ರಿಂದ.

■ **ಮೈಸೂರಿನ ಅಭಿರುಚಿ ಬಳಗ, ಎನ್.ವಿ.ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ :** ಎನ್.ವಿ. ರಮೇಶ್ ಅವರ 'ಸಮಗ್ರ ಸ್ವದೇಶ ಹಾಗೂ ವಿದೇಶ ಪ್ರವಾಸ ಸಾಹಿತ್ಯ' ಕೃತಿಗಳಾದ 'ನನ್ನ ಹೆಮ್ಮೆಯ ಭಾರತ ದೇಶ' ಹಾಗೂ 'ಪ್ರವಾಸಿಯ ಪುಟಗಳು' ಪುಸ್ತಕಗಳ ಲೋಕಾರ್ಪಣೆ, ಲೋಕಾರ್ಪಣೆ : ಆಧ್ಯಾತ್ಮಿಕ ಚಿಂತಕರಾದ ಸುಶೀಲಾ ಶ್ಯಾಮಸುಂದರ್, ಉದ್ಘಾಟನೆ: ಹೈಕೋರ್ಟ್‌ನ ಹಿರಿಯ ನ್ಯಾಯವಾದಿ ದಾವಣಗೆರೆಯ ಡಾ|| ರೇವಣ್ಣ ಬಳ್ಳಾರಿ, ಅಧ್ಯಕ್ಷತೆ : ಸ್ನೇಹ ಸಿಂಚನ ಸಂಸ್ಥೆಯ ಅಧ್ಯಕ್ಷೆ ಮ.ನ. ಲತಾಮೋಹನ್, ಮುಖ್ಯ ಅತಿಥಿಗಳು: ಬೆಳಗಾವಿಯ ಡಾ. ಗುರುದೇವಿ ಹುಲೆಪ್ಪನವರಮಠ, ಪುಸ್ತಕಗಳ ಕುರಿತು :ಉಷಾ ನರಸಿಂಹನ್ ಹಾಗೂ ಪದ್ಮಾ ಆನಂದ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ವಿಶ್ವಮಾನವ ಯೋಗ ಸೇವಾಶ್ರಮ ಟ್ರಸ್ಟ್ :** ದತ್ತಾತ್ರೇಯ ಜಯಂತಿ, ಆರೋಗ್ಯ ಸಪ್ತಾಹ, ಸಾನ್ನಿಧ್ಯ: ಸ್ವಾಮಿ ನಿತ್ಯಾನಂದಪುರಿ, ಅಧ್ಯಕ್ಷತೆ : ಗೋವಿಂದೇಗೌಡ, ಉಪಸ್ಥಿತರು : ಡಾ.ಆರ್.ಡಿ. ದಯಾನಂದ, ಕೆ.ಜಿ. ದೇವರಾಜು, ಎನ್.ಅನಂತ, ಲೋಕೇಶ್, ಕಿರಣ್ ದೇವಯ್ಯ, ಸ್ಥಳ: ವಿಶ್ವಮಾನವ ಯೋಗ ಧ್ಯಾನ ಮಂದಿರ, ಕೆಹೆಚ್‌ಬಿ ಬಡಾವಣೆ, ಸಂಜೆ 4.30 ರಿಂದ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಅನುಭೂತಿ ಮೈಸೂರು :** ಚಾರುಮಂಜೂಷಾ–1, ಅಭ್ಯಾಗತರು: ಲೇಖಕ ಡಾ.ಶಾಂತ ನಾಗರಾಜ್, ಕೃತಿ ಬಿಡುಗಡೆ : ಏಕಾಂಗಿ ಕವಯಿತ್ರಿ, ದೀಪಧಾರಿಣಿ ಏಕ ವ್ಯಕ್ತಿ ಪ್ರದರ್ಶನ, ಅಭಿನಯ : ಶ್ರೀ ವಿದ್ಯಾ ಕಾಮತ್, ನಿರ್ದೇಶನ : ಡಾ. ಶ್ರೀಪಾದ ಭಟ್, ಸ್ಥಳ: ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆ, ವರ್ತುಲ ರಸ್ತೆ, ಸಂಜೆ 5.30ಕ್ಕೆ.

■ **ದೀಕ್ಷಿತ್ ಆರೋಗ್ಯ ಧಾಮ, ಆಯುರ್ವೇದ ಪಂಚ ಕರ್ಮ ಆಸ್ಪತ್ರೆ:** ಹುಣ್ಣಿಮೆ ವಿಶೇಷ ಮಾಸದ ಆನಂದ ಆರೋಗ್ಯ ಕಾರ್ಯಕ್ರಮ, ವಿದ್ವಾನ್ ಕೇಶವ ಮೋಹನ ಕುಮಾರ್ ಅವರಿಂದ ಪಿಟೀಲು, ವಿದ್ವಾನ್ ಟಿ.ರವಿಶಂಕರ್ –ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಡಾ. ಅಜಯ್ ಕೌಶಿಕ್ ಅವರಿಂದ ಮುಂಗೈ, ಮೊಣಕೈಗಳ ಸಾಮಾನ್ಯ ಸಮಸ್ಯೆಗಳು ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ಸಂಜೆ 5.45 ರಿಂದ.

■ **ಇನ್ನೋವೇಟಿವ್:** ಕೆರೆಮನೆ ಶಿವಾನಂದ ಹೆಗಡೆ ನಿರ್ದೇಶನದಲ್ಲಿ ಯುನೆಸ್ಕೋ ಮಾನ್ಯತೆ ಪಡೆದಿರುವ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ ಪ್ರಸ್ತುತ ಯಕ್ಷ ಸಂಭ್ರಮ–2024, ಕವಿ ನಿತ್ಯಾನಂದ ಅವಧೂತ ವಿರಚಿತ ಕನಕಾಂಗಿ ಕಲ್ಯಾಣ ಯಕ್ಷಗಾನ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ:** ಪ್ರತಿ ಹುಣ್ಣಿಮೆಯಂದು ತಿಂಗಳ ತಿಳಿವು ಉಪನ್ಯಾಸ ಕಾರ್ಯಕ್ರಮ, ಆಶೀರ್ವಾದ: ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹರಾಜ್, ತಿಂಗಳ ಅತಿಥಿ: ಡಾ.ವಿ. ಲಕ್ಷ್ಮೀನಾರಾಯಣ, ಉಪಸ್ಥಿತರು: ಡಿ.ಮಾದೇಗೌಡ, ಡಾ.ಯೋಗಣ್ಣ, ಬಸವಣ್ಣ, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣ ವೃತ್ತದ ನೆಲಮಹಡಿ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–274ರ ಅಂಗವಾಗಿ ವಿದುಷಿ ಪೃಥ್ವಿ ಭಾಸ್ಕರ್ ಅವರಿಂದ ಗಾಯನ, ವಿದ್ವಾನ್ ಎಂ.ಪಿ. ಕೃತಿಕ್ ಕೌಶಿಕ್–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ವಿ.ಎಸ್.ರಮೇಶ್–ಮೋರ್ಚಿಂಗ್, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಅಗ್ನಿ ಮತ್ತು ಮಳೆ ನಾಟಕ ಪ್ರದರ್ಶನ, ರಚನೆ : ಗಿರೀಶ್ ಕಾರ್ನಾಡ್, ನಿರ್ದೇಶನ : ಸಾಲಿಯಾನ ಉಮೇಶ್ ನಾರಾಯಣ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ:** ಮಳವಳ್ಳಿ ರಂಗಬಂಡಿ ಪ್ರಸ್ತುತ ಪಡಿಸುವ ಏಕವ್ಯಕ್ತಿ ರಂಗ ಪ್ರಯೋಗ 'ಮಧುರ ಮಂಡೋದರಿ' ಪ್ರದರ್ಶನ, ನಿರ್ದೇಶನ : ಮಧು ಮಳವಳ್ಳಿ, ರಚನೆ : ಪ್ರಸನ್ನಕುಮಾರ್ ಕೆರಗೋಡು, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಲಲಿತಾ ಹೊಸಪ್ಯಾಟಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಶ್ರೇಯಾ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.05 ನಮ್ಮ ಆರೋಗ್ಯ–ಆಯಿಷ್ ಯಶೋಗಾಥೆ ಸರಣಿಯಲ್ಲಿ 'ಬುದ್ಧಿಮಾಂದ್ಯತೆ' ಮತ್ತು 'ಶ್ರವಣ ದೋಷದಿಂದ ಉಂಟಾಗಿರುವ ವಾಕ್ ಮತ್ತು ಭಾಷಾ ತೊಂದರೆ' ಕುರಿತು ಕಾರ್ಯಕ್ರಮ, ಭಾಗವಹಿಸುತ್ತಾರೆ: ಸುಮನಾ.ಹೆಚ್.ಪಿ, ಚಿತ್ಕಲಾ ಶರ್ಮ, ಪಲ್ಲವಿ. ವಿ.ಆರ್, ಅರುಣಾ.ಎನ್, ಮೇದಾ ಬಡಿಗೇರ್ ಮತ್ತು ಶ್ರೀದೇವಿ ಬಡಿಗೇರ್, ನಡೆಸಿಕೊಡುತ್ತಾರೆ: ಬೇದ್ರೆ ಮಂಜುನಾಥ್ ಮತ್ತು ದಿಗ್ವಿಜಯ್. ಬಿ., ಪ್ರಾಯೋಜಕರು –ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಕ್ಯಾನ್ಸರ್ ಕುರಿತ ಮಿಥ್ಯೆಗಳು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಭಾರತೀಯ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.40 ಕನ್ನಡ ಚಿತ್ರಗೀತೆಗಳು, 10.00 ಕೇಳಿ ಗಿಳಿಗಳೇ : ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH-TRISH and Balty boy ನಾವು ಭಾರತೀಯರು 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ' ಭಾಗ –03, 10.45 ಮಕ್ಕಳ ಮಂಟಪ: ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆಯ ಗಾಯಕ, ಅಭಿಜ್ವಲ್. ಎಂ.ಕೆ.ಪರಿಚಯ, ಪ್ರಸ್ತುತಿ: ಎಂ.ಎಸ್.ಭಾರತಿ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ಗ್ರಾಮೀಣ ಮಹಿಳೆಯರ ಬೆಳಕು–ಸಂಜೀವಿನಿ (NRLM) ತುಮಕೂರು ಜಿಲ್ಲೆ ಮಧುಗಿರಿ ತಾಲೂಕು ಗ್ರಾಮ ಪಂಚಾಯಿತಿ ಮಟ್ಟದ ಕಾರ್ಯಕರ್ತೆ ಕೆ.ಎಸ್.ಮಂಜುಳಾ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಚಂದ್ರಮ್ಮ, 12.35 ದೇವರನಾಮ–ಪ್ರತಿಭಾ, 12.45 ಜನಪದ ಸಂಗೀತ–ರತ್ನಮ್ಮ ಮತ್ತು ಸಂಗಡಿಗರಿಂದ ಪಡುವಾಲಮ್ಮನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಒಂದಾದ ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣ ಈ ಕುರಿತು ಮಾಹಿತಿ ನೀಡುತ್ತಾರೆ ಭವ್ಯ ಎನ್., 1.20 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ ಎಸ್.ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಮುತ್ತು, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ದೂರ್ವಾಸಾತಿಥ್ಯ, ಪ್ರಸ್ತುತಿ–ಮಂಗಳೂರು, ಕುಂಪಲದ ಶ್ರೀವರದಾಯಿನಿ ಕೃಪಾಶ್ರಿತ ಕಲಾಸಂಪದದ ಸದಸ್ಯರು, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ– ಕನ್ನಡ ಭಾಷೆಯ ವಿವಿಧ ಮಜಲುಗಳು ಈ ಕುರಿತು ಡಾ.ಎಚ್.ಎಲ್.ಮಲ್ಲೇಶಗೌಡ ಅವರಿಂದ ವಿಚಾರ ಪ್ರಸ್ತಾಪ. ನಿರ್ಮಾಣ – ಅರಕಲಗೂಡು ವಿ. ಮಧುಸೂದನ್, 8.00ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ನಾಟಕಗಳ ನಿರ್ದೇಶಕ, ವಚನ, ತತ್ವಪದಗಳ ಹಾಡುಗಾರ ಗುಂಡ್ಲುಪೇಟೆ ತಾಲೂಕು ಕೊಡಗಾಪುರದ ಕೆ.ಎಸ್.ಮಹದೇವಪ್ಪ ಅವರೊಂದಿಗೆ ಸಂವಾದ, ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 ರಾಷ್ಟ್ರೀಯ ನಾಟಕ : 'ಅಗ್ನಿಪುತ್ರ ಬಿಸ್ಮಿಲ್' ಮೂಲ ಹಿಂದಿ–ವಿನೋದ್‌ಕುಮಾರ್, ಕನ್ನಡ ರೂಪಾಂತರ–ಮಾಲತಿ ಆರ್.ಭಟ್, ನಿರ್ಮಾಣ– ಸೂರ್ಯನಾರಾಯಣ ಭಟ್, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ರಾಮ್ ಶಂಕರ್–ಗಾಯನ

ಮೈಸೂರಲ್ಲಿ ಭಕ್ತಿ ಭಾವದೊಂದಿಗೆ ಕೊಡವರ ಸುಗ್ಗಿಹಬ್ಬ 'ಪುತ್ತರಿ' ಆಚರಣೆ



ಭತ್ತದ ಗದ್ದೆಯಲ್ಲಿ 'ನೆರೆ ಕಟ್ಟ್'(ಭತ್ತದ ಕದಿರು ಕೊಯ್ದು) ಧಾನ್ಯ ಲಕ್ಷ್ಮಿಯನ್ನು ಬರಮಾಡಿಕೊಳ್ಳುತ್ತಿರುವುದು.

ಮೈಸೂರು,ಡಿ.14(ಎಂಕೆ)– ಮೈಸೂರು ಕುವೆಂಪುನಗರದಲ್ಲಿರುವ ಶ್ರೀ ಕಾವೇರಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಮೈಸೂರು ಕೊಡವ ಸಮಾಜದ ವತಿಯಿಂದ ಅತ್ಯಂತ ಸಡಗರ, ಸಂಭ್ರಮ ಹಾಗೂ ಭಕ್ತಿ–ಭಾವದೊಂದಿಗೆ ಕೊಡವರ ಸುಗ್ಗಿ ಹಬ್ಬ 'ಪುತ್ತರಿ ನಮ್ಮೆ(ಹುತ್ತರಿ)' ಆಚರಿಸಲಾಯಿತು.

ಕೊಡವರು ತಮ್ಮ ಆರಾಧ್ಯ ದೇವರಾದ ಇಗ್ಗುತಪ್ಪ ಹಾಗೂ ಕಾವೇರಿ ಮಾತೆಯಲ್ಲಿ ಭಕ್ತಿಯಿಂದ, ರಾಜ್ಯದಲ್ಲಿ ಸಮೃದ್ಧ ಮಳೆಯಾಗಲಿ, ಕೆರೆ–ಕಟ್ಟೆಗಳು ತುಂಬಿ ಹರಿಯಲಿ ಎಂದು ಪ್ರಾರ್ಥಿಸುತ್ತಾ, ಗಾಳಿಯಲ್ಲಿ ಗುಂಡು ಹಾರಿಸಿ, ಹಸನಾಗಿ ಬೆಳೆದು ನಿಂತಿದ್ದ ಭತ್ತದ ಗದ್ದೆಯಲ್ಲಿ ಪೂಜಾ ಕೈಂಕರ್ಯದೊಂದಿಗೆ 'ನೆರೆ ಕಟ್ಟ್'(ಭತ್ತದ ಕದಿರು ಕೊಯ್ದು) ಧಾನ್ಯ ಲಕ್ಷ್ಮಿಯನ್ನು ತಮ್ಮ ಮನೆಗೆ ಒಯ್ದರು.

ಇದಕ್ಕೂ ಮುನ್ನ ಇಗ್ಗುತಪ್ಪ ದೇವರಿಗೆ ಪೂಜೆ ಸಲ್ಲಿಸಿ, ಕೊಡವರ ಸಾಂಪ್ರದಾಯಿಕ ಹಾಡು–ನೃತ್ಯಗಳ ಪ್ರದರ್ಶನದ ಮೂಲಕ ಸುಗ್ಗಿಯ ಸೊಗಡನ್ನು ಸಂಭ್ರಮಿಸಲಾಯಿತು. ಕೆಂಪು ಮತ್ತು ಹಸಿರು ಬಣ್ಣದ ಸೀರೆಯನ್ನುಟ್ಟು ಕೊಡವ ಮಹಿಳೆಯರು ಕಂಗೊಳಿಸಿದರೆ, ಕಪ್ಪು ಕುಪ್ಯ(ಕೋಟು) ಹಾಕಿಕೊಂಡು, ಸೊಂಟದಲ್ಲಿ ಸುತ್ತಿದ್ದ ಚೆಲೆ(ಸೊಂಟದ ಪಟ್ಟಿ)ಗೆ ಪೀಚ ಕತ್ತಿಯನ್ನಿಟ್ಟು, ತಲೆಯ ಮೇಲೆ ಮಂಡೆ ತುಣಿ (ಪೇಟ) ಧರಿಸಿ ಶಿಸ್ತಿನ ಸಿಪಾಯಿಗಳಂತೆ ಕಂಗೊಳಿಸುತ್ತಿದ್ದ ಕೊಡವರು ಭಕ್ತಿಯಿಂದ ಭಾವಪರವಶರಾದರು. 'ಪೊಲಿ ಪೊಲಿಯೇ ದೇವ' ಎಂಬ ಉದ್ಘೋಷದೊಂದಿಗೆ ಆರಂಭವಾದ ಪುತ್ತರಿ ಸಂಭ್ರಮಕ್ಕೆ ಹಸಿರು ಸೀರೆಯನ್ನುಟ್ಟು ಕಂಗೊಳಿಸುತ್ತಿದ್ದ ಯುವತಿಯರು, 'ಕೊಡವ ಕುಲ ದೇವಿ ಕಾವೇರಿ' ಹಾಡಿಗೆ ಅತ್ಯಾಕರ್ಷಕ ನೃತ್ಯ ಪ್ರದರ್ಶನ ಮಾಡುವ ಮೂಲಕ ಹಬ್ಬಕ್ಕೆ ಮೆರಗು ತಂದರು. ನಂತರ ಕೋಲಾಟ, ಬೊಳ ಕಾಟ್, ಕತ್ತಿಯಾಟ್, ಬಾಳೋ ಪಾಟ್, ಪರೆಯಕಳಿ, ವಾಲಗ ತಾಟ್, ಕೊಡವ ಪಾಟ್ ಇನ್ನಿತರೆ ಕೊಡವ ಸಾಂಪ್ರದಾಯಿಕ ನೃತ್ಯಗಳ ಪ್ರದರ್ಶನ ರಮಣೀಯವಾಗಿತ್ತು.

ನಂತರ ಸಮೀಪದಲ್ಲೇ ಬೆಳೆದಿದ್ದ ಭತ್ತದ ಗದ್ದೆಗೆ ಒಟ್ಟಾಗಿ ತೆರಳಿ, ಗದ್ದೆಗೆ ಪೂಜೆ ಸಲ್ಲಿಸಿದರು. ಬಳಿಕ ಗಾಳಿಯಲ್ಲಿ ಗುಂಡು ಹಾರಿಸಿ, ಇಗ್ಗುತಪ್ಪ ದೇವರ ಸ್ಮರಣೆಯೊಂದಿಗೆ ನೆರೆ ಕಟ್ಟಿ ಧಾನ್ಯ ಲಕ್ಷ್ಮಿಯನ್ನು ಬರಮಾಡಿಕೊಂಡರು. ಕಡೆಗೆ ಎಲ್ಲರಿಗೂ ತಂಬಿಟ್ಟು ಪ್ರಸಾದ ವಿನಿಯೋಗ ಮಾಡಲಾಯಿತು.

ಮೈಸೂರು ಕೊಡವ ಸಮಾಜ ಅಧ್ಯಕ್ಷ ಪೊಂಜಾಂಡ ಎ.ಗಣಪತಿ, ಉಪಾಧ್ಯಕ್ಷ ಮಾಚಿಮಾಡ ಪಿ.ನಾಣಯ್ಯ, ಗೌರವ ಕಾರ್ಯದರ್ಶಿ ಕೆಟೋಳಿರ ಎ.ಬೆಳ್ಳಿಯಪ್ಪ, ಜಂಟಿ ಕಾರ್ಯದರ್ಶಿ ಅಜ್ಜಿಕುಟ್ಟಿರ ಡಯಾನ ಪೂವಯ್ಯ, ಖಜಾಂಚಿ ಇಟ್ಟಿರ ಜಿ.ಕಾಶಿಯಪ್ಪ ಸೇರಿದಂತೆ ಕೊಡವ ಸಮಾಜದ ಕಮಿಟಿ ಸದಸ್ಯರು, ಹಿರಿಯ ನಾಗರಿಕರು, ಮಹಿಳೆಯರು ಭಾಗವಹಿಸಿದ್ದರು.

ಕಾಲ್ತುಳಿತ ಪ್ರಕರಣ: ಅಲ್ಲು ಅರ್ಜುನ್ ಜೈಲಿನಿಂದ ಬಿಡುಗಡೆ




ಹೈದರಾಬಾದ್, ಡಿ.14– ಪುಷ್ಪ–2 ಚಿತ್ರ ಬಿಡುಗಡೆ ವೇಲೆ ಸಂಧ್ಯಾ ಥಿಯೇಟರ್ ಮುಂದೆ ನಡೆದ ಕಾಲ್ತುಳಿತದಲ್ಲಿ ಅಭಿಮಾನಿ ಮಹಿಳೆ ಮೃತಪಟ್ಟ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದ ಖ್ಯಾತ ನಟ ಅಲ್ಲು ಅರ್ಜುನ್‌ಗೆ ಹೈದರಾಬಾದ್ ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದು, ಶನಿವಾರ ಬೆಳಿಗ್ಗೆ ಅವರನ್ನು ಶನಿವಾರ ಹೈದರಾಬಾದ್ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಯಿತು.

ಬಿಡುಗಡೆ ಬೆನ್ನಲ್ಲೇ ಅವರ ನಿವಾಸದ ಮುಂದೆ ಬಿಗಿ ಬಂದೋಬಸ್ತ್ ವ್ಯವಸ್ಥೆಗೊಳಿಸಲಾಗಿದೆ. 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದ ಬಳಿಕ ಶುಕ್ರವಾರ ಅವರನ್ನು ಚಂಚಲ್‌ಗುಡಾ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ಯಲಾಗಿತ್ತು. ಆ ಬಳಿಕ 50 ಸಾವಿರ ರೂಪಾಯಿ ವೈಯಕ್ತಿಕ ಬಾಂಡ್ ಆಧಾರದಲ್ಲಿ ಅವರಿಗೆ ಮಧ್ಯಂತರ ಜಾಮೀನನ್ನು ಕೋರ್ಟ್ ಮಂಜೂರು ಮಾಡಿತ್ತು. ಖ್ಯಾತ ನಟನ ಮಾವ ಕಂಚರ್ಲ ಚಂದ್ರಶೇಖರ ರೆಡ್ಡಿ, ಅಲ್ಲು ಅರ್ಜುನ್ ಅವರನ್ನು ಮನೆಗೆ ಕರೆದೊಯ್ಯಲು ಜೈಲಿಗೆ ಆಗಮಿಸಿದರು.

ಇದಕ್ಕೂ ಮುನ್ನ ನ್ಯಾಯಾಲಯ ನೀಡಿದ ಜಾಮೀನು ಆದೇಶವನ್ನು ಜೈಲು ಅಧಿಕಾರಿಗಳು ಪಾಲಿಸುತ್ತಿಲ್ಲ ಎಂದು ಅರ್ಜುನ್ ಪರ ವಕೀಲ ಅಶೋಕ್ ರೆಡ್ಡಿ ಟೀಕಿಸಿದ್ದರು. ಹೈಕೋರ್ಟ್ ಆದೇಶದ ಪ್ರತಿಯಲ್ಲಿ ಅರ್ಜುನ್ ಅವರನ್ನು ಬಿಡುಗಡೆ ಮಾಡುವಂತೆ ಜೈಲು ಅಧೀಕ್ಷರಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದ್ದು, ಅಧೀಕ್ಷಕರು ಕೂಡಾ ಬಿಡುಗಡೆಗೆ ಸೂಚಿಸಿದ್ದರು. ಆದರೂ ಜೈಲಿನ ಅಧಿಕಾರಿಗಳು ಬಿಡುಗಡೆ ಮಾಡುತ್ತಿಲ್ಲ ಎಂದು ವಕೀಲರು ಹೇಳಿಕೆ ನೀಡಿದ್ದರು.

ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಆಸ್ಪತ್ರೆಗೆ ದಾಖಲು

ನವದೆಹಲಿ: ಬಿಜೆಪಿ ಹಿರಿಯ ನಾಯಕ ಹಾಗೂ ಮಾಜಿ ಉಪ ಪ್ರಧಾನಿ ಎಲ್ ಕೆ ಅಡ್ವಾಣಿ ಅವರು ಮತ್ತೆ ಆಸ್ಪತ್ರೆಗೆ ದಾಖಲಾಗಿದ್ದಾರೆ.



ಅಡ್ವಾಣಿಯವರ ಆರೋಗ್ಯದಲ್ಲಿ ಏರುಪೇರಾದ ಕಾರಣ ಇಂದು ಬೆಳಿಗ್ಗೆ ನವದೆಹಲಿಯ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದು ಬಂದಿದೆ. ಈ ಹಿಂದೆಯೂ ಅಡ್ವಾಣಿ ಅವರನ್ನು ಅಪೋಲೋ ಆಸ್ಪತ್ರೆ ದಾಖಲಾಸಲಾಗಿತ್ತು. ಆರೋಗ್ಯ ಸುಧಾರಿಸಿದ ಬಳಿಕ ಬಿಡುಗಡೆಗೊಂಡಿದ್ದರು. ಇದೀಗ ಮತ್ತೆ ಏರುಪೇರು ಕಂಡು ಬಂದಿದ್ದು, ಮತ್ತೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇದೀಗ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿವೆ.

ಇದು ಜುಲೈ ನಂತರ ಅವರ ನಾಲ್ಕನೇ ಬಾರಿಗೆ ಆಸ್ಪತ್ರೆಗೆ ದಾಖಲಾಗಿದೆ. ಅವರು ಈ ಹಿಂದೆ ಅಪೋಲೋ ಆಸ್ಪತ್ರೆ ಮತ್ತು ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಎರಡರಲ್ಲೂ ಚಿಕಿತ್ಸೆ ಪಡೆದಿದ್ದರು. ಈ ನಡುವೆ ಬಿಜೆಪಿ ವಕ್ತಾರ ಕೆ ಕೃಷ್ಣ ಸಾಗರ್ ರಾವ್ ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ.

ಮನೆ ಡೋರ್‌ಲಾಕ್ ಮೀಟಿ 11 ಲಕ್ಷ ರೂ. ನಗದು ಕಳವು

ಮೈಸೂರು, ಡಿ.14(ಎಸ್‌ಬಿಡಿ)– ಮನೆಯ ಡೋರ್‌ಲಾಕ್ ಮೀಟಿ 11 ಲಕ್ಷ ರೂ. ಕಳ್ಳತನ ಮಾಡಿರುವ ಘಟನೆ ಮೈಸೂರಿನ ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಇಲವಾಲ ಹೋಬಳಿ ಮೈದನಹಳ್ಳಿ ನಿವಾಸಿ, ವಿದ್ಯುತ್ ಗುತ್ತಿಗೆದಾರ ಡಿ.ಕೃಷ್ಣ ಅವರು ಪತ್ನಿ ವಿಜಯ ಅವರೊಂದಿಗೆ ಡಿ.12ರಂದು ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ತಮಿಳುನಾಡಿನ ಮೆಟ್ಟೂರಿನಲ್ಲಿ ನೆಲೆಸಿರುವ ಮಗನ ಮನೆಗೆ ಹೋಗಿದ್ದರು. ಮರುದಿನ ಬೆಳಗ್ಗೆ ಎದುರು ಮನೆಯವರು ಕರೆ ಮಾಡಿ ನಿಮ್ಮ ಮನೆ ಬಾಗಿಲು ಅರ್ಧ ತೆರೆದಿದೆ ಎಂದು ತಿಳಿಸಿದ್ದರು.

ಕೂಡಲೇ ತಮಿಳುನಾಡಿನಿಂದ ಹೊರಟು ಸಂಜೆ ವೇಳೆಗೆ ಮನೆಗೆ ಬಂದು ನೋಡಿದಾಗ ಮುಂಬಾಗಿಲಿನ ಬೀಗವನ್ನು ಮೀಟಲಾಗಿತ್ತು. ಮನೆಯ ಎರಡು ಕೊಠಡಿಯಲ್ಲೂ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಗಾಡ್ರೇಜ್ ಬೀರುವಿನ ಬೀಗ ಮೀಟಿ ಅದರೊಳಗಿದ್ದ 11 ಲಕ್ಷ ರೂ. ಕಳ್ಳತನವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಕೃಷ್ಣ ಅವರು ನೀಡಿದ ದೂರಿನನ್ವಯ ಇಲವಾಲ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಕಳ್ಳರ ಪತ್ತೆಗೆ ಕ್ರಮ ವಹಿಸಿದ್ದಾರೆ.

ಜೆಡಿಎಸ್ ಸದಸ್ಯತ್ವ ನೋಂದಣಿಗೆ ಚಾಲನೆ



ಜೆಡಿಎಸ್ ಕಚೇರಿಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸದಸ್ಯತ್ವ ನೋಂದಣಿಗೆ ಶನಿವಾರ ಚಾಲನೆ ನೀಡಲಾಯಿತು.

ಮೈಸೂರು, ಡಿ.14(ಎಂಕೆ)– ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಕ್ಷದ ಸದಸ್ಯತ್ವ ನೋಂದಣಿ ಹಾಗೂ ಬೂತ್ ಸಮಿತಿ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ ಸದಸ್ಯತ್ವದ ಅರ್ಜಿಗಳನ್ನು ವಿತರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ಜೆಡಿಎಸ್ ರಾಜ್ಯಾಧ್ಯಕ್ಷರ ಸೂಚನೆ ಮೇರೆಗೆ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿಯೂ ಸದಸ್ಯತ್ವ ಅಭಿಯಾನ ನಡೆಸಲಾಗುತ್ತಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿಯೂ ಇಂದಿನಿಂದ ಸದಸ್ಯತ್ವ ಆರಂಭಿಸಿದ್ದೇವೆ. ಕ್ಷೇತ್ರದ ಎಲ್ಲಾ ವಾರ್ಡ್‌ಗಳಿಯೂ ಬೂತ್ ಕಮಿಟಿಗಳನ್ನು ರಚನೆ ಮಾಡಬೇಕು. ಬೂತ್ ಕಮಿಟಿ ಪದಾಧಿಕಾರಿಗಳಿಗೆ ರಾಜ್ಯ ಸಮಿತಿಯಿಂದ ಐಡಿ ಕಾರ್ಡ್‌ಗಳನ್ನು ನೀಡಲಾಗುವುದು. ಇನ್ನೊಂದು ತಿಂಗಳಲ್ಲಿ ಅಭಿಯಾನ ಪೂರ್ಣಗೊಳಿಸುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಸಾಗಬೇಕಿದೆ ಎಂದು ಕರೆ ನೀಡಿದರು. ಚಾಮರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಪಿ.ಮಂಜುನಾಥ್ ಮಾತನಾಡಿ, ಇಷ್ಟೊತ್ತಿಗಾಗಲೇ ಸದಸ್ಯತ್ವ ಅಭಿಯಾನವನ್ನು ಪೂರ್ಣಗೊಳಿಸಬೇಕಿತ್ತು. ಆದರೆ ಚನ್ನಪಟ್ಟಣ ಉಪ ಚುನಾವಣೆಯಿಂದಾಗಿ ತಡವಾಗಿದೆ. ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರತೀ ವಾರ್ಡ್‌ಗಳಿಗೂ ಭೇಟಿ ನೀಡಿ ಬೂತ್ ಅಧ್ಯಕ್ಷರನ್ನು ನೇಮಕ ಮಾಡಲಾಗುವುದು. ಒಂದು ಬೂತ್‌ಗೆ ಕಡ್ಡಾಯವಾಗಿ 12 ಜನ ಕಾರ್ಯಕರ್ತರು ಇರಬೇಕು. ವಾರ್ಡ್ ಒಂದರಲ್ಲಿ ಕನಿಷ್ಟ 120 ಮಂದಿ ಕಾರ್ಯಕರ್ತರು ಇರಲೇಬೇಕು ಎಂದು ತಿಳಿಸಿದರು.

ಜೆಡಿಎಸ್ ಮುಖಂಡರಾದ ಹೆಚ್.ಕೆ.ರಮೇಶ್, ಕೆ.ಉಮಾಶಂಕರ್, ಜೆಡಿಎಸ್ ನಗರ ಘಟಕದ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ನಗರ ಮಹಿಳಾ ಘಟಕದ ಅಧ್ಯಕ್ಷೆ ಪ್ರೇಮಾ ಶಂಕರೇಗೌಡ, ನಗರ ಪಾಲಿಕೆ ಮಾಜಿ ಸದಸ್ಯರಾದ ಶಿವಣ್ಣ, ಬಾಲು, ರಮಣಿ, ಜಯರಾಮ್, ಅರುಣ ಮತ್ತಿತರರಿದ್ದರು.

ಸಾರ್ವಜನಿಕರ ತಿಳುವಳಿಕೆಗಾಗಿ

ನಮ್ಮ ಕಕ್ಷಿದಾರರಾದ ಬೆಂಗಳೂರು ಸಿಟಿ, ಗೋವಿಂದರಾಜ ನಗರ, ನಾಗರಭಾವಿ ಮುಖ್ಯ ರಸ್ತೆ, ಮನೆ ನಂ.19/1 ರಲ್ಲಿ ವಾಸವಾಗಿರುವ ಶ್ರೀ ಹನುಮಂತಯ್ಯರವರ ಹೆಂಡತಿ ಶ್ರೀಮತಿ ಕಲ್ಯಾಣಮ್ಮ ಇವರ ಇರಾದೆಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ:

ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿನ ಸಂಬಂಧ ನಮ್ಮ ಕಕ್ಷಿದಾರರು ಹಾಗೂ ಇತರರು. ಮೈಸೂರಿನ 2ನೇ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 201/2006ನ್ನು ಭಾಗಾಂಶ ಕೋರಿ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ನಮ್ಮ ಕಕ್ಷಿದಾರರು ಹಾಗೂ ಅವರ ಸಹೋದರಿ ಶ್ರೀಮತಿ ನಾಚೀರಮ್ಮ ಕೋಂ ಶಿವಣ್ಣ ಇವರುಗಳಿಗೆ ತಲಾ 1/4 ಭಾಗ ಭಾಗಾಂಶದ ಹಕ್ಕು ಇದೆ ಎಂಬುದಾಗಿ ಘನ ನ್ಯಾಯಾಲಯವು ತೀರ್ಪು ನೀಡಿರುತ್ತದೆ. ಹಾಲಿ ನಮ್ಮ ಕಕ್ಷಿದಾರರು ನ್ಯಾಯಾಲಯದಿಂದ ಅಂತಿಮ ಡಿಕ್ರಿ ಪಡೆಯುವ ಸಂಬಂಧ ಅರ್ಜಿ ಸಲ್ಲಿಸಿದ್ದು, ಎಫ್.ಡಿ.ಪಿ.ಸಂಖ್ಯೆ 5/2008 ಎಂಬುದಾಗಿ ಮೇಲ್ಕಂಡ ನ್ಯಾಯಾಲಯದಲ್ಲಿ ದಾಖಲಾಗಿರುತ್ತದೆ. ನಮ್ಮ ಕಕ್ಷಿದಾರರು ಹಾಗೂ ಅವರ ಸಹೋದರಿಗೆ ಷೆಡ್ಯೂಲ್ ಸ್ವತ್ತಿನ ಪೈಕಿ ನಿರ್ದಿಷ್ಟ ಭಾಗಾಂಶವನ್ನು ಗುರುತು ಮಾಡುವ ಸಂಬಂಧ ನ್ಯಾಯಾಲಯದ ಕಮೀಷನರ್ ನೇಮಕ ಮಾಡಿದ್ದು, ಕಮೀಷನರ್ ವರದಿಯೂ ಸಹ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಹೀಗೆ ನಮ್ಮ ಕಕ್ಷಿದಾರರು ಮತ್ತು ಶ್ರೀಮತಿ ನಾಚರಮ್ಮ ರವರಿಗೆ ಷೆಡ್ಯೂಲ್ ಸ್ವತ್ತಿನ ಪೈಕಿ 2/4 ರಷ್ಟು ಭಾಗಾಂಶದ ಹಕ್ಕು ನ್ಯಾಯಾಲಯದಿಂದ ತೀರ್ಮಾನವಾಗಿರುವುದರಿಂದ. ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯವಹರಣೆಯನ್ನು ಮಾಡಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿದೆ. ವಸ್ತುಸ್ಥಿತಿ ಹೀಗಿದ್ದು, ಯಾರೇ ಆಗಲಿ ಮುಂದುವರೆದು ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯವಹರಣೆಯನ್ನು ಮಾಡಿದ್ದಲ್ಲಿ ಅಂತಹ ವ್ಯವಹರಣೆಗಳು ನಮ್ಮ ಕಕ್ಷಿದಾರರ ಹಕ್ಕು ಭಾಧ್ಯತೆಯನ್ನು ಬದ್ಧಪಡಿಸುವುದಿಲ್ಲ ಎಂದು ತಿಳಿಯುವುದು. ಮುಂದುವರೆದು ಒಂದು ವೇಳೆ ಷೆಡ್ಯೂಲ್ ಸ್ವತ್ತಿನ ಸಂಬಂಧ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ, ನಮ್ಮ ಕಕ್ಷಿದಾರರ ಸಹೋದರರಾದ ದೊಡ್ಡ ಬೆಟ್ಟ @ ಬೆಟ್ಟಯ್ಯ ಅಥವಾ ಅವರ ಸಹೋದರ ಚೆಲುವಯ್ಯರವರ ಧರ್ಮಪತ್ನಿ, ಪಾರ್ವತಮ್ಮ ಹಾಗೂ ಮಗಳು ಚೆಲುವರಾಜಮ್ಮ ರವರೊಂದಿಗೆ ಮಾಡುವ ಅಂತಹ ಯಾವುದೇ ರೀತಿಯ ವ್ಯವಹಾರಗಳಿಗೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ ಮತ್ತು ನಮ್ಮ ಕಕ್ಷಿದಾರರಿಗೆ ಉಂಟಾಗಬಹುದಾದ ಎಲ್ಲಾ ರೀತಿಯ ಕಷ್ಟ ನಷ್ಟಗಳಿಗೆ ವ್ಯವಹರಣೆ ನಡೆಸಿದವರೇ ಬಾಧ್ಯರಾಗುತ್ತಾರೆ ಮತ್ತು ಷೆಡ್ಯೂಲ್ ಸ್ವತ್ತಿನ ಸಂಬಂಧ ನಮ್ಮ ಕಕ್ಷಿದಾರರ ಹಕ್ಕು ಭಾಧ್ಯತೆಯನ್ನು ಕುಂಠಿತಗೊಳಿಸುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ :

1. ಸರ್ವೆ ನಂಬರ್ 250/1 ರ ವಿಸ್ತೀರ್ಣ 1 ಎಕರೆ 5 ಗುಂಟೆ ಜಮೀನು
2. ಸರ್ವೆ ನಂಬರ್ 265/5 ರ ವಿಸ್ತೀರ್ಣ 0–31 ಗುಂಟೆ ಜಮೀನು.

ಸಹಿ/- ಎಸ್. ವಿವೇಕ್,
ಬಿಎಎಲ್., ಎಲ್‌ಎಲ್‌ಬಿ, ವಕೀಲರು,
ಕಛೇರಿ ನಂ.452, 1ನೇ ಮಹಡಿ, ಕೊಠಡಿ ಸಂಖ್ಯೆ 5,
ಶ್ರೀ ನಂಜುಂಡೇಶ್ವರ ಕಾಂಪ್ಲೆಕ್ಸ್, ಎಂ.ಜಿ.ರಸ್ತೆ,
ಫೋರ್ಟ್ ಮೊಹಲ್ಲಾ, ಮೈಸೂರು–4

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಆರ್‌ಇಎಸ್‌ಬಿಸಿಇಎಲ್–ಟಿಆರ್‌ಎಎಸ್‌ಎಸ್‌ಪಿ–ಎಸ್‌ಬಿಸಿ ದಿನಾಂಕ : 07–12–2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಹಾನಿಗೊಂಡ ಡ್ರಮ್‌ಗಳಿಂದ ಕಾಂಟ್ಯಾಕ್ಟ್ ಮತ್ತು ಕ್ಯಾಟೆನರಿ ವೈರ್‌ನ ರಿ–ರೋಲಿಂಗ್‌ನಿಂದ ಸುಸ್ಥಿತಿಗೊಳಿಸಿ ಡ್ರಮ್‌ಗಳನ್ನು ಬಿಡುಗಡೆಗೊಳಿಸುವುದನ್ನು ಒಳಗೊಂಡಂತೆ ಸಿಇಇ/ಯೋಜನೆ/ನೈಋತ್ಯ ರೈಲ್ವೆಯ ವಿವಿಧ ಆರ್‌ಇ ಡಿಪೋಗಳಿಂದ ಹಲವಾರು ಡಿಪೋಗಳಿಗೆ ಕಾಪರ್ ಡ್ರಮ್‌ಗಳು / ಓಹೆಚ್‌ಇ ಸಾಮಗ್ರಿಗಳ ಲೋಡಿಂಗ್ / ಅನ್‌ಲೋಡಿಂಗ್ ಮತ್ತು ಸಾಗಾಣಿಕೆ.	ರೂ. 44,47,569.08

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30–12–2024 ರಂದು 15:00 ಗಂಟೆಯವರೆಗೆ

ಟೆಂಡರ್ ಪ್ರಕಟಣೆ ಸಂ. ಆರ್‌ಇಎಸ್‌ಬಿಸಿಇಎಲ್–ಟಿಆರ್‌ಎಎಸ್‌ಎಸ್‌ಪಿ–ಎಂವೈಎಸ್ ದಿನಾಂಕ : 09–12–2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಹಾನಿಗೊಂಡ ಡ್ರಮ್‌ಗಳಿಂದ ಕಾಂಟ್ಯಾಕ್ಟ್ ಮತ್ತು ಕ್ಯಾಟೆನರಿ ವೈರ್‌ನ ರಿ–ರೋಲಿಂಗ್‌ನಿಂದ ಸುಸ್ಥಿತಿಗೊಳಿಸಿ ಡ್ರಮ್‌ಗಳನ್ನು ಬಿಡುಗಡೆಗೊಳಿಸುವುದನ್ನು ಒಳಗೊಂಡಂತೆ ಸಿಇಇ/ಯೋಜನೆ/ನೈಋತ್ಯ ರೈಲ್ವೆಯ ವಿವಿಧ ಆರ್‌ಇ ಡಿಪೋಗಳಿಂದ ಹಲವಾರು ಡಿಪೋಗಳಿಗೆ ಕಾಪರ್ ಡ್ರಮ್‌ಗಳು / ಓಹೆಚ್‌ಇ ಸಾಮಗ್ರಿಗಳ ಲೋಡಿಂಗ್ / ಅನ್‌ಲೋಡಿಂಗ್ ಮತ್ತು ಸಾಗಾಣಿಕೆ.	ರೂ. 41,30,352.53

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04–01–2025 ರಂದು 13:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಪಿ&ಪಿ / ಆರ್‌ಇ

ಪಿಯುಬಿ/628/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಬೆಂಗಳೂರು

South Western Railway - SWR SWRRLY SWRRLY



ನಕ್ಕರೆ ಅದೇ ಸ್ವರ್ಗ

ಮಣಿ : ಹೇರ್ ಕಟಿಂಗ್ ಮಾಡಪ್ಪಾ...
ಅಂಗಡಿಯವ : ಯಾವ ಸ್ಟೈಲ್ ಮಾಡ್ಲಿ ಸಾರ್?
ಮಣಿ : ಸ್ಟೈಲು ಗೀಲು ಬೇಡಪ್ಪಾ, ಹೆಂಡತಿ ಕೈಗೆ ಕೂದಲು ಸಿಗಬಾರದು ಅಷ್ಟೇ...

ಮೈಸೂರು ಮಿತ್ರ

ಭಾನುವಾರ, 15 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಬಡವರು ಹಸಿದಿರುವುದು ಅಕ್ಕರೆಗಾಗಿ. ರೊಟ್ಟಿಗಾಗಿ ಅಲ್ಲ.

–ಮದರ್ ತೆರೇಸಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ

ನಿಮ್ಮ ಪತ್ರಗಳು

■ ಶುದ್ಧ ನೀರಿನ ಘಟಕದ ಬಳಿ ನೈರ್ಮಲ್ಯ ಕಾಪಾಡಿ

ಮಾನ್ಯರೆ,



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದ ಬಳಿ ಮೈಸೂರು ಪಾಲಿಕೆಯಿಂದ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕ ಅನೈರ್ಮಲ್ಯದ ತಾಣವಾಗಿದೆ. ಐದು ರೂ. ಕಾಯಿನ್ ಹಾಕಿ ನೀರು ಪಡೆಯಲಾಗುತ್ತಿದೆ. ಸಾರ್ವಜನಿಕರು ನೀರು ತಗೆದುಕೊಳ್ಳುವಾಗ ಬರುವ ಹೆಚ್ಚುವರಿ ನೀರು ರಸ್ತೆಯ ಬದಿಯಲ್ಲಿ ನಿಂತು ಸೊಳ್ಳೆ, ನೊಣಗಳ ಹಾವಳಿ ಹೆಚ್ಚಾಗಿದೆ. ಇದರಿಂದಾಗಿ ಡೆಂಗ್ಯೂ, ಮಲೇರಿಯಾ ಮೊದಲಾದ ರೋಗಗಳು ಹರಡುವ ಭೀತಿಯುಂಟಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ನೀರಿನ ಘಟಕದ ಬಳಿ ನೀರು ನಿಲ್ಲದಂತೆ ಕ್ರಮ ಕೈಗೊಳ್ಳಬೇಕಾಗಿದೆ.

–ಶ್ರೀದೇವಿ ಎಸ್. ಮೈಸೂರು.

■ ಕೆಆರ್‌ಎಸ್‌ನಲ್ಲಿ ಉದ್ಯಮಿ ಕೊಲೆಗೆ ಖಂಡನೆ

ಮಾನ್ಯರೆ,

ಕೃಷ್ಣರಾಜಸಾಗರದಲ್ಲಿ ಇತ್ತೀಚೆಗೆ ನಡೆದ ಉದ್ಯಮಿ ಕೊಲೆಯನ್ನು ಎಲ್ಲರೂ ಖಂಡಿಸಬೇಕಿದೆ. ಕ್ಷುಲ್ಲಕ ಕಾರಣಕ್ಕೆ ಉದ್ಯಮಿಯನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಅದರಲ್ಲೂ ಕೆಆರ್‌ಎಸ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೇಕಾದಷ್ಟು ಕೊಲೆಗಳು ನಡೆದಿವೆ. ಇದು ಇನ್ನೂ ಮುಂದುವರೆದಿದೆ. ಕೆಲವು ಪುಂಡು ಪೋಕರಿಗಳು, ರೌಡಿಗಳಾಗಿ ಹೆಸರು ಮಾಡಲು ಈ ಹಂತಕ್ಕೆ ಇಳಿದಿದ್ದಾರೆ. ಅನಧಿಕೃತ ಬಡ್ಡಿದಾರರು ಶೇ.5 ರಿಂದ 20 ರವರೆಗೆ ಬಡ್ಡಿ ನೀಡುವುದು, ಕಂತುಗಳಲ್ಲಿ ಹಣವನ್ನು ನೀಡಿ ಹಿಂಸಿಸುವುದು ಸಾಮಾನ್ಯವಾಗಿದೆ. ಆದ್ದರಿಂದ ಇವೆಲ್ಲವನ್ನೂ ಶಾಶ್ವತವಾಗಿ ಮಟ್ಟಹಾಕಿ ಸ್ಥಳೀಯರು ಹಾಗೂ ಪ್ರವಾಸಿಗರಿಗೆ ಸೂಕ್ತ ರಕ್ಷಣೆ ಒದಗಿಸುವ ಜೊತೆಗೆ ಇವರ ಬಗ್ಗೆ ವಿಶೇಷ ಮುತುವರ್ಜಿ ವಹಿಸಿ ವಿಶ್ವಪ್ರಸಿದ್ಧ ಬೃಂದಾವನ ಗಾರ್ಡನ್‌ನ(ಕೆಆರ್‌ಎಸ್) ಹೆಸರು ಉಳಿಸಬೇಕಾಗಿ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳಲ್ಲಿ ಮನವಿ.

–ನೊಂದ ಸ್ಥಳೀಯ ನಾಗರಿಕರು, ಕೆ.ಆರ್.ಎಸ್.

■ ಮೈಸೂರು ವರ್ತುಲ ರಸ್ತೆಗೆ ಎಸ್.ಎಂ. ಕೃಷ್ಣ ಹೆಸರು ಈಗಲಾದರೂ ನಾಮಕರಣ ಮಾಡಿ

ಮಾನ್ಯರೆ,

ಮೈಸೂರಿನ ವರ್ತುಲ ರಸ್ತೆ ನಿರ್ಮಾಣ ಆಗಿ ಸಾರ್ವಜನಿಕರು ಉಪಯೋಗಿಸಲು ಕಾರಣೀಭೂತರಾದ ಮಾಜಿ ಮುಖ್ಯಮಂತ್ರಿ ದಿವಂಗತ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಅವರ ಹೆಸರನ್ನು ನಾಮಕರಣ ಮಾಡಲು 2011ರಲ್ಲೇ ಮೈಸೂರು ಮಹಾನಗರ ಪಾಲಿಕೆ ನಿರ್ಣಯ ಮಾಡಿದ್ದರೂ ಇದುವರೆವಿಗೆ ಅನುಷ್ಠಾನ ಆಗದಿರುವುದು ದುರಂತವೇ ಸರಿ. ದೂರದೃಷ್ಟಿಯ ವ್ಯಕ್ತಿತ್ವ ಉಳ್ಳ, ಎಸ್.ಎಂ.ಕೃಷ್ಣ ಅವರು ಮೈಸೂರಿನ ಅಭಿವೃದ್ಧಿ ಬಗ್ಗೆ ವಿಶೇಷ ಕಾಳಜಿ ಉಳ್ಳವರಾಗಿದ್ದರು ಎಂಬುದಕ್ಕೆ, ವರ್ತುಲ ರಸ್ತೆ ನಿರ್ಮಾಣಕ್ಕೆ 2003 ರಲ್ಲೇ ಚಾಲನೆ ನೀಡಿ, ಅಗತ್ಯ ಅನುದಾನದ ಜೊತೆಗೆ ಎಲ್ಲಾ ರೀತಿಯ ನೆರವು ನೀಡಿರುವುದೇ ಸಾಕ್ಷಿಯಾಗಿದೆ. ವರ್ತುಲ ರಸ್ತೆ ನಿರ್ಮಾಣ ಆಗಿ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗಿದೆ. ಮೈಸೂರಿನ ನಗರಪಾಲಿಕೆಯಲ್ಲಿ ನಿರ್ಣಯಗೊಂಡಿರುವ ಎಸ್.ಎಂ.ಕೃಷ್ಣ ಅವರ ಹೆಸರಿನ ನಾಮಫಲಕವನ್ನು ಸಂಬಂಧಪಟ್ಟವರು ಹಾಗೂ ಅಧಿಕಾರಿಗಳು ಈಗಲಾದರು ಅಳವಡಿಸುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಕನ್ನಡದಲ್ಲೇ ಹೈಕೋರ್ಟ್‌ನಲ್ಲಿ ತೀರ್ಪು ನೀಡಿದ ನ್ಯಾಯಮೂರ್ತಿಗಳು ಅಭಿನಂದನಾರ್ಹರು

ಮಾನ್ಯರೆ,

ಕಳೆದ ಗುರುವಾರ (ಡಿ.12) ಹೈಕೋರ್ಟ್ ನ್ಯಾಯಮೂರ್ತಿಗಳಾದ ನ್ಯಾ. ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾ.ಸಿ.ಎಂ.ಜೋಶಿ ಅವರನ್ನು ಒಳಗೊಂಡ ವಿಭಾಗೀಯ ನ್ಯಾಯಪೀಠವು ತುಮಕೂರಿನ ಶಿರಾ ತಾಲೂಕಿನ ಪಟ್ಟನಾಯಕನಹಳ್ಳಿ ಬ್ರಹ್ಮೇಶ್ವರ ಸ್ವಾಮಿ ಮಠದ ಮೇಲ್ಮನವಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿ ತೀರ್ಪನ್ನು 'ಕನ್ನಡದಲ್ಲೇ ಪ್ರಕಟಿಸಿರುವುದು' ಉನ್ನತ ನ್ಯಾಯಾಂಗದ ಮಹತ್ತರ ಹೆಜ್ಜೆ ಎಂದೇ ಹೇಳಲಾಗುತ್ತಿದೆ. ನ್ಯಾಯಮೂರ್ತಿಗಳ ಈ ಕಾರ್ಯ ಪ್ರಶಂಸನೀಯ. ಜನಸಾಮಾನ್ಯರಿಗೂ ಅರ್ಥವಾಗುವಂತೆ ಕನ್ನಡದಲ್ಲೇ ತೀರ್ಪು ನೀಡಿದ ಈ ಇಬ್ಬರು ನ್ಯಾಯಮೂರ್ತಿಗಳು ಅಭಿನಂದನಾರ್ಹರು.

ಡಿಸೆಂಬರ್ 11 'ಭಾರತ ಭಾಷಾ ದಿನ' ಈ ತಿಂಗಳಲ್ಲೇ ಸ್ಥಳೀಯ ಭಾಷೆಯಲ್ಲಿ ನ್ಯಾಯಾಲಯದ ತೀರ್ಪು ಕನ್ನಡದಲ್ಲೇ ಪ್ರಕಟಿಸಿರುವುದು ಸ್ಥಳೀಯ ಭಾಷೆಯನ್ನು ಗೌರವಿಸುವ ಪರಂಪರೆಗೆ ನಾಂದಿ ಹಾಡಿದೆ. ತಾಲೂಕು ಮತ್ತು ಜಿಲ್ಲಾ ಮಟ್ಟದ ನ್ಯಾಯಾಲಯಗಳು ಸಹ ಕನ್ನಡದಲ್ಲೇ ತೀರ್ಪು ನೀಡುವಂತಾಗಬೇಕು. ಇನ್ನು ಮುಂದೆ ಜನಸಾಮಾನ್ಯರಿಗೂ ಅರ್ಥವಾಗುವಂತೆ ಸರಳವಾಗಿ ಕನ್ನಡ ಭಾಷೆಯಲ್ಲೇ ನ್ಯಾಯವಾದಿಗಳು ಸಹ ತಮ್ಮ ವಾದಗಳನ್ನು ಮಂಡಿಸಬೇಕು. ನ್ಯಾಯಾಲಯಗಳು ಸಹ ತೀರ್ಪುಗಳನ್ನು ಕನ್ನಡದಲ್ಲೇ ಪ್ರಕಟಿಸುವಂತಾದರೆ ಜನ ಸಾಮಾನ್ಯರಿಗೆ ನ್ಯಾಯಾಂಗ ವ್ಯವಸ್ಥೆಯ ಮೇಲೆ ಇನ್ನೂ ಹೆಚ್ಚಿನ ನಂಬಿಕೆ ಬರುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಇಲ್ಲಿರಬೇಕಾದ್ದು ಕನ್ನಡ ಸಾಹಿತ್ಯದ ಸವಿಯೇ ಹೊರತು ಭೋಜನದ ನಳಪಾಕವಲ್ಲ

ಮಾನ್ಯರೆ,

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕ್ಷಣಗಣನೆ ಆರಂಭವಾಗಿದೆ. ಆದರೆ ಸಾಹಿತ್ಯ ಸಮ್ಮೇಳನದ ರೂಪು-ರೇಷೆಗಳಿಗಿಂತ ಭೋಜನದ ವಿಚಾರವೇ ಹೆಚ್ಚು ಸದ್ದು ಮಾಡುವ ಮೂಲಕ ಚರ್ಚೆಗೆ ಗ್ರಾಸವಾಗುತ್ತಿದೆ. ಇಲ್ಲಿ ನಡೆಯುತ್ತಿರುವುದು ಕನ್ನಡದ ಹಬ್ಬವೇ ಹೊರತು ಬೀಗರ ಔತಣವಲ್ಲ. ಕನ್ನಡ ನಾಡು – ನುಡಿಯ ಬಗ್ಗೆ ನಮಗಿರುವ ಅಜ್ಞಾನದ ಕೊರತೆಯ ಹಸಿವನ್ನು ಹಿಂಗಿಸಿಕೊಳ್ಳಬೇಕೆ ಹೊರತು ಭೂರಿ ಭೋಜನದಿಂದಲ್ಲ.

ಕಾರ್ಯಕ್ರಮಕ್ಕೆ ಆಗಮಿಸುವ ಎಲ್ಲರಿಗೂ ಸಸ್ಯಾಹಾರದ ಖಾದ್ಯಗಳನ್ನೇ ಉಣಬಡಿಸುವುದು ಸೂಕ್ತ. ಈ ಹಿಂದಿನ ಸಮಾವೇಶಗಳಲ್ಲೂ ಬಾಡೂಟ ಬಡಿಸಿದ ನಿದರ್ಶನಗಳಿಲ್ಲ. ಕೆಲವರ ಒತ್ತಾಸೆಗೆ ಮಣಿದು ಆಹಾರ ಕ್ರಮದಲ್ಲಿ ಬದಲಾವಣೆ ಮಾಡುವುದು ಅಷ್ಟು ಸೂಕ್ತವೆನಿಸಲಾರದು. ಇಂತಹುದೇ ಖಾದ್ಯ ಬೇಕೆನ್ನುವವರು ತಮ್ಮ ಸ್ವಂತ ಖರ್ಚಿನಲ್ಲಿ ಹೋಗಿ ಉಂಡು ಬರಲಿ. ಸಮ್ಮೇಳನದ ಸಂಘಟಕರು ಈ ಬಗ್ಗೆ ಮಾರ್ಗಸೂಚಿ ಹೊರಡಿಸಿ ಆಯಾ ದಿನಗಳಲ್ಲಿ ನೀಡಬಹುದಾದ ಸಸ್ಯಾಹಾರಿ ತಿನಿಸುಗಳ ಪಟ್ಟಿಯನ್ನು ಪ್ರಕಟಗೊಳಿಸಲಿ. ಇಲ್ಲವಾದಲ್ಲಿ ಸಮಾವೇಶದ ಗಾಂಭೀರ್ಯತೆಗೆ ಧಕ್ಕೆ ಬರುತ್ತದೆ. ಇಂತಹ ಸಮಾವೇಶದಲ್ಲಿ ಬೇಕಾಗಿರುವುದು ಕನ್ನಡ ಸಾಹಿತ್ಯದ ಸವಿಯೇ ಹೊರತು ಭೋಜನದ ನಳಪಾಕವಲ್ಲ.

– ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಹೀಗಿದ್ದರು ನಮ್ಮ ಜಿಟಿಎನ್


'ಸಂಗೀತವೆನ್ನುಸಿರು
ಸಾಹಿತ್ಯವೆನ್ನೊಡಲು
ವಿಜ್ಞಾನವೆನ್ನಶನ'

ಹೀಗೆ, ಸಂಗೀತ, ಸಾಹಿತ್ಯ ಮತ್ತು ವಿಜ್ಞಾನ ಮೂರರ ಜೊತೆಗೂ ನಿಕಟ ಸಂಪರ್ಕವನ್ನು ಹೊಂದಿದ್ದ, ಬದುಕನ್ನು ದಿಟ್ಟ ಹಾಗೂ ಛಲ ಎಂಬಂತೆ ಸ್ವೀಕರಿಸಿದ, ಸರಳತೆಯ ಮತ್ತು ಶಿಸ್ತಿನ ಸಾಕಾರ ರೂಪವಾಗಿದ್ದ ಜಿ.ಟಿ.ನಾರಾಯಣರಾವ್ ಅವರದು ಎಂದಿಗೂ ಮರೆಯಲಾಗದ ವ್ಯಕ್ತಿತ್ವ. ಸಂಗೀತದ ಬಗ್ಗೆ ಅತೀವ ಪ್ರೀತಿ, ಅವರೇ ಹೇಳುವಂತೆ ಸಾಹಿತ್ಯವು ಅವರ ದೇಹದ ಭಾಗವೇ ಆಗಿತ್ತು. ವಿಜ್ಞಾನವು ಅವರ ಆಲೋಚನಾ ಪರಿಯಲ್ಲಿಯೇ ಮಿಳಿತವಾಗಿತ್ತು. ನೇರವಾದ, ಮೊನಚಾದ ಮಾತಿನ ಹಿಂದೆ ಇರುತ್ತಿದ್ದುದು ಕೇವಲ ಎಲ್ಲ ಜೀವಿಗಳ ಬಗೆಗಿನ ಕಾಳಜಿ ಮತ್ತು ಮಾನವೀಯತೆ. ಅವರ ತೀಕ್ಷ್ಣ ನೋಟದ ಹಿಂದೆ ಅಡಗಿದ್ದುದು ಒಬ್ಬ ಪ್ರಾಮಾಣಿಕ ವ್ಯಕ್ತಿಯ ಅದ್ಭುತ ವ್ಯಕ್ತಿತ್ವ ಮಾತ್ರ.

ನಾನೊಬ್ಬ ಕೊಡವ ಎಂದು ಹೇಳಿಕೊಳ್ಳುವುದರಲ್ಲಿ ಅವರಿಗೆ ಅದೆಷ್ಟೇ ಹೆಮ್ಮೆ ಆನಂದವಿದ್ದರೂ ಅವರು ನಮ್ಮ ಪಾಲಿಗೆ ಮೈಸೂರಿನ ಅವಿಭಾಜ್ಯ ಅಂಗವಾಗಿದ್ದವರೇ. ಮೂಲತಃ ವಿಜ್ಞಾನ ಶಿಕ್ಷಕರಾಗಿದ್ದ ಜಿಟಿಎನ್ ಅವರು ಕೆಲಸ ಮಾಡಿದ ಕಡೆಯಲ್ಲೆಲ್ಲಾ ವಿದ್ಯಾರ್ಥಿಗಳ ಅಗಾಧ ಪ್ರೀತಿ ಗಳಿಸಲು ಏನೇನೂ ಕೊರತೆ ಇರುತ್ತಿರಲಿಲ್ಲ. ಜೊತೆಗೆ ಎನ್.ಸಿ.ಸಿಯ ಜವಾಬ್ದಾರಿಯನ್ನು ಹೊತ್ತಿರುತ್ತಿದ್ದುದರಿಂದ ವಿದ್ಯಾರ್ಥಿಗಳಿಗೆ ಮತ್ತಷ್ಟು ಹತ್ತಿರವಾಗುತ್ತಿದ್ದರು. ಕೆಲಸ ಎಲ್ಲೇ ಮಾಡುತ್ತಿರಲಿ, ಅವರ ಹೃದಯ ಸಂಗೀತಕ್ಕಾಗಿ ತುಡಿಯುತ್ತಿತ್ತು. ಯಾವ ಊರಿನಲ್ಲೇ ಇದ್ದರೂ ನಾದದ ಸಾಂಗತ್ಯವನ್ನು ಅವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಹೀಗಾಗಿ ಅವರು ಅಪ್ಪಟ ಸಂಗೀತ ಪ್ರೇಮಿ. ಬೆಂಗಳೂರಿನ ಸರಕಾರಿ ಕಲಾ ಮತ್ತು ವಿಜ್ಞಾನದ ಕಾಲೇಜಿ ನಿಂದ ಅವರನ್ನು ಮೈಸೂರಿಗೆ ಕರೆತಂದ ಕೀರ್ತಿ ಶ್ರೀ ದೇಜಗೌ ಅವರಿಗೆ ಸಲ್ಲುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶ ರಚನೆಯ ಸಂದರ್ಭದಲ್ಲಿ ಅವರ ಸೇವೆಯು ವಿಜ್ಞಾನದ ವಿಭಾಗ ದಲ್ಲಿ ಸಲ್ಲಬೇಕೆಂಬ ಘನ ಉದ್ದೇಶದಿಂದ ಅವರನ್ನು ಮೈಸೂರಿಗೆ ಕರೆತರುವಲ್ಲಿ ದೇಜಗೌ ಅವರು ಯಶಸ್ವಿ ಆದರಷ್ಟೇ ಅಲ್ಲ, ಅತ್ಯಂತ ಪ್ರಾಮಾಣಿಕವಾಗಿ, ಶಿಸ್ತಿನಿಂದ ಕಾರ್ಯನಿರ್ವಹಿಸಬಲ್ಲ ಅರ್ಹ ವ್ಯಕ್ತಿಯನ್ನು ಪರಿಚಯಿಸಿದ್ದರ ಖ್ಯಾತಿಗೂ ಭಾಜನರಾದರು.

ಮೈಸೂರು, ಕರ್ನಾಟಕದ ಸಾಂಸ್ಕೃತಿಕ ನಗರ. ಇಲ್ಲಿ ಎಲ್ಲ ರೀತಿಯ ಕಲಾ ಪ್ರಕಾರಗಳಿಗೂ ಮನ್ನಣೆ ಉಂಟು. ಅವರ ಸಹೃದಯ ಮನಸ್ಸನ್ನು ತಣಿಸಲು ಇದಕ್ಕಿಂತ ಮತ್ತೇನು ಬೇಕು? ಶಾಸ್ತ್ರೀಯ ಸಂಗೀತದ ಗಾಯನ, ವಾದನ, ನೃತ್ಯ, ನಾಟಕ, ಹರಿಕಥೆ, ಗಮಕ, ಲಘು ಸಂಗೀತ ರಸಿಕರಿಗೆ ರಸದೌತಣ ನೀಡುವ ಕಲಾನಗರಿಯಲ್ಲಿ ವಾಸ್ತವ್ಯ ಹೂಡಿದವರಿಗೆ ಮೊಗೆದಷ್ಟೂ ಕಲಾಸಿಂಚನ.. ಜಿಟಿಎನ್ ಅವರು ಇವೆಲ್ಲದರ ವಿಮರ್ಶಕರೂ ಆಗಿ, ಯುವ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಾ, ಸಂಗೀತ ಸಭೆಗಳ ಸದಸ್ಯರೂ ಆಗಿ ಮೈಸೂರಿನ ಕಲಾ ಲೋಕದ ಅವಿಭಾಜ್ಯ ಅಂಗವೇ ಆಗಿಬಿಟ್ಟರು. ಸಾಹಿತ್ಯದ ಸಾಹಚರ್ಯವಂತೂ ಇದ್ದೇ ಇದ್ದಿತು. ಅವರ ಲೇಖನಿಯಿಂದ ಮೂಡಿಬಂದ ಅದೆಷ್ಟು ಪುಸ್ತಕಗಳು ವಿವಿಧ ಅಭಿರುಚಿಯ ಓದುಗರನ್ನು ತಣಿಸಿವೆ! ಮುಗಿಯದ ಪಯಣ (ಆತ್ಮಕಥೆ), ಎನ್‌ಸಿಸಿ ದಿನಗಳು, ಸಪ್ತಸಾಗರ ದಾಚೆ ಎಲ್ಲೋ(ಅನುಭವ ಕಥನ), ನಕ್ಷತ್ರ ಲೋಕ, ಮಾನವ, ಚಂದ್ರನ ಮೇಲೆ, ವೇಗ, ವಿಜ್ಞಾನ ನಿರ್ಮಾಪಕರು, ವಿಜ್ಞಾನ ಸಪ್ತರ್ಷಿಗಳು, ಕೊಪರ್ನಿಕಸ್ ಕ್ರಾಂತಿ, ನೋಡೋಣು ಬಾರಾ ನಕ್ಷತ್ರ(ವಿಜ್ಞಾನ), ಶ್ರುತಗಾನ, ಸಂಗೀತ ರಸನಿಮಿಷಗಳು (ಸಂಗೀತಗಾರರ ಜೊತೆಗಿನ ಅವರ ಒಡನಾಟ), ಸುಬ್ರಹ್ಮಣ್ಯನ್ ಚಂದ್ರಶೇಖರ್ ಮತ್ತು ಸಿ.ವಿ. ರಾಮನ್ ಮುಂತಾದ ವಿಜ್ಞಾನಿಗಳ ಜೀವನ ಚಿತ್ರಣ, ಹೀಗೆ ಅವರ ಲೇಖನಿಯಿಂದ ಮೂಡಿಬಂದ ಅದೆಷ್ಟೋ ಬಗೆಯ ರುಚಿಕರ ಉಣಿಸು ಅದು. ಜೊತೆಗೆ ಅತ್ರಿಸೂನು ಎಂಬ ಹೆಸರಿನಲ್ಲಿ ಬರೆದ ಚುಟುಕಗಳು ಅಸಂಖ್ಯ.

> ❝ ವಿದ್ಯೆ ಯಾರಲ್ಲಿಯೇ ಇರಲಿ, ಅದಕ್ಕೆ ಗೌರವ ಸೂಚಿಸುವ ನಮ್ರತೆ. ಬರೆಯುವ ಹವ್ಯಾಸ ಇದ್ದವರನ್ನು ಮತ್ತಷ್ಟು ಹುರಿದುಂಬಿಸುವ ವ್ಯಕ್ತಿತ್ವ, ಅನ್ಯಾಯ ಎಂಬುದು ಎಲ್ಲೇ ಇರಲಿ, ಅದನ್ನು ಖಂಡಿಸುವ ನಿರ್ಭಿಡೆಯ ವ್ಯಕ್ತಿ.



ಜಿ.ಟಿ.ನಾರಾಯಣರಾವ್

ಶಿಸ್ತಿನ-ಕಟ್ಟುನಿಟ್ಟಿನ ಬದುಕನ್ನು ಅಪ್ಪಿಕೊಂಡ ಅವರ ಬಾಯಲ್ಲಿ ಸದಾ ಬರುತ್ತಿದ್ದ ಮಾತು-? ಅಕಾಲದಲ್ಲಿ ಅಮೃತವೂ ವಿಷ, ಹೀಗಾಗಿ ಹೊರಗೆ ಎಲ್ಲಿಯೂ ಒಂದು ಹನಿ ನೀರನ್ನೂ ಅವರು ಕುಡಿಯುತ್ತಿರಲಿಲ್ಲ. ಮತ್ತೊಬ್ಬರು, ಅದು ಯಾರೇ ಆಗಿರಲಿ, ಅವರ ಸಹಾಯಕ್ಕೆ ಧಾವಿಸುತ್ತಿದ್ದವರಲ್ಲಿ ಅವರು ಮೊದಲಿಗರಾಗಿರುತ್ತಿದ್ದರು. ವೇದಿಕೆಯ ಮೇಲೆ ಕಲೆಯನ್ನು ಪ್ರದರ್ಶಿಸುತ್ತಿದ್ದ ಕಲಾವಿದನ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಎಂದು ಗೊತ್ತಾದಲ್ಲಿ, ಕೂಡಲೇ ಅವರಿಗೆ ತಮ್ಮ ಸಹಾಯ ಹಸ್ತವನ್ನು ಚಾಚುತ್ತಿದ್ದುದಲ್ಲದೆ, ತಮ್ಮ ಹೆಸರನ್ನು ಹೇಳುವ ಅವಶ್ಯಕತೆ ಇಲ್ಲವೆಂಬುದನ್ನು ಸೇರಿಸಲು ಮರೆಯುತ್ತಿರಲಿಲ್ಲ. ತಮಗೆ ಅಷ್ಟಾಗಿ ಪರಿಚಯವಿರದವರಿಗೂ ಅವರ ಮುಕ್ತ ಹಸ್ತದ ಸಹಾಯ ಸದಾ ಸಲ್ಲುತ್ತಿತ್ತು. ಅವರಲ್ಲಿ ಎದ್ದು ಕಾಣುತ್ತಿದ್ದ ಈ ಮಾನವೀಯ ಗುಣವು ಕೊನೆಯುಸಿರು ಇರುವತನಕ ಅವರೊಳಗೆ ಭದ್ರವಾಗಿ ಮನೆಮಾಡಿತ್ತು

ಸಮಯ ಪಾಲನೆಯು ಅವರ ಸ್ವಭಾವಕ್ಕೇ ಹತ್ತಿದ್ದ ಮತ್ತೊಂದು ಗುಣ. ಎಂದೂ ಯಾವುದೇ ಕಾರ್ಯಕ್ರಮಕ್ಕೂ ಅವರು ತಡವಾಗಿ ಹೋದದ್ದಿಲ್ಲ. ಕಲಾವಿದರೂ ಅದನ್ನು ಪಾಲಿಸಬೇಕೆಂಬ ಅವರ ಬಯಕೆಯಲ್ಲಿ ಯಾವ ತಪ್ಪೂ ಕಾಣದು. ಒಮ್ಮೆ ಸಂಗೀತ ಕಛೇರಿಯೊಂದಕ್ಕೆ ಪಕ್ಕವಾದ್ಯದ ಮೃದಂಗ ವಾದಕರು ಎಷ್ಟು ಹೊತ್ತಾದರೂ ಬಾರದಿದ್ದಾಗ, ಜಿಟಿಎನ್ ಕಛೇರಿಯನ್ನು ಅವರಿಲ್ಲದೆಯೇ ಆರಂಭಿಸಲು ಸೂಚಿಸಿದರು. ತಡವಾಗಿ ಬಂದ ಮೃದಂಗ ವಾದಕರು ಗಡಿಬಿಡಿಯಿಂದ ವೇದಿಕೆಯನ್ನೇರಿ ನುಡಿಸಲು ಅನುವಾದಾಗ, ತಡವಾಗಿ ಬಂದುದಕ್ಕೆ ಮೊದಲು ಸಭೆಯ ಕ್ಷಮೆಯನ್ನು ಕೇಳಿ? ಎಂದು ಗುಡುಗಿದ್ದರು ಶಿಸ್ತಿನ ಸಿಪಾಯಿ ಜಿಟಿಎನ್. ಅಂತೆಯೇ ಗಾಯಕರು ಹಾಡುತ್ತಿರುವ ಸಾಹಿತ್ಯದ ಅರ್ಥವನ್ನು ತಿಳಿದು ಹಾಡಬೇಕೆಂಬುದು ಅವರ ಆಶಯ. ಹಾಡುವವರು ಅರ್ಥ ಕೆಡದಂತೆ ಪದಗಳನ್ನು ವಿಭಜಿಸಬೇಕು, ಇಲ್ಲವಾದಲ್ಲಿ ಅರ್ಥ ಹೋಗಿ ಅನರ್ಥವಾದೀತೆಂಬ ಅವರ ವಾದವೂ ಸಾಧು. ಚಿಂತೆ ಯಾತಕೋ? ಎಂಬುದನ್ನು ಹೀಗೆ ಬಿಡಿಸಿ, ಚಿಂತೆಯಾ ತಕೋ? ಎಂದರೆ, ಏನಾಗಬೇಡ! ಇಂಥವುಗಳನ್ನು ಕಟುವಾಗಿ ವಿರೋಧಿಸುತ್ತಿದ್ದರು ಅವರು.

ಮೈಸೂರಿನ ಪ್ರಮುಖ ಸಂಗೀತ ಸಭೆಗಳಲ್ಲಿ ಒಂದಾದ ಗಾನ ಭಾರತಿಗೆ ಅವರ ನಿಕಟ ಸೇವೆ ಸಂದಿದೆ. ಅದರ ವೀಣೆ ಶೇಷಣ್ಣ ಭವನದ ನಿರ್ಮಾಣಕ್ಕಾಗಿ ಹಣ ಸಂಗ್ರಹ ಮಾಡುವಾಗ, ಅವರು ತಟ್ಟದ ಬಾಗಿಲುಗಳಿಲ್ಲ ಎಂದರೆ ಅತಿಶಯೋಕ್ತಿ ಅಲ್ಲ. ಸಂಜೆ ಯಾವುದೇ ಕಛೇರಿಗೆ ಹೋಗಿರಲಿ, ರಾತ್ರಿ ಅಲ್ಲಿಂದ ಹಿಂದಿರುಗುವಾಗ ಸಹಜವಾಗಿಯೇ ಅವರ ಕಣ್ಣು ಆಕಾಶದತ್ತ. ಜೊತೆಯಲ್ಲಿರುವವರಿಗೆ, ಅಲ್ಲಿ ಕಂಡ ನಕ್ಷತ್ರಗಳ ವಿವರಣೆ. ಸಣ್ಣ ಮಗು ಹಾಡಿದರೂ ಅದಕ್ಕೆ ಮೆಚ್ಚುಗೆ ಸೂಚಿಸುವ ವಿಶಾಲ ಮನೋಭಾವ. ವಿದ್ಯೆ ಯಾರಲ್ಲಿಯೇ ಇರಲಿ, ಅದಕ್ಕೆ ಗೌರವ ಸೂಚಿಸುವ ನಮ್ರತೆ. ಬರೆಯುವ ಹವ್ಯಾಸ ಇದ್ದವರನ್ನು ಮತ್ತಷ್ಟು ಹುರಿದುಂಬಿಸುವ ವ್ಯಕ್ತಿತ್ವ, ಅನ್ಯಾಯ ಎಂಬುದು ಎಲ್ಲೇ ಇರಲಿ, ಅದನ್ನು ಖಂಡಿಸುವ ನಿರ್ಭಿಡೆಯ ವ್ಯಕ್ತಿ. ಅಂತಹ ದಿಟ್ಟ, ನೇರ ನಡೆನುಡಿಯ ಮನುಷ್ಯರನ್ನು ನೋಡುವುದೇ ವಿರಳ ಈಗ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಎಚ್.ನರಸಿಂಹಯ್ಯ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಮಾಳವಾಡ ಪ್ರಶಸ್ತಿ, ಕನ್ನಡ ವಿಜ್ಞಾನ ಪರಿಷತ್ತಿನ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳ ಸರಮಾಲೆ ಅವರ ಮುಡಿಗೇರಿದ್ದರೂ ತಲೆಗೇರಿಸಿಕೊಳ್ಳದ ನಿರ್ಲಿಪ್ತತೆಯನ್ನು ಬೆಳೆಸಿಕೊಂಡಿದ್ದ ಜಿಟಿಎನ್ ಖಂಡಿತವಾಗಿಯೂ ಒಬ್ಬ ಅಪರೂಪದ ವ್ಯಕ್ತಿ.

ರಾಜವಂಶಸ್ಥೆ ಪ್ರಮೋದಾದೇವಿಯವರಿಂದ 'ಸಯೋಗ ಬಜಾರ್'ಗೆ ಚಾಲನೆ

ಇದೊಂದು ಕಲಾ ಶ್ರೀಮಂತಿಕೆ ಪ್ರದರ್ಶನ; ಪ್ರಶಂಸೆ



ಮೈಸೂರಿನ ಸಯೋಗ ಸಂಸ್ಥೆ ವತಿಯಿಂದ ಆಯೋಜಿಸಿರುವ 'ಸಯೋಗ ಬಜಾರ್' ಅನ್ನು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು. 'ಸಯೋಗ' ಮಾಲೀಕರಾದ ಶ್ರೀಮತಿ ಶ್ರುತಿ ರಂಗ, ಎನ್‌ಆರ್ ಗ್ರೂಪ್‌ನ ನಿರ್ದೇಶಕ ಮತ್ತು ರಂಗ ಸನ್ಸ್‌ನ ಚೇರ್‌ಮನ್ ಪವನ್ ರಂಗ ಹಾಗೂ ಚೇರ್‌ಮನ್ ಆರ್.ಗುರು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಡಿ. 14(ಎಸ್‌ಬಿಡಿ)– ಮೈಸೂರಿನ ಸಯೋಗ ಸಂಸ್ಥೆ ವತಿಯಿಂದ ಆಯೋಜಿಸಲಾಗಿರುವ ಎರಡು ದಿನಗಳ ವಿಶೇಷ 'ಸಯೋಗ ಬಜಾರ್'ಗೆ ಶನಿವಾರ ಚಾಲನೆ ದೊರಕಿತು.

ನಗರದ ವಿವಿ ಮೊಹಲ್ಲಾ, ನಾಲ್ಕನೇ ಮುಖ್ಯ ರಸ್ತೆಯಲ್ಲಿರುವ ಪ್ರಮುಖ ಯೋಗ ಜೀವನಶೈಲಿ ಮಳಿಗೆಯಾದ 'ಸಯೋಗ' ಆವರಣದಲ್ಲಿ ಏರ್ಪಡಿಸಲಾಗಿರುವ 'ಸಯೋಗ ಬಜಾರ್' ಕರಕುಶಲ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. 'ಸಯೋಗ' ಮಾಲೀಕರಾದ ಶ್ರೀಮತಿ ಶ್ರುತಿ ರಂಗ, ಎನ್‌ಆರ್ ಗ್ರೂಪ್‌ನ ನಿರ್ದೇಶಕ ಮತ್ತು ರಂಗ ಸನ್ಸ್‌ನ ಚೇರ್‌ಮನ್ ಪವನ್ ರಂಗ ಹಾಗೂ ಚೇರ್‌ಮನ್ ಆರ್.ಗುರು ಉಪಸ್ಥಿತರಿದ್ದರು.

ಈ ವೇಳೆ ಪ್ರಮೋದಾದೇವಿ ಒಡೆಯರ್ ಅವರು ಮಾತನಾಡಿ, ಸಯೋಗ ಬಜಾರ್ ಕೇವಲ ಒಂದು ಉತ್ಸವ ಮಾತ್ರವಲ್ಲ ಇದು ಕರಕುಶಲತೆ ಮತ್ತು ಕುಶಲಕರ್ಮಿಗಳನ್ನು ಪರಿಚಯಿಸುವ ಮಹತ್ವದ ಕಾರ್ಯವಾಗಿದೆ. ವಿವಿಧ ಪ್ರದೇಶಗಳ ಕುಶಲಕರ್ಮಿಗಳಿಗೆ ನೆರವು ನೀಡುವ ಮೂಲಕ ಅವರನ್ನು ಉದ್ಯಮಿಗಳೆಂದು ಗುರುತಿಸಿ, ಗೌರವಿಸುತ್ತಿರುವುದು ಶ್ಲಾಘನೀಯ. ಇಲ್ಲಿ ಮೈಸೂರಿನ ಸಾಂಸ್ಕೃತಿಕ ಶ್ರೀಮಂತಿಕೆ ಜೊತೆಗೆ ಹೆಮ್ಮೆಯ ಕಲಾ ಶ್ರೀಮಂತಿಕೆಯನ್ನೂ ಪ್ರದರ್ಶಿಸಲಾಗುತ್ತಿದೆ. ಇದನ್ನು ಅಣಿಗೊಳಿಸಿದ ಎಲ್ಲರಿಗೂ ಅಭಿನಂದನೆಗಳು ಎಂದರು.

'ಸಯೋಗ' ಮಾಲೀಕರಾದ ಶ್ರುತಿ ರಂಗ ಮಾತನಾಡಿ, ಈ ಬಾರಿ ಸಯೋಗ ಬಜಾರ್ ಉತ್ಸವದಲ್ಲಿ ಕರಕುಶಲ ಕಲೆಯ ಪ್ರದರ್ಶನದ ಜೊತೆಗೆ ನಮ್ಮ ಪ್ರಾದೇಶಿಕ ಕುಶಲಕರ್ಮಿಗಳ ಕಲಾ ಶ್ರೀಮಂತಿಕೆಯನ್ನೂ ಪರಿಚಯಿಸಲಾಗಿದೆ. ಕುಶಲಕರ್ಮಿಗಳಿಗೆ ವೇದಿಕೆ ಕಲ್ಪಿಸುವುದರ ಮೂಲಕ ಕರಕುಶಲತೆಯ ಸಬಲೀಕರಣಗೊಳಿಸುವ ಪ್ರಯತ್ನ ಇದಾಗಿದೆ. ಇಲ್ಲಿನ ವೈವಿಧ್ಯಮಯ ಹಾಗೂ ಅತ್ಯಾಕರ್ಷಕ ಕರಕುಶಲ ಉತ್ಪನ್ನಗಳು ಗ್ರಾಹಕರ ಕಣ್ಣಿಗೆ ಹಬ್ಬವಾಗಿಸಲಿವೆ ಎಂದು ತಿಳಿಸಿದರು.

ಕರಕುಶಲತೆ ಆಗರ: ವಿವಿಧೆಡೆಯ ಕುಶಲಕರ್ಮಿಗಳಿಂದ ರಚಿತಗೊಂಡ ಅನನ್ಯ ವಸ್ತುಗಳ ಸಂಗ್ರಹ 'ಸಯೋಗ ಬಜಾರ್'ಗೆ ನಾಳೆ(15) ಭೇಟಿ ನೀಡಿ, ವೀಕ್ಷಿಸಬಹುದು. ಈ ಮೇಳದಲ್ಲಿ ನೈಸರ್ಗಿಕ ಸುಗಂಧ ದ್ರವ್ಯಗಳು, ಫ್ಯಾಬ್ರಿಕ್ ಗೊಂಬೆಗಳು, ಸ್ಟೇಷನರಿಗಳು, ಗೃಹಾಲಂಕಾರ ವಸ್ತುಗಳು, ಮ್ಯಾಕ್ರೇಮ್ ಉತ್ಪನ್ನಗಳು, ಉಡುಪುಗಳು, ಆಭರಣಗಳು, ಕಾಫಿ ಉತ್ಪನ್ನಗಳು, ಗೌರ್ಮೆಟ್ ಬೇಕರಿ ಉತ್ಪನ್ನಗಳು, ಬೆಡ್ ಲಿನೆನ್‌ಗಳು, ಸ್ಕ್ವಾಷ್‌ಗಳು ಮತ್ತು ಉಪ್ಪಿನಕಾಯಿಗಳು, ರೆಸಿನ್ ಉತ್ಪನ್ನಗಳು, ಪೀಠೋಪಕರಣಗಳು ಹೀಗೆ ವಿವಿಧ ಬಗೆಯ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ವಿಶೇಷವಾಗಿ ಈ ಉತ್ಸವದಲ್ಲಿ ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆಯ ಮಕ್ಕಳು ರಚಿಸಿದ ಬುಟ್ಟಿಗಳು, ಪೇಪರ್ ಬ್ಯಾಗ್‌ಗಳು ಮತ್ತಿತರ ವಿಶಿಷ್ಟ ವಸ್ತುಗಳ ಮಾರಾಟವೂ ಇರಲಿದೆ.

ಡಿ.17ರಂದು ಮತ್ತೆ ವಾಯುಭಾರ ಕುಸಿತ ಸಾಧ್ಯತೆ

ಮೈಸೂರು, ಡಿ.14(ಬಿಎಲ್‌ಯು)– ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ಮೈಸೂರಿನಲ್ಲಿ ನಿನ್ನೆಯಿಂದ ಮೋಡ ಆವರಿಸಿದೆ. ದಟ್ಟ ಮೋಡಗಳು ಸೂರ್ಯನ ಕಿರಣಗಳನ್ನು ಮರೆಯಾಗಿಸಿದೆ. ಕಳೆದ 15 ದಿನದ ಹಿಂದೆ ಫೆಂಗಲ್ ಚಂಡಮಾರುತದ ಪರಿಣಾಮ ಮೈಸೂರಿನಲ್ಲಿ ಎರಡು ದಿನ ಭಾರಿ ಮಳೆಯಾಗಿತ್ತು. ಈಗ ವಾಯುಭಾರ ಕುಸಿತದಿಂದ ಅಲ್ಲಲ್ಲಿ ತುಂತುರು ಮಳೆಯಾಗಿದೆ.

ಬಂಗಾಳಕೊಲ್ಲಿಯ ನಿಕೋಬಾರ್ ಕರಾವಳಿಯಲ್ಲಿ ಉಂಟಾಗಿದ್ದ ವಾಯುಭಾರ ಕುಸಿತವು ಶ್ರೀಲಂಕಾ ಕರಾವಳಿ ಮೂಲಕ ತಮಿಳುನಾಡು ಕರಾವಳಿಗೆ ತಲುಪುವ ನಿರೀಕ್ಷೆ ಇದೆ. ಡಿಸೆಂಬರ್ 17ರಂದು ಮತ್ತೊಮ್ಮೆ ವಾಯುಭಾರ ಕುಸಿತವಾಗುವ ಸಾಧ್ಯತೆ ಇದೆ. ಅಂಡಮಾನ್ ಪೂರ್ವ ಕರಾವಳಿಯಲ್ಲಿ ವಾಯುಭಾರ ಕುಸಿತ ಉಂಟಾಗಲಿದ್ದು, ಡಿಸೆಂಬರ್ 17ರಂದು ತಮಿಳುನಾಡು ಕರಾವಳಿಗೆ ತಲುಪುವ ನಿರೀಕ್ಷೆ ಇದೆ. ಇದರ ಒತ್ತಡದ ಪ್ರಮಾಣ ಕಡಿಮೆ ಇರುವ ಕಾರಣ ಚಂಡಮಾರುತ ಉಂಟಾಗುವ ಸಾಧ್ಯತೆ ಇರುವುದಿಲ್ಲ ಎಂದು ಮೈಸೂರಿನ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ತಾಂತ್ರಿಕ ಅಧಿಕಾರಿ ಡಾ.ಸುಮಂತ್‌ಕುಮಾರ್ ತಿಳಿಸಿದ್ದಾರೆ.

ಬಿಜೆಪಿ ನಾಯಕರಿಗೂ ಸುತ್ತಿಕೊಂಡ ಮುಡಾ ಹಗರಣದ ಉರುಳು

ಮಾಜಿ ಕಾರ್ಪೊರೇಟರ್ ಎಂ.ಸಿ.ರಮೇಶ್‌ರಿಂದ ಕೋಟ್ಯಾಂತರ ಮೌಲ್ಯದ ನಿವೇಶನ ಕಬಳಿಕೆ; ವಕೀಲ ರವಿಕುಮಾರ್ ಆರೋಪ



ಮೈಸೂರಿನ ಪತ್ರಕರ್ತರ ಭವನದಲ್ಲಿ ಶನಿವಾರ ವಕೀಲ ರವಿಕುಮಾರ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಡಿ.14(ಬಿಎಲ್‌ಯು)– ಮೈಸೂರು ನಗರಪಾಲಿಕೆ ಮಾಜಿ ಬಿಜೆಪಿ ಕಾರ್ಪೊರೇಟರ್ ಎಂ.ಸಿ.ರಮೇಶ್ ಸರ್ಕಾರದ ಭೂಮಿಗೆ ರೈತನಿಂದ ಜಿಪಿಎ ಮಾಡಿಸಿಕೊಂಡು ಕೋಟ್ಯಾಂತರ ಮೌಲ್ಯದ ನಿವೇಶನ ಕಬಳಿಸಿದ್ದಾರೆ ಎಂದು ವಕೀಲ ರವಿಕುಮಾರ್ ಆರೋಪಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈತ ಕಪ್ಪು ಹಣದ ವ್ಯವಹಾರ ಮಾಡಿರುವುದಲ್ಲದೆ ಸರ್ಕಾರಕ್ಕೆ ಪಾವತಿಸಬೇಕಾದ ಟಿಡಿಎಸ್, ಆದಾಯ ತೆರಿಗೆ, ಮುದ್ರಾಂಕ ಶುಲ್ಕ ಪಾವತಿ ಮಾಡದೆ ವಂಚನೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಇಲಾಖೆಗೆ ದೂರು ನೀಡಿದ್ದೇವೆ ಎಂದು ತಿಳಿಸಿದರು.

ಮೈಸೂರು ತಾಲೂಕು ಬಸವನಹಳ್ಳಿ ಗ್ರಾಮದ ಹೊನ್ನೇಗೌಡ ಅಲಿಯಾಸ್ ಅಮಾವಾಸ್ಯೆ ಗೌಡ ಬಿನ್ ಹೊನ್ನೇಗೌಡ ಅವರ ಸರ್ವೆ ನಂಬರ್ 126/2ಎ ನಲ್ಲಿ 1.2 ಎಕರೆಯನ್ನು 1994ರಲ್ಲಿ ಮುಡಾ ಭೂಸ್ವಾಧೀನಕ್ಕೆ ಆದೇಶ ಹೊರಡಿಸಿತ್ತು. ಆದರೆ ಈ ಭೂಮಿಯನ್ನು ವಶಕ್ಕೆ ಪಡೆಯದ ಕಾರಣ ಈಗಲೂ ಭೂಮಾಲೀಕರು ಆ ಜಾಗದ ಸ್ವಾಧೀನದಲ್ಲಿದ್ದಾರೆ. ಈ ಭೂಮಿಯನ್ನು ಅಭಿವೃದ್ಧಿ ಕೂಡ ಮಾಡಿಲ್ಲ. ಆದರೆ ಈ ಭೂಮಿಗೆ ಪರಿಹಾರ ನೀಡಿಲ್ಲವೆಂದು ಮೇ 3, 2023ರಲ್ಲಿ ವಿಜಯ ನಗರ 4ನೇ ಹಂತ, 2ನೇ ಫೇಸ್‌ನಲ್ಲಿ 60X90 ಅಳತೆಯ ಎರಡು ನಿವೇಶನ, 30X40 ಹಾಗೂ 20X30 ಅಳತೆಯ ತಲಾ ಒಂದು ನಿವೇಶವನ್ನು ಹೊನ್ನೇಗೌಡ ಅಲಿಯಾಸ್ ಅಮಾವಾಸ್ಯೆಗೌಡನಿಗೆ ಮುಡಾದ ಹಿಂದಿನ ಆಯುಕ್ತ ದಿನೇಶ್‌ಕುಮಾರ್ ಮಂಜೂರು ಮಾಡಿದ್ದಾರೆ. ತರುವಾಯ ಮಾಜಿ ಕಾರ್ಪೊರೇಟರ್ ಎಂ.ಸಿ.ರಮೇಶ್ ಜಿಪಿಎ ಮೂಲಕ ಆ ನಿವೇಶನಗಳ ಕ್ರಯ ಮಾಡಿಕೊಂಡಿದ್ದಾರೆ ಎಂದು ದೂರಿದರು.

ರಾಜಕೀಯ ಪ್ರಭಾವ ಬೀರಿರುವ ಎಂ.ಸಿ.ರಮೇಶ್ ಚದರಡಿಗೆ ಕೇವಲ 3 ಸಾವಿರ ರೂಪಾಯಿಯಂತೆ ಈ ನಿವೇಶನ ಪಡೆದಿದ್ದಾರೆ. ಹಾಗಾಗಿ 12.60 ಕೋಟಿ ಮೌಲ್ಯದ ನಿವೇಶನಗಳನ್ನು ಕೇವಲ 37 ಲಕ್ಷ ರೂಪಾಯಿಗೆ ಪಡೆದಿದ್ದಾರೆ. ಈ ನಿವೇಶನಗಳನ್ನು ಅಂದಿನ ಮುಡಾ ಆಯುಕ್ತ ದಿನೇಶ್‌ಕುಮಾರ್ ಮಂಜೂರು ಮಾಡಿದ್ದಾರೆ ಎಂದು ತಿಳಿಸಿದರು.

ಮತ್ತೊಂದು ಪ್ರಕರಣದಲ್ಲಿ ರಸ್ತೆ ನಿರ್ಮಾಣವಾಗಿದ್ದ ಜಾಗಕ್ಕೆ ಶೇಕಡ 50:50 ಅನುಪಾತದಡಿ ಬದಲಿ ಜಾಗ ನೀಡುವ ಬಗ್ಗೆ ಮುಡಾ ಸಭೆಯಲ್ಲಿ ವಿಚಾರ ಮಂಡಿಸಿದ್ದಾರೆ. ಬೇರೊಂದು ಜಾಗದ ಸರ್ವೆ ನಂಬರ್ ನಮೂದಿಸಿ ಮುಡಾದ ಹಿಂದಿನ ಆಯುಕ್ತ ಡಾ.ಡಿ.ಬಿ.ನಟೇಶ್ 30X40 ಅಳತೆಯ ನಿವೇಶನ ಮಂಜೂರು ಮಾಡಿದ್ದಾರೆ ಎಂದು ರವಿಕುಮಾರ್ ದೂರಿದರು.

ಜಿಪಿಎ ಹೆಸರಿನಲ್ಲಿ ಕೋಟ್ಯಾಂತರ ರೂ. ಮೌಲ್ಯದ ನಿವೇಶನವನ್ನು ಎಂ.ಸಿ. ರಮೇಶ್ ಕಬಳಿಸಿದ್ದಾರೆ. ಮುಡಾ ಹಗರಣದ ಬಗ್ಗೆ ಬಿಜೆಪಿಯವರು ಬರೀ ಆರೋಪ ಮಾಡುತ್ತಾರೆ. ಆದರೆ ಅವರದೇ ಪಕ್ಷದ ಮಾಜಿ ಕಾರ್ಪೊರೇಟರ್ ಕೂಡ ಮುಡಾ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ 14 ನಿವೇಶನ ವಾಪಸು ನೀಡಿದಂತೆ ಎಂ.ಸಿ. ರಮೇಶ್ ಕೂಡ ಕಾನೂನುಬಾಹಿರವಾಗಿ ಪಡೆದುಕೊಂಡ ನಿವೇಶನ ವಾಪಸು ನೀಡಬೇಕು. ಇಲ್ಲದಿದ್ದರೆ ಅವರ ಮನೆ ಮುಂದೆ ಪ್ರತಿಭಟನಾ ಧರಣಿ ನಡೆಸುತ್ತೇವೆ ಎಂದು ರವಿಕುಮಾರ್ ಎಚ್ಚರಿಸಿದರು.

ಮುಡಾ ಆಯುಕ್ತರಾಗಿ ಕೋಟ್ಯಾಂತರ ರೂ. ಮೌಲ್ಯದ ಭೂಮಿಯನ್ನು ಬೇಜವಾಬ್ದಾರಿಯಿಂದ ಭೂ ಮಾಫಿಯಾ ಕೈಗಿಟ್ಟಿರುವ ದಿನೇಶ್‌ಕುಮಾರ್ ಹಾಗೂ ನಟೇಶ್ ಗಂಭೀರ ಸ್ವರೂಪದ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಆದರೆ ಸರ್ಕಾರದ ಹಂತದಲ್ಲಿ ಈ ಇಬ್ಬರು ಅಧಿಕಾರಿಗಳ ವಿರುದ್ಧ ಈ ತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಇಬ್ಬರ ವಿರುದ್ಧವೂ ಕ್ರಿಮಿನಲ್ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಬೇಕು. ಜೊತೆಗೆ ಸರ್ಕಾರಿ ಸೇವೆಯಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಮುಡಾದಲ್ಲಿ ಆಲಿಬಾಬಾ ಚಾಲೀಸ್ ಚೋರ್ ಕಥೆಯಂತಾಗಿದೆ. ಆದರೆ ಸರ್ಕಾರ ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ಕಣ್ಮುಚ್ಚಿ ಕುಳಿತಿದೆ ಎಂದು ರವಿಕುಮಾರ್ ದೂರಿದರು.

ಈ ವೇಳೆ ಮಾತನಾಡಿದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಟರಾಜ್, ರಾಜಕಾರಣಿಗಳನ್ನು ದೂರವಿಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಪ್ರತ್ಯೇಕ ಕಾಯ್ದೆ ರಚನೆ ಮಾಡುತ್ತಿರುವುದು ಸ್ವಾಗತಾರ್ಹ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರ ಆದರ್ಶ್, ಗುರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹನುಮಾನ್ ಚಾಲೀಸ ಪಾರಾಯಣ ಗಿನ್ನಿಸ್ ವಿಶ್ವ ದಾಖಲೆಗೆ ಸೇರ್ಪಡೆ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಅಧ್ವರ್ಯದ ಅವಧೂತ ದತ್ತ ಪೀಠದ ನಾದಮಂಟಪದಲ್ಲಿ 650ಕ್ಕೂ ಹೆಚ್ಚು ಭಕ್ತರು ಹನುಮಾನ್ ಚಾಲೀಸ ಪಾರಾಯಣವನ್ನು ಮಾಡಿ ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸಿದರು.

ಮೈಸೂರು, ಡಿ. 14– ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಅಧ್ವರ್ಯದ ಅವಧೂತ ದತ್ತ ಪೀಠದ ನಾದಮಂಟಪದಲ್ಲಿ 650ಕ್ಕೂ ಹೆಚ್ಚು ಭಕ್ತರು ಸತತವಾಗಿ ಅಹೋರಾತ್ರಿ 33 ಗಂಟೆ 33 ನಿಮಿಷ 33 ಸೆಕೆಂಡ್ ಹನುಮಾನ್ ಚಾಲೀಸ ಪಾರಾಯಣವನ್ನು ಮಾಡಿ ಗಿನ್ನಿಸ್ ವಿಶ್ವದಾಖಲೆ ನಿರ್ಮಿಸಿದರು.

ಈ ಪ್ರಯತ್ನಕ್ಕಾಗಿ ಗಿನ್ನಿಸ್ ವಿಶ್ವ ದಾಖಲೆ ಸಂಸ್ಥೆಯು ಅವರ ಪ್ರತಿನಿಧಿ ಸ್ವಪ್ನಿಲ್ ಡಂಗರಿಕರ್ ಅವರನ್ನು ಕಳುಹಿಸಿತ್ತು. ಇದು 'ಸತತ ಪಾರಾಯಣ ಗಿನ್ನಿಸ್ ವಿಶ್ವದಾಖಲೆಗೆ ಸೇರ್ಪಡೆಯಾಗಿದೆ. ವಡೋದರದ ಸ್ವಾಮಿನಾರಾಯಣ ಭಜನ್ ಯಾಗ, ಸದ್ಗುರು ಶ್ರೀ ಜ್ಞಾನಿ ವಂದಸ್ಜಿ ಸ್ವಾಮಿ–ಕುಂಡಲಧಾಮ ಅವರು ಜುಲೈ 23ರಂದು 27 ಗಂಟೆ 27 ನಿಮಿಷ 27 ಸೆಕೆಂಡ್ ಪಾರಾಯಣ ಮಾಡಿ ಈ ಹಿಂದೆ ದಾಖಲೆ ನಿರ್ಮಿಸಿದ್ದರು.

ನಾದಮಂಟಪದ ಬೆಳ್ಳಿ ಮಹೋತ್ಸವದ ಅಂಗವಾಗಿ ಅಂಚೆ ಇಲಾಖೆ ವತಿಯಿಂದ ಹೊರತಂದಿರುವ ಅಂಚೆ ಚೀಟಿ ಪ್ರಪಂಚದ ಅತೀ ದೊಡ್ಡ ಅಂಚೆ ಚೀಟಿ (postal stamp) (3.12 meters-4.2 meters) ಅಳತೆವುಳ್ಳದು ಕೂಡ ಗಿನ್ನೆಸ್ ವಿಶ್ವ ದಾಖಲೆಗೆ ಸೇರ್ಪಡೆಯಾಗಿದೆ.

ಪಂಚಮಸಾಲಿ ಹೋರಾಟದ ವಿರುದ್ಧ ಹಿಂದುಳಿದ ವರ್ಗಗಳ ವೇದಿಕೆ ಪ್ರತಿತಂತ್ರ

ದುಂಡುಮೇಜಿನ ಸಭೆಯಲ್ಲಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಶಿವರಾಜು ಎಚ್ಚರಿಕೆ



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಆಯೋಜಿಸಿದ್ದ ದುಂಡುಮೇಜಿನ ಸಭೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಶಿವರಾಮು ಮಾತನಾಡಿದರು. ಈ ವೇಳೆ ಕಾಂಗ್ರೆಸ್ ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮುಖಂಡರಾದ ಯೋಗೇಶ್ ಉಪ್ಪಾರ್, ಎಸ್.ರವಿ ನಂದನ್, ಶಿವಣ್ಣ ಇತರರಿದ್ದಾರೆ.

ಮೈಸೂರು, ಡಿ.14(ಆರ್‌ಕೆ)–ಸರ್ಕಾರದ ವಿರುದ್ಧ ಹೋರಾಟಕ್ಕೆ ಸಿದ್ಧವಾಗಿರುವ ಪಂಚಮಸಾಲಿ ಸಮುದಾಯದ ವಿರುದ್ಧ ಪ್ರತಿತಂತ್ರ ರೂಪಿಸುವುದಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಶಿವರಾಮು ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಇಂದು ಆಯೋಜಿಸಿದ್ದ ದುಂಡುಮೇಜಿನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯಲೆಂದು ಬಿಜೆಪಿಯವರಿಂದ ಪ್ರೇರೇಪಿತರಾಗಿರುವುದು ವಿಪರ್ಯಾಸ. ಲಿಂಗಾಯತ ಪಂಚಮಸಾಲಿ ಸಮಾಜವನ್ನು ಹಿಂದುಳಿದ ವರ್ಗ 2ಎಗೆ ಸೇರಿಸಬಾರದೆಂದು ಆಗ್ರಹಿಸಿ ತಮ್ಮ ಹೋರಾಟ ಮುಂದುವರೆಯಲಿದೆ ಎಂದು ತಿಳಿಸಿದರು.

ಇತ್ತೀಚೆಗಷ್ಟೇ ಸಿದ್ದರಾಮಯ್ಯ ಅವರ ಹಾಡಿ ಹೊಗಳಿದ್ದ ಸ್ವಾಮೀಜಿಗಳು ಈಗ ಬಿಜೆಪಿಯವರ ಕುತಂತ್ರದಿಂದಾಗಿ ಮುಡಾ ನಿವೇಶನ ಹಗರಣ ಹಾಗೂ ಮಹರ್ಷಿ ವಾಲ್ಮೀಕಿ ನಿಗಮದ ವಿಷಯವನ್ನು ಮುಂದಿಟ್ಟುಕೊಂಡು ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನಿಸುತ್ತಿದ್ದಾರೆ. ಒಂದು ಸಮುದಾಯವನ್ನು ಮುಖ್ಯಮಂತ್ರಿಗಳ ವಿರುದ್ಧ ಎತ್ತಿಕಟ್ಟಿ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ನೀತಿ ಅನುಸರಿಸುತ್ತಿರುವ ಸ್ವಾಮೀಜಿಗಳು, ಜಾತಿ–ಜಾತಿಗಳ ನಡುವೆ ವಿಷಬೀಜ ಬಿತ್ತುತ್ತಿದ್ದಾರೆ. ಲಿಂಗಾಯತ ಪಂಚಮಸಾಲಿ ಸಮಾಜ ಎಲ್ಲಾ ರೀತಿಯಲ್ಲೂ ಸಬಲವಾಗಿರುವುದರಿಂದ ಅವರನ್ನು ಹಿಂದುಳಿದ ವರ್ಗ 2ಎಗೆ ಸೇರಿಸಲು ನಮ್ಮ ವಿರೋಧವಿದೆ ಎಂದು ಹೇಳಿದರು.

ಸ್ವಾಮೀಜಿಗಳಾದರೂ ಯಾವುದೇ ಒಂದು ಸಮಾಜದ ಪರ ನಿಲ್ಲದೆ ಸರ್ವ ಜನಾಂಗದ ಶ್ರೇಯಸ್ಸು ಬಯಸಬೇಕು. ಯಾವುದೋ ಒಂದು ಜಾತಿಯ ಪರ ನಿಲ್ಲುವವರು ಸನ್ಯಾಸಿಯಾಗಲು ಸಾಧ್ಯವಿಲ್ಲ. ಅದರಿಂದಾಗಿ ಅವರ ಹೋರಾಟವನ್ನು ಹತ್ತಿಕ್ಕಲು ತಾವು ಪ್ರಯತ್ನಿಸುವುದಾಗಿ ಶಿವರಾಮು ತಿಳಿಸಿದರು.

ಅಹಿಂದ ಮುಖಂಡ ಶಿವಣ್ಣ ಮಾತನಾಡಿ, ಪಂಚಮಸಾಲಿ ಶ್ರೀಗಳು ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಸಿದ್ದರಾಮಯ್ಯ ಅವರ ಹೆಸರಿಗೆ ಮಸಿ ಬಳಿಯಲು ಯತ್ನಿಸುತ್ತಿದ್ದಾರೆ. ಬಲಾಢ್ಯರು, ಹಿಂದುಳಿದ ವರ್ಗ 2ಬಿಯಲ್ಲಿ ಶೇ.50ರಷ್ಟು ಹಾಗೂ ಸಾಮಾನ್ಯ ವರ್ಗದಲ್ಲಿ ಶೇ.50ರಷ್ಟು ಪಾಲು ಪಡೆಯುತ್ತಿದ್ದಾರೆ. ಆದ್ದರಿಂದ 199 ಜಾತಿಗಳಿರುವ ಪ್ರವರ್ಗ 2ಎಗೆ ಸೇರಲು ಲಿಂಗಾಯತ ಪಂಚಮಸಾಲಿ ಸೇರಿದಂತೆ ಇತರ ಮುಂದುವರಿದ ಜಾತಿಗಳು ಕಣ್ಣಿಟ್ಟಿರುವುದು ಸರಿಯಲ್ಲ. ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅಂಕಿ–ಅಂಶಗಳನ್ನು ಸರ್ಕಾರ ಬಿಡುಗಡೆ ಮಾಡಬೇಕು. ಅದರಂತೆ ಹೊಸ ಮೀಸಲಾತಿ ಪ್ರಕಟಿಸಬೇಕು. ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2ಎ ಮೀಸಲಾತಿ ಪಟ್ಟಿಗೆ ಸೇರಿಸಲು ಕ್ರಮ ವಹಿಸಿದರೆ ರಾಜ್ಯ ಹಿಂದುಳಿದ ವರ್ಗಗಳ ವೇದಿಕೆಯಿಂದ ರಾಜ್ಯಾದ್ಯಂತ ದೊಡ್ಡ ಮಟ್ಟದ ಹೋರಾಟ ನಡೆಸಲು ತೀರ್ಮಾನಿಸಲಾಯಿತು.

ಕಾಂಗ್ರೆಸ್ ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮುಖಂಡರಾದ ಯೋಗೇಶ್ ಉಪ್ಪಾರ್, ಎಸ್.ರವಿ ನಂದನ್, ಶಿವಣ್ಣ, ರಾಜೇಶ್, ಹರೀಶ್, ಕಲೀಂ, ಕೆಂಪಶೆಟ್ಟಿ, ಸುನಿಲ್, ಮಲ್ಲೇಶ್, ಲಿಂಗರಾಜು, ಹುಣಸೂರು ದೇವಣ್ಣ, ಪಾಪಣ್ಣ, ಹುಚ್ಚೇಗೌಡ, ಕಾಂತರಾಜು ಸೇರಿದಂತೆ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಿಂದ ಕರಪತ್ರ ವಿತರಣೆ



ಬೆಂಗಳೂರಲ್ಲಿ ನಡೆಯಲಿರುವ ಸುವರ್ಣ ಸಂಭ್ರಮ–2025 ಮಹಾಸಮ್ಮೇಳನಕ್ಕೆ ಮೈಸೂರಲ್ಲಿ ಪ್ರಚಾರ ನಡೆಸಲಾಯಿತು.

ಮೈಸೂರು,ಡಿ.14–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಜ.18 ಹಾಗೂ 19ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಸುವರ್ಣ ಸಂಭ್ರಮ 2025 ಮಹಾಸಮ್ಮೇಳನಕ್ಕೆ ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ಡಿ.ಟಿ.ಪ್ರಕಾಶ್ ನೇತೃತ್ವದಲ್ಲಿ ಮೈಸೂರಿನ ಮೊಹಲ್ಲಾ ನಿವಾಸಿಗಳಿಗೆ ಹಾಗೂ ಭಕ್ತಾದಿಗಳಿಗೆ ಸಮಾವೇಶದ ಕರಪತ್ರಗಳನ್ನು ನೀಡಿ, ಆಹ್ವಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ಸಮಾವೇಶಕ್ಕೆ ಎರಡೂ ದಿನಗಳು ದೇವಸ್ಥಾನದ ವತಿಯಿಂದ ಎರಡು ಬಸ್ಸುಗಳಲ್ಲಿ ಭಕ್ತಾದಿಗಳಿಗೆ ವ್ಯವಸ್ಥೆ ಮಾಡಲಾಗಿದ್ದು, ಸಮಾವೇಶವನ್ನು ಅತ್ಯಂತ ಯಶಸ್ವಿಗೊಳಿಸಬೇಕೆಂದು ಕೋರಿದರು.

ಚಾಣಕ್ಯ ಫೈನಾನ್ಸ್ ಸಂತ್ರಸ್ತರಿಗೆ ದಕ್ಕಿದ ಠೇವಣಿ ಹಣ

ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಸಫಲ

ಮೋಹನ್ ಕಾಂಯಕ

ಮೈಸೂರು, ಡಿ.14– ಸ್ಥಿರ ಠೇವಣಿ (ಫಿಕ್ಸೆಡ್ ಡೆಪಾಸಿಟ್) ಮೇಲೆ ಅತೀ ಹೆಚ್ಚು ಬಡ್ಡಿದರ ನೀಡುವುದಾಗಿ ಕೋಟ್ಯಾಂತರ ರೂ ಮಟಿಸಿದ್ದ ಚಾಣಕ್ಯ ಫೈನಾನ್ಸ್‌ನಿಂದ ನೊಂದ ಗ್ರಾಹಕರಿಗೆ ನ್ಯಾಯ ಒದಗಿಸುವಲ್ಲಿ ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಬಹುತೇಕ ಸಫಲವಾಗಿದೆ.



ಕಳೆದ ಎರಡು ವರ್ಷಗಳಿಂದ ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, 860 ಕೇಸ್‌ಗಳಿಂದ 384 ಕೇಸ್‌ಗಳಿಗೆ ತಂದಿಳಿಸಿದೆ. ಹತ್ತಾರು ವರ್ಷಗಳಿಂದ ಇತ್ಯರ್ಥವಾಗದ ಕೇಸ್‌ಗಳನ್ನು ಇತ್ಯರ್ಥಪಡಿಸಿ, ನೊಂದವರಿಗೆ ನ್ಯಾಯ ಒದಗಿಸಲಾಗುತ್ತಿದೆ. ಪ್ರತೀ ತಿಂಗಳು ದಾಖಲಾಗುವ 40–50 ಕೇಸ್‌ಗಳನ್ನು ಕಡಿಮೆ ಸಮಯದಲ್ಲಿ ಇತ್ಯರ್ಥ ಪಡಿಸುವುದರ ಜೊತೆಗೆ ಹಳೇ ಪ್ರಕರಣಗಳನ್ನು ವಿಚಾರಣೆ ನಡೆಸಿ ಇತ್ಯರ್ಥಪಡಿಸಲಾಗುತ್ತಿದೆ.

-ಎ.ಕೆ.ನವೀನ್ ಕುಮಾರಿ, ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

ಮೈಸೂರಿನ ಮಂಡಿ ಮೊಹಲ್ಲಾದ ಬೆಂಕಿ ನವಾಬ್ ರಸ್ತೆಯಲ್ಲಿದ್ದ ಚಾಣಕ್ಯ ಫೈನಾನ್ಸ್‌ನಲ್ಲಿ 10 ಸಾವಿರ ರೂ.ಗಳಿಂದ 10 ಲಕ್ಷ ರೂ.ವರೆಗೆ ಫಿಕ್ಸೆಡ್ ಡೆಪಾಸಿಟ್ ಇಟ್ಟಿದ್ದ ನೂರಾರು ಗ್ರಾಹಕರಿಗೆ 7 ಕೋಟಿ ರೂ.ಗಳಷ್ಟು ವಂಚಿಸಲಾಗಿತ್ತು ಈ ಸಂಬಂಧ ದಾಖಲಾಗಿದ್ದ 500ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಬಹುತೇಕ ಪ್ರಕರಣಗಳನ್ನು ಇತ್ಯರ್ಥಪಡಿಸಿ, ನೊಂದ ಗ್ರಾಹಕರು ತಾವು ಠೇವಣಿ ಇಟ್ಟಿದ್ದ ಹಣ(ಬಡ್ಡಿ ಹೊರತುಪಡಿಸಿ)ವನ್ನು ವಾಪಸ್ ಕೊಡಿಸುವಲ್ಲಿ ಜಿಲ್ಲಾ ಗ್ರಾಹಕರ ಆಯೋಗ ಯಶಸ್ವಿಯಾಗಿದೆ.

2010ರಲ್ಲಿ ವಂಚನೆ ಪ್ರಕರಣ ನಡೆದಿದ್ದು, ಚಾಣಕ್ಯ ಫೈನಾನ್ಸ್ ಒಡೆತನದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಪ್ರಕ್ರಿಯೆ ನಡೆಸಿರುವ ಆಯೋಗವು ಹರಾಜಿನಿಂದ ಬಂದ ಹಣವನ್ನು ನೊಂದ ಗ್ರಾಹಕರಿಗೆ ನೀಡುವ ಕಾರ್ಯದಲ್ಲಿ ತೊಡಗಿದೆ. ಇದುವರೆಗೆ 4.40 ಕೋಟಿ ರೂ.ಹಣವನ್ನು ನೀಡಿದ್ದು, ಇನ್ನೂ 1.38 ಕೋಟಿ ರೂ.ಹಣವನ್ನು ವಿತರಿಸುತ್ತಿದೆ.

2 ಬಾರಿ ಹರಾಜು: ಮೈಸೂರಿನ ವಿಶ್ವೇಶ್ವರನಗರದಲ್ಲಿ ಚಾಣಕ್ಯ ಫೈನಾನ್ಸ್ ಒಡೆತನದಲ್ಲಿದ್ದ ಕಲ್ಯಾಣ ಮಂಟಪವನ್ನು ವಶಕ್ಕೆ ಪಡೆದ ಆಯೋಗವು ಮೊದಲ ಬಾರಿ ಸೆ.18ರಂದು ಹರಾಜು ಪ್ರಕ್ರಿಯೆ ನಡೆಸಿದೆ ಆದರೆ ಕಲ್ಯಾಣ ಮಂಟಪ ಖರೀದಿಸುವವರು ಭಾಗವಹಿಸದ ಕಾರಣ ಮತ್ತೆ ಸೆ.25 ರಂದು ಹರಾಜು ನಡೆಸಿದೆ. ಕಲ್ಯಾಣ ಮಂಟಪದ ಮೂಲ ಬೆಲೆ 5.10 ಕೋಟಿ ರೂ.ಗಳಾಗಿದ್ದು, ಅಂತಿಮವಾಗಿ 5,78,16,000 ರೂ.ಗೆ ಮಾರಾಟವಾಗಿದೆ.

325 ಮಂದಿಗೆ ಠೇವಣಿ ಹಣ ವಾಪಸ್: ಆಯೋಗವು ಚಾಣಕ್ಯ ಫೈನಾನ್ಸ್‌ನಲ್ಲಿ ಹೆಚ್ಚಿನ ಬಡ್ಡಿ ಆಸೆಗೆ ಎಫ್‌ಡಿ ಇಟ್ಟಿದ್ದ 500ಕ್ಕೂ ಹೆಚ್ಚು ಮಂದಿ ಗ್ರಾಹಕರಲ್ಲಿ 325 ಮಂದಿಗೆ ಬಡ್ಡಿ ಹೊರತುಪಡಿಸಿ, ಅಸಲು ಹಣವನ್ನು ಚೆಕ್ ಮೂಲಕ ವಾಪಸ್ ನೀಡಿದೆ. ಇನ್ನೂ ನೊಂದ ಗ್ರಾಹಕರು ಹಣ ಪಡೆದುಕೊಳ್ಳಲು ಬರುತ್ತಿದ್ದು, ಜನವರಿ ತಿಂಗಳಾಂತ್ಯಕ್ಕೆ ಚಾಣಕ್ಯ ಫೈನಾನ್ಸ್ ವಿರುದ್ಧ ಪ್ರಕರಣ ದಾಖಲಿಸಿದ್ದ ಬಹುತೇಕ ಮಂದಿ ಹಣ ವಾಪಸ್ಸಾಗಲಿದೆ.

13 ವರ್ಷಗಳ ನಂತರ ಚುರುಕು: ವಂಚನೆ ಪ್ರಕರಣ ನಡೆದು 12 ವರ್ಷ ಕಳೆದರೂ ನೊಂದ ಗ್ರಾಹಕರ ಅಲೆದಾಟ ತಪ್ಪಿರಲಿಲ್ಲ. ಕುಂಟುತ್ತಾ ಸಾಗುತ್ತಿದ್ದ ಪ್ರಕರಣವನ್ನು ಕೈಗೆತ್ತಿಕೊಂಡ ಜಿಲ್ಲಾ ನಿವೃತ್ತ ನ್ಯಾಯಾಧೀಶರೂ ಆದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಅಧ್ಯಕ್ಷರಾದ ಎ.ಕೆ.ನವೀನ್ ಕುಮಾರಿ ಅವರು, ತ್ವರಿತವಾಗಿ ನೊಂದ ಗ್ರಾಹಕರಿಗೆ ನ್ಯಾಯ ಒದಗಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಚಾಣಕ್ಯ ಫೈನಾನ್ಸ್‌ನಲ್ಲಿ ಎಫ್‌ಡಿ ಇಟ್ಟು ಮೋಸ ಹೋಗಿರುವ ಗ್ರಾಹಕರು ಆಧಾರ್ ಕಾರ್ಡ್, ಫೈನಾನ್ಸ್‌ಗೆ ಹಣ ಕಟ್ಟಿರುವ ಅಸಲಿ ರಸೀದಿ ಹಾಗೂ ಪ್ರಕರಣದ ನಂಬರ್ ಸಮೇತ ಆಯೋಗಕ್ಕೆ ಭೇಟಿ ನೀಡಿದರೆ, ಪರಿಶೀಲಿಸಿ ಕಳೆದುಕೊಂಡಿರುವ ಹಣವನ್ನು ವಾಪಸ್ ಕೊಡಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಹೆಚ್ಚಿನ ಬಡ್ಡಿ ಆಸೆ ತೋರಿಸಿ ಮೋಸ: ಸಾಮಾನ್ಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಫಿಕ್ಸೆಡ್ ಡೆಪಾಸಿಟ್‌ಗೆ ಶೇ.6 ರಿಂದ 8ರವರೆಗೆ ಬಡ್ಡಿದರ ಇದ್ದರೆ, ಖಾಸಗಿ ಫೈನಾನ್ಸ್ ಕಂಪನಿಗಳಲ್ಲಿ ಶೇ.8ಕ್ಕೂ ಹೆಚ್ಚಿನ ಬಡ್ಡಿ ದರ ನಿಗದಿ ಮಾಡಿರುವುದನ್ನು ಗಮನಿಸುತ್ತೇವೆ ಹೆಚ್ಚಿನ ಆಸೆಗೆ ಖಾಸಗಿ ಫೈನಾನ್ಸ್‌ಗಳಲ್ಲಿ ಎಫ್‌ಡಿ ಇಟ್ಟು ಮೋಸ ಹೋಗುವುದು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದೆ. ಖಾಸಗಿ ಫೈನಾನ್ಸ್‌ಗಳಲ್ಲಿ ಎಫ್‌ಡಿ ಅಥವಾ ಇನ್ನಿತರೆ ಆರ್ಥಿಕ ವ್ಯವಹಾರಕ್ಕೂ ಮುನ್ನ ಗ್ರಾಹಕರು ಫೈನಾನ್ಸ್‌ನ ಪೂರ್ವಪರ ತಿಳಿಯುವುದು ಅವಶ್ಯ ಎಂದು ಎಚ್ಚರಿಸಿದರು.

ಡಿ.18, ಶ್ರೀಮದ್ ಭಗವದ್ಗೀತಾ ಸಾಮೂಹಿಕ ಪಠಣ ಕಾರ್ಯಕ್ರಮ

ಮೈಸೂರು,ಡಿ.14(ಬಿಎಲ್‌ಯು)– ಕೃಷ್ಣನ ಕರೆ ಸಂಸ್ಥೆಯು ಮೈಸೂರಿನ ಮಹರ್ಷಿ ಪಬ್ಲಿಕ್ ಶಾಲಾ ಆವರಣದಲ್ಲಿ ಡಿ.18ರಂದು ಶ್ರೀಮದ್ ಭಗವದ್ಗೀತಾ ಸಾಮೂಹಿಕ ಪಠಣ ಕಾರ್ಯಕ್ರಮ ಆಯೋಜಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಗಣೇಶ್‌ರಾವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಶಾಲೆ ವತಿಯಿಂದ 27 ಅಡಿ ಎತ್ತರದ ಶ್ರೀಮನ್ ಮಹಾವಿಷ್ಣುವಿನ ಮೂರ್ತಿ ಅನಾವರಣಗೊಳಿಸಲಾಗುವುದು ಎಂದು ಹೇಳಿದರು.

ಶ್ರೀ ಅವಧೂತ ದತ್ತಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಮಾತಾ ಅಮೃತಾನಂದಮಯಿ ಮಠದ ಬೆಂಗಳೂರು ಶಾಖೆಯ ಗುರುಗಳಾದ ಶ್ರೀ ಆತ್ಮನಿರತಾಮೃತ ಚೈತನ್ಯ ಸ್ವಾಮಿ, ಶ್ರೀಶಂಕಾ ಆಧ್ಯಾತ್ಮಿಕ ಪ್ರತಿಷ್ಠಾನದ ಗುರುಗಳಾದ ಶ್ರೀ ಮುರುಳೀಧರ ಶರ್ಮ, ವಿದ್ಯಾಸಂಸ್ಥೆಯ ಮುಖ್ಯ ಟ್ರಸ್ಟಿ ಭವಾನಿ ಶಂಕರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮುಖ್ಯ ಭಾಷಣಕಾರರಾಗಿ ಆಗಮಿಸಲಿದ್ದು, ಚಿಕ್ಕಮಗಳೂರಿನ ಹೆಚ್.ಎಂ.ನಾಗರಾಜರಾವ್ ಕಲ್ಕಟ್ಟೆ ಉಪಸ್ಥಿತರಿರುವರು ಎಂದರು. ಕಾರ್ಯಕ್ರಮದಲ್ಲಿ ಸುಮಾರು 7 ಸಾವಿರ ವಿದ್ಯಾರ್ಥಿಗಳು ಭಾಗವಹಿಸಲಿದ್ದು, ವಿದ್ಯಾರ್ಥಿಗಳ ಗೀತಾ ಕಲಿಕೆಗೆ ಇದು ಸೂಕ್ತ ವೇದಿಕೆ ಎಂದರು. ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ಕೋಕಿಲಾ, ಖಜಾಂಚಿ ಸುಧಾ ಸಿಂಧು, ಟ್ರಸ್ಟಿ ಮಲ್ಲೇಶ್ ಬಾಬು, ವಿಶೇಷ ಸಲಹೆಗಾರ ಗಣೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಡಿಸೆಂಬರ್ 17ರಂದು ಪಿಂಚಣಿ ದಿನಾಚರಣೆ

ಮೈಸೂರು, ಡಿ.14(ಬಿಎಲ್‌ಯು)– ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಹಾಗೂ ವಿಶ್ರಾಂತ ಉದ್ಯೋಗಿಗಳ ಸಂಘ ಮೈಸೂರಿನ ವೀಣೆ ಶೇಷಣ್ಣ ಭವನದಲ್ಲಿ ಡಿ.17ರಂದು ಪಿಂಚಣಿ ದಿನಾಚರಣೆ ಆಯೋಜಿಸಿದೆ ಎಂದು ಸಂಘದ ಅಧ್ಯಕ್ಷ ಬಿ.ಆರ್.ಉಮಾಕಾಂತ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ವೇಳೆ ಜಿಲ್ಲಾ ಖಜಾನೆ ಹಾಗೂ ಆದಾಯ ತೆರಿಗೆ ಇಲಾಖೆ ಮುಖ್ಯಸ್ಥರಿಂದ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ 2025 ನೇ ಇಸವಿ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದು, ಅತಿ ಹಿರಿಯರಿಗೆ ಸನ್ಮಾನ ಕಾರ್ಯಕ್ರಮ ಕೂಡ ಏರ್ಪಡಿಸಲಾಗಿದೆ ಎಂದರು.

70 ವರ್ಷ ತುಂಬಿದ ಹಿರಿಯರಿಗೆ ಸ್ಥಳದಲ್ಲೇ ಆಯುಷ್ಮಾನ್ ಕಾರ್ಡ್ ನೀಡಲಿದ್ದು, ಆಧಾರ್ ಕಾರ್ಡ್ ಹಾಗೂ ಇದಕ್ಕೆ ಲಿಂಕ್ ಆಗಿರುವ ಮೊಬೈಲ್ ತರಬೇಕು ಎಂದರು.

ಶ್ರೀ ರಾಮಕೃಷ್ಣ ವಿದ್ಯಾಮಂದಿರದಲ್ಲಿ ಡಿ.29ರಂದು ಬೆಳಗ್ಗೆ 11 ಗಂಟೆಗೆ ಹಾರ್ಟ್ ಆರ್ಗನೈಸೇಷನ್ ಇನ್ಸ್ಟಿಟ್ಯೂಟ್ ವತಿಯಿಂದ ಆರೋಗ್ಯ ಉಚಿತ ತಪಾಸಣೆ ಶಿಬಿರ ಆಯೋಜಿಸಿದ್ದು, ಪಿಂಚಣಿದಾರರು ಹಾಗೂ ಹಿರಿಯ ನಾಗರಿಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಚಿಕ್ಕಲಿಂಗಸ್ವಾಮಿ, ಸಹ ಕಾರ್ಯದರ್ಶಿ ನಾಗೇಶ್, ನಿರ್ದೇಶಕ ಕೃಷ್ಣಶೆಟ್ಟಿ, ಶಂಕರ್, ಶ್ರೀನಿವಾಸ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಕೋವಿಡ್ ಅಕ್ರಮ ಆರೋಪ: ಖಾಸಗಿ ಕಂಪೆನಿ, ವೈದ್ಯಕೀಯ ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಬೆಂಗಳೂರು, ಡಿ.14–ಮಹಾಮಾರಿ ಕೊರೊನಾ ಚಿಕಿತ್ಸೆಯ ವೇಳೆ ಪಿಪಿಇ ಕಿಟ್ ಹಾಗೂ ಎನ್ 95 ಮಾಸ್ಕ್‌ಗಳನ್ನು ನಿಯಮಬಾಹಿರವಾಗಿ ಖರೀದಿಸಿ ಸರ್ಕಾರ ಬೊಕ್ಕಸಕ್ಕೆ ಸುಮಾರು 167 ಕೋಟಿ ರೂ. ನಷ್ಟ ಮಾಡಿದ ಆರೋಪ ಸಂಬಂಧ ಖಾಸಗಿ ಕಂಪನಿಗಳ ಮಾಲೀಕರು ಹಾಗೂ ವೈದ್ಯಕೀಯ ಇಲಾಖೆಯ ಅಧಿಕಾರಿಗಳ ವಿರುದ್ಧ ವಿಧಾನ ಸೌಧ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖ್ಯ ಲೆಕ್ಕ ಪತ್ರಾಧಿಕಾರಿ ಡಾ.ಎಂ.ವಿಷ್ಣುಪ್ರಸಾದ್ ನೀಡಿದ ದೂರು ಆಧರಿಸಿ ವೈದ್ಯ ಡಾ.ಗಿರೀಶ್, ಇಲಾಖೆಯ ಅಧಿಕಾರಿಗಳಾದ ಜೆ.ಪಿ.ರಘು ಮುನಿರಾಜು, ಲಾಜ್ ಎಕ್ಸ್‌ಪರ್ಟ್ ಹಾಗೂ ಪ್ರೊಡೆಂಟ್ ಕಂಪನಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅವ್ಯವಹಾರದಲ್ಲಿ ಜನಪ್ರತಿನಿಧಿಗಳು ಹಾಗೂ ಉನ್ನತ ಅಧಿಕಾರಿಗಳು ಭಾಗಿಯಾಗಿರುವ ಶಂಕೆ ಪ್ರಬಲವಾಗಿದ್ದು, ಎಫ್‌ಐಆರ್‌ನಲ್ಲಿ ಅವರ ಹೆಸರು ಉಲ್ಲೇಖಿಸದೇ ವಿಧಾನಸೌಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಕೋವಿಡ್–19 ಹರಡಿದ್ದ ಸಂದರ್ಭ ದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಕ ಸಾಂಕ್ರಾಮಿಕ ರೋಗ ನಿವಾರಣೆಗೆ ಅತ್ಯವಶ್ಯಕವಾಗಿ ಬೇಕಾಗಿದ್ದ ಎನ್ 95 ಮಾಸ್ಕ್, ಪಿಪಿಇ ಕಿಟ್ ಹಾಗೂ ಇತರ ಸಾಮಗ್ರಿಗಳನ್ನು ಸಂಗ್ರಹಿಸಿರುವ ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಂಡು ಕಾನೂನಿನ ಎಲ್ಲಾ ಪ್ರಕ್ರಿಯೆ ಗಾಳಿಗೆ ತೂರಿ 167 ಕೋಟಿ ರೂಪಾಯಿ ನಷ್ಟ ಉಂಟು ಮಾಡಿರುವ ಆರೋಪವಿದೆ.

2020ರ ಆಗಸ್ಟ್ 18ರಂದು ಸರ್ಕಾರದ ವತಿಯಿಂದ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ 2.59 ಲಕ್ಷ ಎನ್ 95 ಮಾಸ್ಕ್ ಹಾಗೂ 2.59 ಪಿಪಿಇ ಕಿಟ್ ಖರೀದಿಸಲು ಅನುಮತಿ ಪಡೆದುಕೊಳ್ಳಲಾಗಿತ್ತು. ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ, ರಾಜ್ಯದ 17 ಸರ್ಕಾರಿ ಕಾಲೇಜು ಹಾಗೂ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬಳಸಲು ಅನುಮೋದನೆ ನೀಡಲಾಗಿತ್ತು. ಅನುಮೋದನೆ ಪಡೆಯುವಾಗ ಕೆಟಿಪಿಪಿ ಕಾನೂನಿನ ಕಾಯ್ದೆಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸಬೇಕು. 41.35 ಕೋಟಿ ರೂ.ಗಿಂತ ಮೌಲ್ಯದ ಹೆಚ್ಚು ಸಾಮಗ್ರಿ ಖರೀದಿಸಕೂಡದು ಎಂದು ಷರತ್ತು ವಿಧಿಸಲಾಗಿತ್ತು. ಇದರ ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯು ಟೆಂಡರ್ ಕರೆದಿದ್ದು, ಲಾಜ್ ಕೋರ್ಟ್ಸ್ ಸಂಸ್ಥೆಯು ಪಿಪಿಇ ಕಿಟ್ ಸರಬರಾಜು ಮಾಡುವುದಾಗಿ ಬಿಡ್ ಪಡೆದುಕೊಂಡಿತ್ತು. ನಿಗದಿತ ಸಂಖ್ಯೆಯ ಪಿಪಿಇ ಕಿಟ್‌ಗಳನ್ನು 15 ದಿನಗಳೊಳಗೆ ಸರಬರಾಜು ಮಾಡಲು ಆದೇಶಿಸಿದ್ದರೂ ಪಿಇಇ ಕಿಟ್‌ಗಳನ್ನು 17 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ನೀಡಿರುವ ಬಗ್ಗೆ ಯಾವುದೇ ದಾಖಲೆಗಳಲ್ಲಿ ನಮೂದಿಸಿಲ್ಲ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಮುಂಬೈ ಮೂಲದ ಪ್ರೊಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್ ಟೆಂಡರ್‌ನಲ್ಲಿ ಭಾಗವಹಿಸದೇ ಕಾನೂನು ಬಾಹಿರವಾಗಿ ಬಿಡ್ ಪಡೆದು ಕೋಟ್ಯಂತರ ರೂ. ಅಕ್ರಮದಲ್ಲಿ ಭಾಗಿಯಾಗಿದೆ. ಮೇಲಿನ ಡಿಎಂಇ ಅಂದಿನ ನಿರ್ದೇಶಕರು ಡಾ.ಪಿ.ಜಿ.ಗಿರೀಶ್, ಜಂಟಿ ನಿಯಂತ್ರಕರು ರಾಜ್ಯ ಲೆಕ್ಕಪತ್ರ ಇಲಾಖೆಯ ರಘು ಜೆ.ಪಿ. ಮತ್ತು ಆರೋಗ್ಯ ಸಲಕರಣಾಧಿಕಾರಿ ಮುನಿರಾಜು ಮತ್ತು ದೊಡ್ಡ ಮಟ್ಟದಲ್ಲಿ ಹಿಂದಿನ ಸರ್ಕಾರ ರಾಜಕೀಯ ಪ್ರತಿನಿಧಿಗಳು ಅಧಿಕಾರಿಗಳು ಅವ್ಯವಹಾರದಲ್ಲಿ ಶಾಮೀಲಾಗಿದ್ದಾರೆ ಎಂದು ಆರೋಪಿಸಲಾಗಿದೆ. ಅಲ್ಲದೇ, ತುರ್ತು ಪರಿಸ್ಥಿತಿಯ ಲಾಭ ಪಡೆದು ಕೋವಿಡ್–19 ಸಂದರ್ಭದಲ್ಲಿ ಸರ್ಕಾರಕ್ಕೆ ಅಂದಾಜು ಒಟ್ಟು 167 ಕೋಟಿ ರೂ.ಗಳ ಆರ್ಥಿಕ ನಷ್ಟವಾಗಿದೆ ಎಂದು ಎಫ್‌ಐಆರ್‌ನಲ್ಲಿ ವಿಷ್ಣುಪ್ರಸಾದ್ ವಿವರಿಸಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಿದ್ದಾರೆ. ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ರಾಜಕೀಯ ಪ್ರತಿನಿಧಿಗಳಿಗೂ ವಿಚಾರಣೆ ನಡೆಯುವುದು ನಿಶ್ಚಿತವಾಗಿದ್ದು, ಸಮಗ್ರ ವಿಚಾರಣೆಗೆ ಸಿಐಡಿ ಅಥವಾ ಪ್ರತ್ಯೇಕ ಎಸ್‌ಐಟಿ ರಚಿಸುವ ಸಾಧ್ಯತೆಯಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

2025ನೇ ಸಾಲಿನ ದಿನದರ್ಶಿಕೆ ಬಿಡುಗಡೆ



ಮೈಸೂರಿನ ಹೂಟಗಳ್ಳಿ ಕೆಹೆಚ್‌ಬಿ ಬಡಾವಣೆಯ ಶ್ರೀ ಗಾಯತ್ರಿ ವಿಪ್ರ ಸಂಘದ 2025ನೇ ಸಾಲಿನ ದಿನದರ್ಶಿಕೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಬಿಡುಗಡೆಗೊಳಿಸಿದರು. ಸಂಘದ ಅಧ್ಯಕ್ಷ ಯಂ.ನಾರಾಯಣ ಭಟ್, ಉಪಾಧ್ಯಕ್ಷ ಜಗದೀಶ್ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಮಹೇಶ್‌ಕುಮಾರ್, ಸಹ ಕಾರ್ಯದರ್ಶಿ ಎಸ್.ಮಂಜುನಾಥ್ ಜೋಯಿಸ್, ಖಜಾಂಚಿ ಆರ್.ರಘು, ಕಾನೂನು ಸಲಹೆಗಾರ ಎಸ್.ಎಸ್. ವೈದ್ಯನಾಥ, ಸಮಿತಿಯ ಶೈಲಶ್ರೀ ಕೇಶವ, ಮುಖಂಡರಾದ ಮಂಜುನಾಥ್, ರಾಕೇಶ್‌ಭಟ್, ಶ್ರೀನಿವಾಸಪ್ರಸಾದ್, ರಾಘವೇಂದ್ರ ಈ ವೇಳೆ ಉಪಸ್ಥಿತರಿದ್ದರು.

ನಿಧನ



ಪುಟ್ಟಮ್ಮ

ಮೈಸೂರು, ಡಿ.14– ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ಶ್ರೀಮತಿ ಪುಟ್ಟಮ್ಮ(62) ಅವರು ಶನಿವಾರ ನಿಧನರಾದರು. ಇವರು ಪತಿ ಸ್ವಾಮಿ, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಭಾನುವಾರ ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪುಟ್ಟಮ್ಮ ಅವರ ನಿಧನಕ್ಕೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.



ಪ್ರಭಾವತಮ್ಮ

ಮೈಸೂರು, ಡಿ.14–ಮೈಸೂರಿನ ತಿಲಕ್‌ನಗರ ನಿವಾಸಿ ಶ್ರೀಮತಿ ಪ್ರಭಾವತಮ್ಮ (86) ಅವರು ಶನಿವಾರ ನಿಧನರಾದರು. ಇವರು ಪುತ್ರ ಪ್ರಕಾಶ್ ಬಾಬು, ಪುತ್ರಿ ವಸಂತ ಕುಮಾರಿ, ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಬೆಳಿಗ್ಗೆ 11.30ಕ್ಕೆ ಮಹದೇವಪುರ ರಸ್ತೆಯಲ್ಲಿರುವ ಸಿಎಸ್‌ಐ ಸಮಾಧಿಯಲ್ಲಿ ಉತ್ತರಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟಕ್ಕೆ ವಿರೋಧ

'ಮನುವಾದಿಗಳಿಂದ ಹೈಜಾಕ್' ಕನ್ನಡ ಪರ ಹೋರಾಟಗಾರರ ಆಕ್ರೋಶ

ಮೈಸೂರು: ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟ ನಿಷೇಧ ವಿಚಾರ ಚರ್ಚೆಯ ಮುನ್ನಲೆಗೆ ಬಂದಿದೆ. ಇದರೊಂದಿಗೆ ಮಂಡ್ಯದಲ್ಲಿ ಡಿ. 20ರಿಂದ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮತ್ತೊಂದು ವಿವಾದ ಸುತ್ತಿಕೊಂಡಿದೆ. ಆಹಾರ ವಿಷಯವಾಗಿ ಸಾಕಷ್ಟು ವಿವಾದ ಉಂಟಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಮದ್ಯ ಮತ್ತು ಧೂಮಪಾನದ ಜೊತೆಗೆ ಮಾಂಸಾಹಾರವನ್ನು ಸೇರಿಸಿದೆ. ಇದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಗಿದೆ.

ಇದು ಅನೇಕ ಕನ್ನಡ ಕಾರ್ಯಕರ್ತರು, ಪ್ರಗತಿಪರ ಸಂಘಟನೆಗಳು ಮತ್ತು ಇತರರನ್ನು ಕೆರಳಿಸಿದೆ, ಅವರು ತಮ್ಮ ಆಹಾರ ಪದ್ಧತಿ ಅಥವಾ ಆಯ್ಕೆಗಳನ್ನು ಪ್ರಶ್ನಿಸುವ ಹಕ್ಕು ಸಂಘಟಕರಿಗೆ ಇಲ್ಲ ಎಂದು ಪ್ರತಿಪಾದಿಸಿದ್ದಾರೆ. ಸಮ್ಮೇಳನದಲ್ಲಿ ಮಾಂಸಾಹಾರ ನೀಡುವಂತೆ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಎಚ್ ಡಿ ಜಿಯಾರಾಮ್ ಮನವಿ ಸಲ್ಲಿಸಿದರು. ವಿವಿಧ ವಲಯಗಳಿಂದ ತೊಂದರೆ ಮತ್ತು ಟೀಕೆಗಳನ್ನು ಗ್ರಹಿಸಿದ ಪರಿಷತ್ತು ಮೆನುವಿನಿಂದ ಮಾಂಸಾಹಾರಿ ಭಕ್ಷ್ಯಗಳನ್ನು ತೆಗೆದುಹಾಕಿತು. ಡಿಸೆಂಬರ್ 20 ರಿಂದ ನಡೆಯಲಿರುವ ಮೂರು ದಿನಗಳ ಸಮ್ಮೇಳನಕ್ಕೆ ನಿರ್ಬಂಧಗಳನ್ನು ವಿಧಿಸಿತು. ಆದರೆ ನಿರ್ಬಂಧಿತ ವಸ್ತುಗಳಲ್ಲಿ ಮಾಂಸಾಹಾರವನ್ನು ಸೇರಿಸುವಂತೆ ಕನ್ನಡಪರ ಹೋರಾಟಗಾರರು ಹಾಗೂ ಇತರರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರಿಂದ ಸಮಸ್ಯೆಗೆ ಕಡಿವಾಣ ಬಿದ್ದಿಲ್ಲ.

ಜಿಲ್ಲಾಧಿಕಾರಿ ಕಚೇರಿ ಎದುರು ಮೊಟ್ಟೆ ಸೇವಿಸಿ ಪ್ರತಿಭಟನೆ ನಡೆಸಿದ ಅವರು, ಸ್ಥಳದಲ್ಲಿಯೇ ಮೊಟ್ಟೆ ಬಡಿಸುವುದಾಗಿ ಬೆದರಿಕೆ ಹಾಕಿದ್ದಾರೆ. 'ಮನುವಾದಿಗಳು' ಸಮ್ಮೇಳನವನ್ನು ಹೈಜಾಕ್ ಮಾಡಿದ್ದಾರೆ ಎಂದು ಆರೋಪಿಸಿದರು. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, ಬಡಿಸುವ ಆಹಾರವನ್ನು ಆಹಾರ ಸಮಿತಿ ನಿರ್ಧರಿಸುತ್ತದೆ ಅದು ಪರಿಷತ್ತಿನ ಕೆಲಸವಲ್ಲ. ಮುಷ್ಕರ ನಿರತ ಸಂಘಟನೆಗಳೊಂದಿಗೆ ಮಾತುಕತೆ ನಡೆಸುವುದಾಗಿ ಜಿಲ್ಲಾ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ. ಹಿಂದಿನ ಯಾವುದೇ ಸಮ್ಮೇಳನಗಳಲ್ಲಿ ಮಾಂಸಾಹಾರ ನೀಡಿರಲಿಲ್ಲ, ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಎರಡೂ ಖಾದ್ಯಗಳನ್ನು ಬಡಿಸಲು ಶ್ರೀರಂಗಪಟ್ಟಣ ಶಾಸಕ ರಮೇಶ ಬಂಡಿಸಿದ್ದೇಗೌಡ ನೇತೃತ್ವದ ಕನ್ನಡ ಸಾಹಿತ್ಯ ಸಮ್ಮೇಳನದ ಆಹಾರ ಸಮಿತಿ ನಿರ್ಧರಿಸಿತ್ತು.

ಅಖಿಲ ಭಾರತ ವಕೀಲರ ಒಕ್ಕೂಟವು ಮಾಂಸಾಹಾರದ ಮೇಲಿನ ನಿಷೇಧವು ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದು ಗಮನಿಸಿ ಕಾನೂನು ಹೋರಾಟದ ಎಚ್ಚರಿಕೆ ನೀಡಿದೆ. ನ್ಯಾಯವಾದಿ ಬಿ.ಟಿ.ವಿಶ್ವನಾಥ್ ಮಾತನಾಡಿ, ತೆರಿಗೆದಾರರ ಹಣದಿಂದ ಸಮ್ಮೇಳನ ನಡೆಸಲಾಗುತ್ತಿದ್ದು, ಸಂವಿಧಾನದಲ್ಲಿ ಅಂತಹ ಅವಕಾಶ ಇಲ್ಲದಿರುವಾಗ ಮಾಂಸಾಹಾರದ ಸಂಪೂರ್ಣ ನಿಷೇಧ ಕಾನೂನಿಗೆ ವಿರುದ್ಧವಾಗಿದೆ ಎಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಸ್ಥಿಕೆ ವಹಿಸಿ ಸಮಸ್ಯೆ ಬಗೆಹರಿಸುವಂತೆ ಫೆಡರೇಷನ್ ಮನವಿ ಮಾಡಿದ್ದು, ಪ್ರತಿಭಟನೆ ನಡೆಸುತ್ತಿರುವ ಸಂಘಟನೆಗಳಿಗೆ ನೈತಿಕ ಬೆಂಬಲ ನೀಡಿದೆ.

ಸಿಐಟಿಯು ವತಿಯಿಂದ ಡಿಸಿ ಕಚೇರಿ ಮುಂದೆ 3 ದಿನ ಪ್ರತಿಭಟನೆ

ಮೈಸೂರು,ಡಿ.14(ಬಿಎಲ್‌ಯು)– ಕನಿಷ್ಟ ಕೂಲಿ ಪರಿಷ್ಕರಣೆ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿ.17 ರಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ 3 ದಿನಗಳ ಪ್ರತಿಭಟನಾ ಧರಣಿ ನಡೆಸಲಾಗುವುದು ಎಂದು ಸಿಐಟಿಯು ಮೈಸೂರು ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಎನ್.ಕೆ.ಬಾಲಾಜಿರಾವ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.17 ಮತ್ತು 18ರಂದು ನಡೆಯುವ ಪ್ರತಿಭಟನೆಯಲ್ಲಿ ಅಂಗನವಾಡಿ ಕಾರ್ಯಕರ್ತರು ಭಾಗಿಯಾಗಲಿದ್ದು, ಡಿ.19ರಂದು ನಡೆಯುವ ಪ್ರತಿಭಟನೆಯಲ್ಲಿ ಕಟ್ಟಡ ಕಾರ್ಮಿಕರು ಸೇರಿದಂತೆ ಇತರೆ ನೌಕರರು ಪಾಲ್ಗೊಳ್ಳಲಿದ್ದಾರೆ ಎಂದರು. ಪದಾಧಿಕಾರಿ ಜಯರಾಂ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ ಭಾನುವಾರ 15 ಡಿಸೆಂಬರ್ 2024

ಕಂದಾಯ ಇಲಾಖೆಯಿಂದ ವಾರದೊಳಗೆ 271 ಪೋಡಿ ದುರಸ್ತಿ

ಮಂಡ್ಯ, ಡಿ.14– ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಮಹತ್ವದ ಕೆಲಸ ಪ್ರಾರಂಭಿಸಲಾಗಿದ್ದು, ಒಂದೇ ವಾರದಲ್ಲಿ 414 ಪ್ರಕರಣಗಳನ್ನು ಅಳತೆ ಮಾಡಿ 271 ಪೋಡಿ ದುರಸ್ತಿ ಮಾಡಿ ಹೊಸ ಪಹಣಿ ಮತ್ತು ಪೋಡಿ ದಾಖಲೆ ವಿತರಣೆ ಮಾಡಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ನಾಗಮಂಗಲ ತಾಲೂಕಿನಲ್ಲಿ ದರಖಾಸ್ತು ಪೋಡಿ ದುರಸ್ತಿ ಸರಳೀಕೃತ ಕಾರ್ಯಾಚರಣೆಗೆ ಚಾಲನೆ ಹಾಗೂ ಹೊಸ ಪಹಣಿ ಮತ್ತು ಪೋಡಿ ಆಂದೋಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಒಂದು ವರ್ಷಕ್ಕೆ ಹಲವು ಕಾರಣಗಳಿಂದ ಕೇವಲ 100 ಪೋಡಿ ದುರಸ್ತಿ ಮಾಡಲಾಗುತ್ತಿತ್ತು. ಈ ಕೆಲಸವನ್ನು ಸರಳೀಕರಣಗೊಳಿಸಿ ಎಲ್ಲಾ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಂಗ್ರಹಿಸಿಡುವ ಕೆಲಸ ಮಾಡಲಾಗುತ್ತಿದೆ. ಕಂದಾಯ ಇಲಾಖೆಯನ್ನು ಚುರುಕುಗೊಳಿಸಲಾಗಿದ್ದು, ಅಧಿಕಾರಿಗಳು ಹಾಗೂ ಸಿಬ್ಬಂದಿ ಪ್ರಸ್ತುತ ಕಂದಾಯ ಇಲಾಖೆ ಕೆಲಸಗಳನ್ನು ಜನರ ಮನೆ ಬಾಗಿಲಿಗೆ ತೆರಳಿ ಮಾಡಿಕೊಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಪೋಡಿ ದುರಸ್ತಿ ಸರಳೀಕೃತ ಕಾರ್ಯ ಅಭಿಯಾನಕ್ಕೆ ಚಾಲನೆ ನೀಡಿ, ಸರ್ವೆ ಮಾಡುವ ವಿಚಾರದಲ್ಲಿ 1 ವರ್ಷದಿಂದ ಸರ್ವೆ ಹಾಗೂ ರೆವಿನ್ಯೂ ಇಲಾಖೆಯವರು ಚರ್ಚಿಸಿ 5 ಹಂತದಲ್ಲಿ ಮಾಡಲಾಗುತ್ತಿದ್ದ ಕೆಲಸವನ್ನು ಈಗ ಕೇವಲ 2 ಹಂತಕ್ಕೆ ಇಳಿಸಿ ಆನ್‌ಲೈನ್‌ನಲ್ಲಿ ಸರಳೀಕೃತಗೊಳಿಸಲಾಗಿದೆ ಎಂದರು.

ಉಪವಿಭಾಗಾಧಿಕಾರಿ ನ್ಯಾಯಾಲಯ ಹಾಗೂ ತಹಸೀಲ್ದಾರ್ ನ್ಯಾಯಾಲಯದಲ್ಲಿ ಇದ್ದಂತಹ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡುವ ಮೂಲಕ ಹಳೆಯ ಪ್ರಕರಣಗಳನ್ನು ಕಡಿಮೆಗೊಳಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಪೌತಿ ಆಂದೋಲನಕ್ಕೆ ಸಂಬಂಧಪಟ್ಟಂತೆ ಅನೇಕ ಕೆಲಸ ಕಾರ್ಯಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿದ್ದಾರೆ. ಕಂದಾಯ ಇಲಾಖೆಯಲ್ಲಿ 46 ವರ್ಷಗಳಿಂದ ಬಾಕಿ ಇದ್ದ ದರಖಾಸ್ತು ಪೋಡಿಯನ್ನು ಇಂದು ನಮ್ಮ ಸರ್ಕಾರ ದುರಸ್ತಿ ಮಾಡಿಕೊಡುತ್ತಿದೆ. ಜಿಲ್ಲೆಯಲ್ಲಿ ಸುಮಾರು 30 ಸಾವಿರ ರೈತ ಕುಟುಂಬಗಳಿಗೆ ಸರ್ಕಾರದಿಂದ ಮಂಜೂರಾಗಿರುವ ಜಮೀನು/ಸರ್ಕಾರಿ ಭೂಮಿ ಇಂದಿಗೂ ದುರಸ್ತಿಯಾಗದೆ ಬಾಕಿ ಇದೆ.

ಜಿಲ್ಲೆಯಲ್ಲಿ ದರಖಾಸ್ತು ಪೋಡಿ ದುರಸ್ತಿ ಅಭಿಯಾನಕ್ಕೆ 3,281 ಪ್ರಕರಣಗಳ ಗುರಿ ನಿಗದಿಗೊಳಿಸಲಾಗಿದೆ. ಅದರಲ್ಲಿ 414 ಪ್ರಕರಣಗಳ ಸರ್ವೆ ಆಗಿದ್ದು, ಇದರಲ್ಲಿ 271 ಜನರಿಗೆ ಪಹಣಿಯನ್ನು ನಾವು ಇಂದು ಮಾಡಿಕೊಡುತ್ತಿದ್ದೇವೆ. ಮುಂದಿನ 6 ತಿಂಗಳಲ್ಲಿ ಉಳಿದ ಸರ್ವೆಗಳನ್ನು ಪೂರ್ಣಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದರು.

ಕಂದಾಯ ಸಚಿವ ಕೃಷ್ಣ ಭೈರೇಗೌಡ ಮಾಹಿತಿ


ಕಾರ್ಯಕ್ರಮವನ್ನು ಕಂದಾಯ ಸಚಿವ ಕೃಷ್ಣ ಭೈರೇಗೌಡ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ಜನರ ಮನೆ ಬಾಗಿಲಿಗೆ ಯೋಜನೆಗಳು

ಮಂಡ್ಯ: ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಬದಲಾವಣೆ ತರುವ ಮೂಲಕ ಕಂದಾಯ ಇಲಾಖೆಯಲ್ಲಿ ಸುಧಾರಣೆ ತರಲಾಗಿದೆ. ಜನಸಾಮಾನ್ಯರ ಸಮಸ್ಯೆ ಬಗೆಹರಿಸಲು ಶ್ರಮಿಸುವ ಮೂಲಕ ಸ್ಪಂದಿಸಿದ್ದೇವೆ. ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತೆರಳಿ ಮಾಡಿಕೊಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಕಂದಾಯ ಸಚಿವ ಕೃಷ್ಣ ಭೈರೇಗೌಡರು ಮನೆ ಮನೆಗೆ ತೆರಳಿ ಖಾತೆ ಮಾಡಿಕೊಡಬೇಕೆಂಬ ಆದೇಶ ಹೊರಡಿಸಿದ್ದಾರೆ. ಹಲವು ದಿನಗಳಿಂದ ಬಾಕಿ ಇದ್ದ 15 ಸಾವಿರ ಪ್ರಕರಣಗಳ ಪೈಕಿ 13 ಸಾವಿರ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. ಕೇವಲ 1 ವಾರದಲ್ಲಿ 416 ಪ್ರಕರಣಗಳ ಸರ್ವೆ ಮಾಡಲಾಗಿದೆ. ಜೊತೆಗೆ ಪೌತಿ ಖಾತೆಗಳನ್ನು ಸರಿಯಾದ ರೀತಿ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿರುವ ಕಂದಾಯ ಇಲಾಖೆ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲಾಗುತ್ತಿದೆ. 1960, 70ರಲ್ಲಿ ಮಂಜೂರಾಗಿರುವ ಕಂದಾಯ ಇಲಾಖೆಯ ದರಖಾಸ್ತು ಪೋಡಿ ದುರಸ್ತಿ ಸರಳೀಕೃತ ಕಾರ್ಯದ ಹೊಸ ಪಹಣಿ ಮತ್ತು ಪೋಡಿ ದಾಖಲೆಗೆ ಸಂಬಂಧಪಟ್ಟಂತೆ ಶಾಶ್ವತ ದಾಖಲೆಗಳನ್ನು ನೀಡಲಾಗುತ್ತಿದೆ ಎಂದರು.

ನಮ್ಮ ಸರ್ಕಾರ ಜನರ ಮನೆ ಬಾಗಿಲಿಗೆ ಅನೇಕ ಯೋಜನೆಗಳನ್ನು ನೀಡುವ ಮೂಲಕ ಅನುಕೂಲ ಮಾಡುತ್ತಿದೆ. ಸರ್ಕಾರದ ಪಂಚ ಗ್ಯಾರಂಟಿಗಳಾದ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವ ನಿಧಿ, ಅನ್ನಭಾಗ್ಯ ಯೋಜನೆಗಳಿಂದ ಸಾರ್ವಜನಿಕರು ಸದುಪಯೋಗ ಪಡೆಯುತ್ತಿದ್ದಾರೆ ಎಂದರು.

ಇದೇ ವೇಳೆ ಕೃಷಿ ಇಲಾಖೆ ವತಿಯಿಂದ ಡೀಸೆಲ್ ಇಂಜಿನ್, ಪಿವಿಸಿ ಪೈಪ್, ರಾಗಿ ಫ್ಲೋರ್ ಮಿಲ್ ಸೇರಿದಂತೆ 380 ಫಲಾನುಭವಿಗಳಿಗೆ 1 ಕೋಟಿ ವೆಚ್ಚದ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಆಯುಕ್ತ ಮಂಜುನಾಥ್, ಮೈಸೂರು ವಿಭಾಗ ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕರು ಈ. ಪ್ರಕಾಶ್, ಜಿಲ್ಲಾಧಿಕಾರಿ ಡಾ. ಕುಮಾರ, ಉಪವಿಭಾಗಾಧಿಕಾರಿ ಶಿವಮೂರ್ತಿ, ಶ್ರೀನಿವಾಸ್ ಸೇರಿದಂತೆ ಇನ್ನಿತರರಿದ್ದರು.

ಮೈಶುಗರ್ ವಿದ್ಯುತ್ ಬಾಕಿ 52.25 ಕೋಟಿ ರೂ. ಮನ್ನಾ

ಬೆಂಗಳೂರು, ಡಿ.14– ಮಂಡ್ಯದ ಮೈಶುಗರ್ ಸಕ್ಕರೆ ಕಾರ್ಖಾನೆ ವಿದ್ಯುತ್ ಬಿಲ್ ಬಾಕಿ 52.25 ಕೋಟಿ ರೂ.ಗಳನ್ನು ಮನ್ನಾ ಮಾಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಬೆಳಗಾವಿಯ ಸುವರ್ಣಸೌಧದಲ್ಲಿ ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ಮೈಶುಗರ್ ಕಾರ್ಖಾನೆ ಪಾವತಿಸಬೇಕಿದ್ದ 37.74 ಕೋಟಿ ವಿದ್ಯುತ್ ಶುಲ್ಕ ಬಾಕಿಯನ್ನು ಸರ್ಕಾರದಿಂದಲೇ ಪಾವತಿಸಲು ಹಾಗೂ 15.71 ಕೋಟಿ ಬಾಕಿ ಬಡ್ಡಿ ಮನ್ನಾ ಮಾಡಲು ನಿರ್ಣಯಿಸಿದೆ. ಹೀಗಾಗಿ 52.25 ಕೋಟಿ ರೂ. ವಿದ್ಯುತ್ ಬಿಲ್ ಬಾಕಿ ಸಮಸ್ಯೆ ನಿವಾರಣೆ ಆಗಿದೆ.

ಆರ್ಥಿಕವಾಗಿ ತೊಂದರೆಯಲ್ಲಿದ್ದ ಸರ್ಕಾರಿ ಸ್ವಾಮ್ಯದ ಈ ಕಾರ್ಖಾನೆ ಉಳಿಸಿ, ರೈತರು ಬೆಳೆದಿರುವ ಕಬ್ಬು ನುರಿಸುವ ಕಾರ್ಯ ಆರಂಭಿಸಲು ಸಾಧ್ಯವಾಗುವಂತೆ ಚಾಮುಂಡೇಶ್ವರಿ ವಿದ್ಯುತ್ ಕಂಪನಿಗೆ ವಿದ್ಯುತ್ ಬಾಕಿ ಪಾವತಿಸಲು ನೆರವಾಗುವಂತೆ ಜು.5 ರಂದು ಎಂಎಲ್‌ಸಿ ದಿನೇಶ್ ಗೂಳಿಗೌಡರು ಸಿಎಂ ಸಿದ್ದರಾಮಯ್ಯ ಅವರಿಗೆ ಖುದ್ದಾಗಿ ಮನವಿ ಸಲ್ಲಿಸಿದ್ದರು.

ಅದರಂತೆ ಇದೀಗ ವಿದ್ಯುತ್ ಬಿಲ್ ಮನ್ನಾ ಮಾಡಲಾಗಿದ್ದು, ತಮ್ಮ ಮನವಿಗೆ ಸ್ಪಂದಿಸಿ, ಮೈಶುಗರ್ ಕಾರ್ಖಾನೆಗೆ ನೆರವಾಗಿದ್ದಕ್ಕಾಗಿ ಗೂಳಿಗೌಡರು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಕೆಲಸದ ಒತ್ತಡದಿಂದ ಬೇಸತ್ತು ಇಂಜಿನಿಯರ್ ಆತ್ಮಹತ್ಯೆ

ಮದ್ದೂರು, ಡಿ.14– ಕೆಲಸದ ಒತ್ತಡದಿಂದ ಬೇಸತ್ತು ಇಂಜಿನಿಯರ್ ನೀರಿನ ಟ್ಯಾಂಕ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕುರುಬರದೊಡ್ಡಿ ಗ್ರಾಮದಲ್ಲಿ ನಡೆದಿದೆ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಅಮ್ಮತ್ತಿ ಗ್ರಾಮದ ಜ್ಞಾನೇಶ್(30) ಆತ್ಮಹತ್ಯೆ ಮಾಡಿಕೊಂಡವರು. ಶಿಂಷಾ ಏತ ನೀರಾವರಿ ಯೋಜನೆಯ ಪ್ಲಾಂಟ್ ಇಂಜಿನಿಯರ್ ಆಗಿದ್ದ ಈತ ಕೆಸ್ತೂರು ಗ್ರಾಮದಲ್ಲಿ ಕೊಠಡಿಯೊಂದನ್ನು ಬಾಡಿಗೆ ಪಡೆದು ವಾಸಿಸುತ್ತಿದ್ದರು.

ಆತ್ಮಹತ್ಯೆಗೂ ಮುನ್ನ ತನ್ನ ಸ್ಟೇಟಸ್‌ನಲ್ಲಿ ವರ್ಕ್ ಪ್ರೆಷರ್ ಎಂದು ಬರೆದುಕೊಂಡು ಬಳಿಕ ಶುಕ್ರವಾರ ತಡರಾತ್ರಿ ಪ್ಲಾಂಟ್‌ಗೆ ತೆರಳಿ ನೇಣಿಗೆ ಶರಣಾಗಿದ್ದಾರೆ. ಆದರೆ ಮೊಬೈಲ್ ಸ್ಟೇಟಸ್‌ನಲ್ಲಿ ಕೆಲಸದ ಒತ್ತಡ ಎಂದು ಮಾತ್ರ ಬರೆದುಕೊಂಡಿದ್ದು, ಡೆತ್‌ನೋಟ್ ಬರೆದಿಲ್ಲ. ಮೇಲ್ನೋಟಕ್ಕೆ ಕೆಲಸದ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಪೊಲೀಸರು ಶಂಕಿಸಿದ್ದು, ಈ ಸಂಬಂಧ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಘಲಯದಲ್ಲಿ ಸಂಭ್ರಮದ ಹನುಮ ಜಯಂತಿ

ಕೆ.ಆರ್.ಪೇಟೆ, ಡಿ.14– ತಾಲೂಕಿನ ಅಘಲಯದಲ್ಲಿ 85ನೇ ವರ್ಷದ ಹನುಮ ಜಯಂತಿ ಉತ್ಸವ ಸಡಗರ ಸಂಭ್ರಮದಿಂದ ನಡೆಯಿತು.

ಹನುಮ ಜಯಂತಿ ಅಂಗವಾಗಿ ಮುಂಜಾನೆಯಿಂದಲೇ ದೇವಾಲಯದಲ್ಲಿ ಹೋಮ ಹವನ, ಪೂರ್ಣಾಹುತಿ, ಅಭಿಷೇಕ, ವಿವಿಧ ಪುಷ್ಪಾಲಂಕಾರ, ಹನುಮಂತ ದೇವರ ಪಲ್ಲಕ್ಕಿ ಉತ್ಸವ, ಸಿಡಿಮದ್ದು ಪ್ರದರ್ಶನ, ಅನ್ನದಾನ ಮತ್ತಿತರ ಕಾರ್ಯಕ್ರಮಗಳು ನಡೆದವು. ಅಲ್ಲದೇ ಗ್ರಾಮದ ಮುಖ್ಯ ಬೀದಿಗಳನ್ನು ವಿದ್ಯುತ್ ದೀಪಗಳು ಮತ್ತು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು.

ಇದೇ ವೇಳೆ ಅಲಂಕೃತ ಶ್ರೀಪ್ರಸನ್ನ ಆಂಜನೇಯಸ್ವಾಮಿಯವರ ಉತ್ಸವ ಮೂರ್ತಿಯನ್ನು ವೀರಗಾಸೆ ಕುಣಿತ, ಪೂಜಾ ಕುಣಿತ, ಡೊಳ್ಳು ಕುಣಿತ, ಮಂಗಳವಾದ್ಯ ಮತ್ತಿತರರ ಜಾನಪದ ಕಲಾತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮಾಜಿ ಸಚಿವ ಡಾ.ಕೆ.ಸಿ.ನಾರಾಯಣಗೌಡ ದೇವರ ದರ್ಶನ ಪಡೆದು ಮಾತನಾಡಿದರು. ಹನುಮ ಜಯಂತಿ ಉತ್ಸವದಲ್ಲಿ ಬೆಂಗಳೂರು, ಮೈಸೂರು, ಮಂಡ್ಯ, ಕೆ.ಆರ್. ಪೇಟೆ, ಮೇಲುಕೋಟೆ, ಚನ್ನರಾಯಪಟ್ಟಣ ಸೇರಿದಂತೆ ರಾಜ್ಯದ ನಾನಾ ಭಾಗಗಳ ಸಾವಿರಾರು ಭಕ್ತರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು. ಹಿರಿಯ ಮುಖಂಡ ಮಾಸ್ಟರ್ ನಂಜಪ್ಪ ಮಾತನಾಡಿದರು.


ಅಘಲಯದಲ್ಲಿ ಹನುಮ ಜಯಂತಿ ಉತ್ಸವ ನಡೆಯಿತು.

ಕಾರ್ಯಕ್ರಮದಲ್ಲಿ ದಾನಿಗಳಾದ ಅನುರಾಧಾರಾಘವನ್, ತಾಪಂ ಅಧ್ಯಕ್ಷ ಜಾನಕೀರಾಂ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರಮೇಶ್, ತಾಲೂಕು ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎ.ಎಸ್.ಶ್ರೀಧರ್, ಗ್ರಾಪಂ ಮಾಜಿ ಅಧ್ಯಕ್ಷೆ ಭಾರತಿ ಶ್ರೀಧರ್, ಎ.ಎಲ್. ನಂಜಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಲೋಕೇಶ್, ಸಂಪತ್ತು, ಕೆ.ಸಿದ್ದೇಗೌಡ, ಎ.ಬಿ.ಗಣೇಶ್, ರಾಮನಕೊಪ್ಪಲು ಶಿವಣ್ಣನ ಕುಟುಂಬ ಸೇರಿದಂತೆ ಹಲವು ಗಣ್ಯರು, ಸಾವಿರಾರು ಭಕ್ತರು ಭಾಗವಹಿಸಿದ್ದರು. ಹನುಮ ಜಯಂತಿ ಅಂಗವಾಗಿ ಅನ್ನದಾನ ಕಾರ್ಯಕ್ರಮ ನಡೆಯಿತು.

ಹೃದಯಾಘಾತದಿಂದ
ಕಬಡ್ಡಿ ಆಟಗಾರ ಸಾವು

ಮಂಡ್ಯ, ಡಿ.14– ಹನುಮ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಬಡ್ಡಿ ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದ ಯುವಕ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ನಾಗಮಂಗಲ ತಾಲೂಕಿನ ಸುಖಧರೆ ಗ್ರಾಮದಲ್ಲಿ ನಡೆದಿದೆ.



ಉಡುಪಿ ಜಿಲ್ಲೆಯ ಹೆಬ್ರಿ ತಾಲೂಕಿನ ಮುಟ್ಲುಪಾಡಿಯ ಪ್ರೀತಂ ಶೆಟ್ಟಿ (24) ಸಾವಿಗೀಡಾದ ಯುವಕ.

ವಿವರ: ಹನುಮ ಜಯಂತಿ ಅಂಗವಾಗಿ ಸುಖಧರೆ ಗ್ರಾಮದಲ್ಲಿ ಪ್ರೊ.ಕಬಡ್ಡಿ ಪಂದ್ಯಾವಳಿ ಏರ್ಪಡಿಸಲಾಗಿತ್ತು. ಬಹುನಿರೀಕ್ಷಿತ ಆಟಗಾರನಾಗಿ ಬಂದಿದ್ದ ಪ್ರೀತಂ ಕಬಡ್ಡಿ ಪಂದ್ಯ ಮುಗಿಸಿ ರೆಸ್ಟ್‌ನಲ್ಲಿರುವಾಗ ಹೃದಯಾಘಾತಕ್ಕೊಳಗಾಗಿದ್ದಾರೆ. ಪಂದ್ಯಾವಳಿಯ ಲೀಗ್, ಸೆಮಿ ಎಲ್ಲಾ ಪಂದ್ಯಗಳನ್ನು ಗೆದ್ದು ಫೈನಲ್ ಒಂದೇ ಬಾಕಿ ಇತ್ತು. ಅಂತಿಮ ಘಟ್ಟ ತಲುಪುವ ಮೊದಲೇ ಪ್ರೀತಂ ಇಹಲೋಕ ತ್ಯಜಿಸಿದ್ದಾರೆ. ಪ್ರೀತಂ ಪ್ರೊ.ಕಬಡ್ಡಿ ಮತ್ತು ಟೀಮ್ ಇಂಡಿಯಾ ಕಬಡ್ಡಿಯಲ್ಲಿ ಆಡಿದ ಹಲವಾರು ಕ್ರೀಡಾಪಟುಗಳ ಜೊತೆ ಕೋರ್ಟ್ ಹಂಚಿಕೊಂಡಿದ್ದರು. ಪಂದ್ಯವೊಂದರಲ್ಲಿ ಬೆಂಗಾಲ್ ವಾರಿಯರ್ಸ್ ತಂಡದ ಮಣೀಂದರ್ ಅವರನ್ನು ಪ್ರೀತಂ ಕ್ಯಾಚ್ ಮಾಡಿದ್ದ ವೀಡಿಯೋ ಬಹಳ ವೈರಲ್ ಆಗಿತ್ತು. ದೃಢಕಾಯವಾಗಿದ್ದ ಪ್ರೀತಂಗೆ ಕಬಡ್ಡಿ ನೆಲದಲ್ಲಿ ಬಹಳ ಬೇಡಿಕೆ ಇತ್ತು ಎನ್ನಲಾಗಿದೆ. ಉಡುಪಿ ಮೂಲದ ಪ್ರೀತಂ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದ. ವಿದೇಶದಲ್ಲಿ ಉದ್ಯೋಗ ಅರಸುತ್ತಿದ್ದು, ಎಲ್ಲಾ ತಯಾರಿ ಮಾಡಿಕೊಂಡಿದ್ದ. ಮೈದಾನದಲ್ಲಿ ಕುಸಿದು ಬಿದ್ದ ಕೂಡಲೇ ಪ್ರೀತಂನನ್ನು ಸ್ಥಳೀಯ ಆಸ್ಪತ್ರೆಗೆ ರವಾನಿಸಲಾಯಿತು. ಅಷ್ಟರಲ್ಲೇ ಆತ ಕೊನೆಯುಸಿರೆಳೆದಿದ್ದಾನೆ. ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಜಾಹೀರಾತು ಫಲಕಗಳು ರಾರಾಜಿಸುತ್ತಿವೆ

ಫಲಕಗಳನ್ನು ಅಳವಡಿಸಿ, ಇಡೀ ಮೈಸೂರು ನಗರದ ಸೌಂದರ್ಯ ಹಾಳು ಮಾಡಿರುವ ಜಾಹೀರಾತು ಏಜೆನ್ಸಿಗಳ ವಿರುದ್ಧ ಮೈಸೂರು ಮಹಾ ನಗರಪಾಲಿಕೆ ಅಧಿಕಾರಿಗಳು ಯಾವುದೇ ಕ್ರಮವಹಿಸದೆ ಇರುವುದು ಅನುಮಾನಕ್ಕೆ ಆಸ್ಪದ ನೀಡಿದಂತಾಗಿದೆ.

ಮೈಸೂರು ನಗರದ ಸೌಂದರ್ಯ, ಸ್ವಚ್ಛತೆಯನ್ನು ಕಾಪಾಡಬೇಕಾದ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ಎಲ್ಲೆಂದರಲ್ಲಿ ಅನಧಿಕೃತವಾಗಿ ದೊಡ್ಡ ದೊಡ್ಡ ಜಾಹೀರಾತು ಫಲಕ ಗಳನ್ನು ಅಳವಡಿಸಿದ್ದು, ನೋಡಿಯೂ ನೋಡದಂತೆ ಮೌನವಹಿಸಿರುವ ಅಧಿ ಕಾರಿಗಳು ಅನಧಿಕೃತ ಫ್ಲೆಕ್ಸ್ ಅಳವಡಿಕೆಗೆ ಪರೋಕ್ಷವಾಗಿ ಸಹಕಾರ ನೀಡುತ್ತಿದ್ದಾರೆಯೇ ಎಂಬ ಅನುಮಾನ ಸಾರ್ವ ಜನಿಕರಲ್ಲಿ ಮೂಡಿದೆ. ಹಿಂದೊಮ್ಮೆ ಮೈಸೂರು ನಗರವನ್ನು ಫ್ಲೆಕ್ಸ್ ಹಾಗೂ ಪ್ಲಾಸ್ಟಿಕ್ ಮುಕ್ತಗೊಳಿಸುವ ಭರವಸೆ ನೀಡಿದ್ದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇದೀಗ ಮೈಸೂರಿನ ತುಂಬಾ ಖಾಸಗಿ ಜಾಹೀರಾತು ಫಲಕ ಗಳನ್ನು ಅಳವಡಿಸುತ್ತಿದ್ದರೂ ಯಾರೂ ತುಟಿಕ್ ಪಿಟಿಕ್ ಅನ್ನುತ್ತಿಲ್ಲ.

ಮೆಟ್ರೋಪೋಲ್ ಸರ್ಕಲ್‌ನಿಂದ ಆರಂಭವಾದರೆ ಹಿನಕಲ್‌ನ ರಿಂಗ್ ರಸ್ತೆ ಜಂಕ್ಷನ್‌ವರೆಗೆ ಒಟ್ಟು 25 ಜಾಹೀರಾತು ಫಲಕಗಳು ರಾರಾಜಿಸುತ್ತಿದ್ದು, ಹುಣಸೂರು ರಸ್ತೆಯ ಜಿಲ್ಲಾಧಿಕಾರಿ ಕಚೇರಿಯ ಸ್ವಾಗತ ಕಮಾನು ಬಳಿ 1, ಕಲಾಮಂದಿರ ಬಳಿಯ ಸಿಗ್ನಲ್ ಜಂಕ್ಷನ್ ಬಳಿ 1, ಜಲದರ್ಶಿನಿ ಅತಿಥಿಗೃಹದ ಗೇಟ್ ಬಳಿ 2, ವಾಲ್ಮೀಕಿ ಜಂಕ್ಷನ್ ಬಳಿ 1, ಪಡುವಾರಹಳ್ಳಿ ಸಿಗ್ನಲ್ ಜಂಕ್ಷನ್‌ನಲ್ಲಿ 3, ಸೆಂಟ್ ಫಿಲೋಮಿನಾ ಸರ್ಕಲ್ ಬಳಿ 3, ರಾಣಿ ಬಹದ್ದೂರ್ ಸಭಾಂಗಣದ ಗೇಟ್ ಬಳಿ 1, ಬಸಪ್ಪ ಸ್ಮಾರಕ ಆಸ್ಪತ್ರೆ ಬಳಿ 1, ಗ್ರಾಂಡ್ ಫಾರ್ ಕಿಚನ್ ಸರ್ಕಲ್ ಬಳಿ 1, ಐಶ್ವರ್ಯ ಪೆಟ್ರೋಲ್ ಬಂಕ್ ಜಂಕ್ಷನ್ ಬಳಿ 3, ಕಿಯಾ ಶೋ ರೂಂ ಬಳಿ 1, ರುಚಿ ದಿ ಪ್ರಿನ್ಸ್ ಬಳಿ 1, ಹಿನಕಲ್‌ನ ರುಡ್‌ಸೆಟ್ ಎದುರು ಸುಜುಕಿ ಶೋರೂಂ ಬಳಿ 1 ಹಾಗೂ ಫ್ಲೈಓವರ್ ಬಳಿ ಸಿಗ್ನಲ್ ಲೈಟ್ ಜಂಕ್ಷನ್‌ನಲ್ಲಿ 2 ಸೇರಿ ಒಟ್ಟು 25 ಜಾಹೀರಾತು ಫಲಕಗಳು ರಾರಾಜಿಸುತ್ತಿವೆ.

ಅಲ್ಲದೆ, ಕೆಆರ್‌ಎಸ್ ರಸ್ತೆಯ ರಾಯಲ್ ಇನ್ ಜಂಕ್ಷನ್‌ನಿಂದ ದಾಸಪ್ಪ ಸರ್ಕಲ್‌ನ ಮಾಂಡೋವಿ ಮೋಟಾರ್ ವರೆಗೆ ಕೆಆರ್‌ಎಸ್ ರಸ್ತೆಯಲ್ಲಿ 10 ಕಡೆ ಎಲ್ ಶೇಪ್‌ನ ಕಬ್ಬಿಣದ ಜಾಹೀರಾತು ಫಲಕಗಳನ್ನು ಅಳವಡಿಸಲಾಗಿದೆ. ಹೆಬ್ಬಾಳು ಬಡಾವಣೆ ಸ್ವಾಗತ ಕಮಾನು ಬಳಿ 1, ಕುಂಬಾರಕೊಪ್ಪಲು ಗೇಟ್ ಬಳಿ 1, ಗೋಕುಲಂ ಹಸಿರು ಪಾರ್ಕ್ ಬಳಿ 1, ಒಂಟಿಕೊಪ್ಪಲು ದೇವಸ್ಥಾನದ ಎದುರು 1, ಒಂಟಿಕೊಪ್ಪಲು ಸಿಗ್ನಲ್ ಲೈಟ್ ಬಳಿ 2, ರೈಲ್ವೆ ಆಸ್ಪತ್ರೆ ಬಳಿ 1, ಆಕಾಶವಾಣಿ ಸರ್ಕಲ್ ಬಳಿ 1, ಚೆಲು ವಾಂಬ ಪಾರ್ಕ್‌ನ ವಿವೇಕಾನಂದ ಪ್ರತಿಮೆ ಬಳಿ 1 ಹಾಗೂ ಮಾಂಡೋವಿ ಮೋಟಾರ್ ಬಳಿ 1 ಸೇರಿ ಒಟ್ಟು 10 ಫಲಕಗಳನ್ನು ಅಳವಡಿಸಿರುವುದು ಕಂಡು ಬಂದಿದೆ. ಇದಲ್ಲದೆ, ಜೆಎಲ್‌ಬಿ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಬೆಂಗಳೂರು ನೀಲಗಿರಿ ರಸ್ತೆ, ಲಲಿತಮಹಲ್ ರಸ್ತೆ, ಮಹಾತ್ಮ ಗಾಂಧಿ ಜೋಡಿ ರಸ್ತೆ, ಚಾಮರಾಜ ಜೋಡಿ ರಸ್ತೆ ಸೇರಿದಂತೆ ವಿವಿಧ ಪ್ರಮುಖ ಜಂಕ್ಷನ್‌ಗಳು, ರಸ್ತೆಗಳಲ್ಲಿ 750ಕ್ಕೂ ಹೆಚ್ಚು ಖಾಸಗಿ ಜಾಹೀರಾತು ಸಂಸ್ಥೆಗಳ ಫಲಕಗಳನ್ನು ಅಳವಡಿಸಿದ್ದು, ಮೈಸೂರು ನಗರದ ಸೌಂದರ್ಯಕ್ಕೆ ಧಕ್ಕೆ ಉಂಟು ಮಾಡುತ್ತಿವೆ. 60x5, 16x10, 17x83, 25x8, 28x80, 6x3, 50x3, 85x8, 28x10, 3x8, 38x25, 45x25, 25x25, 20x10, 30x20, 30x15, 7x4, 9.0x4.5 ಅಡಿ ಅಳತೆಯ ಜಾಹೀರಾತು ಫಲಕಗಳನ್ನು ಮನಸೋ ಇಚ್ಛೆ ಖಾಸಗಿ ಜಾಹೀರಾತು ಏಜೆನ್ಸಿಗಳು ಅಳವಡಿಸಿ, ಮೈಸೂರು ನಗರದ ಸೌಂದರ್ಯವನ್ನು ಹಾಳು ಮಾಡುತ್ತಿವೆ ಎಂಬ ಆರೋಪ ಸಾರ್ವಜನಿಕ ವಲ ಯದಲ್ಲಿ ವ್ಯಾಪಕವಾಗಿ ಕೇಳಿಬರುತ್ತಿದೆ.

ಇನ್ನು ಮೈಸೂರು ನಗರದಲ್ಲಿ ಹೊಸದಾಗಿ ಕಬ್ಬಿಣದ ಪೋಲ್‌ಗಳನ್ನು ಅಳವಡಿಸಿ ಎಲ್ ಶೇಪಿನ ಫಲಕ ಅಳವಡಿಸುವ ಕಾಮಗಾರಿಯೂ ಭರದಿಂದ ಸಾಗಿದೆ. ಮೈಸೂರು ಮಹಾನಗರಪಾಲಿಕೆಯು ಕೇವಲ 210 ಜಾಹೀರಾತು ಫಲಕಗಳನ್ನು ಅಳವಡಿ ಸಲು ಶುಲ್ಕ ಪಾವತಿಸಿಕೊಂಡು ಅನು ಮತಿ ನೀಡಿರುವುದನ್ನೇ ನೆಪ ಮಾಡಿ ಕೊಂಡು ಅನಧಿಕೃತವಾಗಿ ನೂರಾರು ಫಲಕಗಳನ್ನು ಅಳವಡಿಸುತ್ತಿರುವುದು ಮೈಸೂರಿನ ಅಂದ ಕೆಡಲು ಪ್ರಮುಖ ಕಾರಣವಾಗಿದೆ. ಈ ಕುರಿತಂತೆ ಪಾಲಿಕೆ ಅಧಿಕಾರಿಗಳು ತಕ್ಷಣ ಎಚ್ಚೆತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವು ಗೊಳಿಸದಿದ್ದಲ್ಲಿ ಮುಂದೆ ಇದು ದೊಡ್ಡ ತಲೆನೋವಾಗಿ ಪರಿಣಮಿಸಲಾಗು ವುದರಲ್ಲಿ ಯಾವುದೇ ಸಂಶಯವಿಲ್ಲ.


ತೆರವುಗೊಳಿಸಲು ವಾರದ ಗಡುವು

ನೀಡದೆ ಇರುವ ಕಡೆಯೂ ಅತೀ ಹೆಚ್ಚು ಜಾಹೀರಾತು ಫಲಕಗಳನ್ನು ಅನಧಿಕೃತ ವಾಗಿ ಅಳವಡಿಸಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಅವು ಗಳನ್ನು ಒಂದು ವಾರದೊಳಗಾಗಿ ತೆರವುಗೊಳಿಸುವಂತೆ ಸದರಿ ಜಾಹೀರಾತುದಾರರಿಗೆ ನೋಟಿಸ್ ಜಾರಿ ಮಾಡಿದ್ದೇವೆ. ಈ ಸಂಬಂಧ ಬರುವ ಗುರುವಾರ ಪಾಲಿಕೆಯ ಎಲ್ಲಾ ವಲಯ ಕಚೇರಿಗಳ ವಲಯ ಅಧಿಕಾರಿಗಳು,

ಅಭಿವೃದ್ಧಿ ಅಧಿಕಾರಿಗಳು, ಇಂಜಿನಿಯರ್‌ಗಳ ಸಭೆ ಕರೆದಿದ್ದು, ಅಲ್ಲಿ ಅವರು ತಮ್ಮ ವ್ಯಾಪ್ತಿಯಲ್ಲಿ ಅಳವಡಿ ಸಿರುವ ಅಧಿಕೃತ ಹಾಗೂ ಅನಧಿಕೃತ ನಾಮಫಲಕಗಳ ಬಗ್ಗೆ ಪಟ್ಟಿ ನೀಡಲಿದ್ದಾರೆ ಎಂದರು. ನಾವು ನೀಡಿರುವ ಅವಧಿಯೊಳಗೆ ಅನಧಿಕೃತ ನಾಮ ಫಲಕಗಳನ್ನು ತೆರವುಗೊಳಿಸದಿದ್ದಲ್ಲಿ ಪಾಲಿಕೆಯಿಂದ ಕಾರ್ಯಾಚರಣೆ ನಡೆಸಿ, ನಿರ್ದಾಕ್ಷಿಣ್ಯವಾಗಿ ಕ್ರಮವಹಿಸುತ್ತೇವೆ. ಅನುಮತಿಯಂತೆ ಪಾಲಿಕೆಗೆ ವಾರ್ಷಿಕ ಸುಮಾರು 2 ಕೋಟಿಗೂ ಹೆಚ್ಚು ಹಣ ಜಾಹೀರಾತು ಫಲಕ ಗಳಿಂದ ಬರುತ್ತದೆ. ಹಾಗೆಂದ ಮಾತ್ರಕ್ಕೆ ನಾವು ಕಂಡಕಂಡಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡಿಲ್ಲ. ಸಾಂಸ್ಕೃತಿಕ ನಗರ ಮೈಸೂರಿನ ಪಾರಂಪರಿಕತೆ ಕಾಪಾಡುವ ಜವಾಬ್ದಾರಿಯು ಪಾಲಿಕೆಗೆ ಇರುವುದರಿಂದ ಪರಿಸರಕ್ಕೆ ಹಾನಿ ಯಾಗದಂತೆ ಕ್ರಮ ವಹಿಸುತ್ತೇವೆ. ಈ ಸಂಬಂಧ ಆಯುಕ್ತರಾದ ಆಶಾದ್ ಉರ್ ರೆಹಮಾನ್ ಷರೀಫ್ ಅವರು ನೀಡಿದ ನಿರ್ದೇಶನದಂತೆ ಮೈಸೂರಿನಲ್ಲಿ ಕಂಡಕಂಡ ಸ್ಥಳಗಳಲ್ಲಿ ಜಾಹೀ ರಾತು ಫಲಕ ಅಳವಡಿಸಲು ಅನುಮತಿ ನೀಡಬಾರದೆಂದು ಆಯಾ ವಲಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದೂ ಸೋಮಶೇಖರ್ ತಿಳಿಸಿದರು.

ಮೈಸೂರಿನ ಅಂದಗೆಡಿಸುತ್ತಿವೆ

ಮೈಸೂರು, ಡಿ.14(ಆರ್‌ಕೆ)–ಸ್ವಚ್ಛ ನಗರಿ, ಸಾಂಸ್ಕೃತಿಕ ನಗರಿ, ಪಾರಂಪರಿಕ ನಗರಿ ಹಾಗೂ ನಿವೃತ್ತರ ಸ್ವರ್ಗವೆಂದೇ ಕರೆಯಲ್ಪಡುವ ಮೈಸೂರು ನಗರದಲ್ಲಿ ಇತ್ತೀಚೆಗೆ ನಾಮಫಲಕಗಳು ನಾಯಿಕೊಡೆಗಳಂತೆ ತಲೆ ಎತ್ತಿವೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಬೇಸರ ವ್ಯಕ್ತಪಡಿ ಸಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯು ಪ್ಲಾಸ್ಟಿಕ್ ಮತ್ತು ಫ್ಲೆಕ್ಸ್ ಮುಕ್ತ ಮಾಡುತ್ತೇವೆಂದು ಹೇಳಿ, ಈಗ ಕಂಡಕಂಡವರಿಗೆ ಜಾಹೀರಾತು ಫಲಕ ಅಳವಡಿಸಲು ಅನುಮತಿ ನೀಡಿದ್ದು, ಅದರ ಬೆನ್ನಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ಅನಧಿಕೃತ ಫಲಕಗಳನ್ನೂ ಅಳವಡಿಸಿರುವುದು ಮೈಸೂರು ನಗರದಾದ್ಯಂತ ಎಲ್ಲಾ ಜಂಕ್ಷನ್, ರಸ್ತೆ ಸರ್ಕಲ್‌ಗಳಲ್ಲಿ ಖಾಸಗಿ ಜಾಹೀರಾತು ಫಲಕಗಳನ್ನು ಪ್ರತಿನಿತ್ಯ ಅಳವಡಿಸಲಾಗುತ್ತಿದ್ದು, ಇದರಿಂದ ನಗರದ ಸೌಂದರ್ಯ ಹಾಳಾಗುತ್ತಿದೆ. ಒಂದೆಡೆ ಸ್ವಚ್ಛನಗರಿ ಮಾಡುತ್ತೇವೆಂದು ಹೇಳುವ ಪಾಲಿಕೆಯು ಮತ್ತೊಂದೆಡೆ ಜಾಹೀರಾತು ಫಲಕಗಳನ್ನು ಅಳವಡಿಸಲು ಏಜೆನ್ಸಿಯವರಿಗೆ ಅನುಮತಿ ನೀಡುತ್ತಿರುವುದು ಎಲ್ಲೆಡೆ ಅಡ್ಡಾದಿಡ್ಡಿಯಾಗಿ ಫ್ಲೆಕ್ಸ್‌ನಿಂದ ಮಾಡಿದ ಜಾಹೀರಾತು ಫಲಕಗಳನ್ನು ಅಳವಡಿಸಲು ಪ್ರಮುಖ ಕಾರಣವಾಗಿದೆ ಎಂದು ತಿಳಿಸಿದರು.


ನಾರಾಯಣಗೌಡ

ಪಾಲಿಕೆಗೆ ಶುಲ್ಕ ಪಾವತಿಸಿ ಅನುಮತಿ ಪಡೆದ ಫಲಕ ಗಳನ್ನು ಆಯಾ ಅವಧಿವರೆಗೆ ಬಿಟ್ಟು ಉಳಿದ ಅನಧಿಕೃತ ಜಾಹೀರಾತು ಫಲಕಗಳನ್ನು ಪಾಲಿಕೆ ಅಧಿಕಾರಿಗಳು ತೆರವುಗೊಳಿಸಿ ಮೈಸೂರಿನ ಅಂದ ಮತ್ತು ಸ್ವಚ್ಛತೆ ಕಾಪಾಡಬೇಕು. ಈ ಕುರಿತಂತೆ ನಾವು ಸಹ ಮೈಸೂರು ಮಹಾನಗರಪಾಲಿಕೆ ಮತ್ತು ನಗರ ಪೊಲೀಸ್ ಆಯುಕ್ತರಿಗೆ ಮನವಿ ನೀಡುತ್ತೇವೆ. ಒಂದು ರಸ್ತೆಯಲ್ಲಿ ಕೇವಲ 5 ಕಿ.ಮೀ ವ್ಯಾಪ್ತಿಗೆ ಸುಮಾರು 30ರಿಂದ 40 ಜಾಹೀರಾತು ಫಲಕಗಳನ್ನು ಅಳವಡಿ ಸಿರುವುದರಿಂದ ಅದು ವಾಹನ ಸವಾರರ ಗಮನ ಬೇರೆಡೆ ಸೆಳೆದು ಅಪಘಾತವಾಗಲು ಕಾರಣವಾಗುವುದಲ್ಲದೆ ಇಲ್ಲಿನ ಸ್ವಚ್ಛ ಪರಿಸರಕ್ಕೆ ಹಾನಿ ಉಂಟಾಗುತ್ತದೆ. ಆದ್ದರಿಂದ ಅನಧಿಕೃತ ಜಾಹೀರಾತು ಫಲಕಗಳನ್ನು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ತೆರವುಗೊಳಿಸಬೇಕು ಎಂದು ನಾರಾಯಣಗೌಡ 'ಮೈಸೂರು ಮಿತ್ರ'ನ ಮೂಲಕ ಆಗ್ರಹಿಸಿದರು.

150 ಕೋಟಿ ಆಮಿಷ

ಸ್ವೀಕರಿಸಿ ತಕ್ಷಣ ಸಿಬಿಐ ತನಿಖೆಗೆ ಆದೇಶಿಸಬೇಕೆಂದು ಸಿಎಂ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಈ ಸಂಬಂಧ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಬಿ.ಎಸ್ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೇ ವಿಜಯೇಂದ್ರ ನಮ್ಮ ಮನೆಗೆ ಬಂದು ವಕ್ಫ್ ಆಸ್ತಿ ಕಬಳಿಕೆಯ ತನಿಖೆ ನಡೆಸಿ ನೀಡಿರುವ ವರದಿ ಬಗ್ಗೆ ಮೌನ ವಹಿಸುವಂತೆ ಕೇಳಿಕೊಂಡಿದ್ದು ಮಾತ್ರವಲ್ಲ ಇದಕ್ಕಾಗಿ 150 ಕೋಟಿ ರೂ. ಆಮಿಷವೊಡ್ಡಿದ್ದರು. ನಾನು ಅವರಿಗೆ ಗದರಿಸಿ ಮನೆಯಿಂದ ಓಡಿಸಿದ್ದೆ. ಅದರ ನಂತರ ಈ ಎಲ್ಲಾ ಘಟನೆಗಳನ್ನು ಉಲ್ಲೇಖಿಸಿ ಪ್ರಧಾನಿ ನರೇಂದ್ರ ಮೋದಿ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ ಪತ್ರ ಬರೆದಿದ್ದೆ ಎಂದು ಸಾಕ್ಷಾತ್ ಅನ್ವರ್ ಮಾಣಿಪ್ಪಾಡಿಯವರೇ ಮಾಧ್ಯಮದ ಮುಂದೆ ಹೇಳಿಕೊಂಡಿದ್ದರು.

'ನಾ ಖಾವೂಂಗಾ, ನಾ ಖಾನೆ ದೂಂಗಾ' ಎಂದು ಊರೆಲ್ಲ ಡಂಗೂರ ಹೊಡ್ಕೊಂಡು ತಿರುಗಾಡುವ ನರೇಂದ್ರ ಮೋದಿಯವರು ಈ ಆರೋಪದ ಬಗ್ಗೆ ಮೌನವಾಗಿರುವುದು ಸಂಶಯವನ್ನು ಮಾತ್ರವಲ್ಲ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ವಕ್ಫ್ ಆಸ್ತಿ ವಿಚಾರದಲ್ಲಿ ವಿಜಯೇಂದ್ರ ಅವರು ವಹಿಸುತ್ತಿರುವ ಆಸಕ್ತಿಯನ್ನು ನೋಡಿದರೆ ಅವರು ಮತ್ತು ಅವರ ಕುಟುಂಬ ವರ್ಗ ವಕ್ಫ್ ಆಸ್ತಿ ಕಬಳಿಕೆಯಲ್ಲಿ ನೇರವಾಗಿ ಶಾಮೀಲಾಗಿರುವಂತೆ ಕಾಣುತ್ತಿದೆ. ಅವರ ಜೊತೆ ಪಕ್ಷದ ಮಹಾಮಹಿಮರೆಲ್ಲರೂ ಶಾಮೀಲಾಗಿರುವ ಸಂಶಯ ಇದೆ. ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೇ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಗರಿಷ್ಠ ಸಂಖ್ಯೆಯಲ್ಲಿ ನೋಟಿಸ್ ನೀಡಿರುವುದನ್ನು ಈಗಾಗಲೇ ಮಾಧ್ಯಮಗಳು ವ್ಯಾಪಕವಾಗಿ ವರದಿ ಮಾಡಿವೆ. ಮಾಣಿಪ್ಪಾಡಿ ಅವರ ಬಾಯಿ ಮುಚ್ಚಿಸುವ ಷಡ್ಯಂತ್ರದಲ್ಲಿ ಯಾರೆಲ್ಲ ಶಾಮೀಲಾಗಿದ್ದಾರೆ, ವಕ್ಫ್ ಆಸ್ತಿ ಲೂಟಿಯಲ್ಲಿ ಬೇರೆ ಯಾರೆಲ್ಲ ಪಾಲುದಾರರಿದ್ದಾರೆ ಎನ್ನುವ ಬಗ್ಗೆಯೂ ತನಿಖೆಯಾಗಬೇಕಾಗಿದೆ. ಆಶ್ಚರ್ಯದ ಸಂಗತಿಯೆಂದರೆ, ಒಂದೆಡೆ ಇಂತಹ ಗಂಭೀರ ಆರೋಪ ಹೊತ್ತುಕೊಂಡಿರುವ ವಿಜಯೇಂದ್ರ ಅವರು ಬಿಜೆಪಿಯ ರಾಜ್ಯಾಧ್ಯಕ್ಷರಾಗುತ್ತಾರೆ, ಇನ್ನೊಂದೆಡೆ ಪಕ್ಷದ ಹೈಕಮಾಂಡ್‌ಗೆ ಎರಡು ಸಾವಿರ ಕೋಟಿ ರೂ. ಸಂದಾಯ ಮಾಡಿ ವಿಜಯೇಂದ್ರ ಅವರು ತಮ್ಮ ತಂದೆ ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಿದ್ದಾರೆ ಎಂದು ಬಿಜೆಪಿ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಆರೋಪಿಸುತ್ತಾರೆ. ಈ ಎಲ್ಲಾ ಬೆಳವಣಿಗೆಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ನೋಡಿದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ, ಕರ್ನಾಟಕವನ್ನು ಎಟಿಎಂ ಮಾಡಿತ್ತು ಎಂದು ಆರೋಪಿಸಬೇಕಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರೇ, ಕೋವಿಡ್ ಸಲಕರಣೆಗಳ ಖರೀದಿ ಭ್ರಷ್ಟಾಚಾರ ದಿಂದ ಹಿಡಿದು ವಕ್ಫ್ ಆಸ್ತಿ ಕಬಳಿಕೆಯಲ್ಲಿನ ಲೂಟಿ ವರೆಗೆ ರಾಜ್ಯ ಬಿಜೆಪಿಯ ಕಪಾಟಿನಿಂದ ಒಂದೊಂದೇ ಅಸ್ಥಿ ಪಂಜರಗಳು ಉರುಳಿ ಬೀಳುತ್ತಲೇ ಇದೆ. ಈ ಹಗರಣಗಳಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲೇ ರಾಜ್ಯದ ಬಿಜೆಪಿ ನಾಯಕರು ನಮ್ಮ ಪಕ್ಷ ಮತ್ತು ನಾಯಕರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ ಜನರ ಗಮನ ಬೇರೆ ಕಡೆ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ನಾಳೆ ಮಂಡ್ಯದಲ್ಲಿ ಕಾವೇರಿ ತಾಂತ್ರಿಕ ಮಹಾವಿದ್ಯಾಲಯದ ಶತಮಾನೋತ್ಸವ

ಮಂಡ್ಯ, ಡಿ.14– ನಗರದ ಕಾವೇರಿ ತಾಂತ್ರಿಕ ಮಹಾವಿದ್ಯಾಲಯದ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ ಡಿ.16ರಂದು ಬೆಳಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಾವೇರಿ ಎಜುಕೇಷನ್ ಅಂಡ್ ರಿಸರ್ಚ್ ಟ್ರಸ್ಟ್ ಅಧ್ಯಕ್ಷ ಡಾ.ಹೆಚ್.ಪಿ.ರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಮೂಲಕ ಕಾಲೇಜು ಬೆಳೆದು ಬಂದ ಹಾದಿ ಪರಿಚಯಿಸುವ ಉದ್ದೇಶ ಹೊಂದಲಾಗಿದ್ದು, ಕಾಲೇಜಿನಲ್ಲಿ ಹೊಸದಾಗಿ ಇನ್ಫರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಎಂಸಿಎ ಕೋರ್ಸ್ ಅನ್ನು ಪ್ರಾರಂಭಿಸಲಾಗಿದೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಆದಿ ಚುಂಚನಗಿರಿ ಕೊಮ್ಮೇರಹಳ್ಳಿ ಶಾಖಾ ಮಠದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮಾನಂದನಾಥ ಸ್ವಾಮೀಜಿ ಭಾಗವಹಿಸುವರು. ಕಾವೇರಿ ಎಜುಕೇಷನ್ ಅಂಡ್ ರಿಸರ್ಚ್ ಟ್ರಸ್ಟ್ ಅಧ್ಯಕ್ಷ ಡಾ.ಹೆಚ್.ಪಿ.ರಾಜು ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಟ್ರಸ್ಟ್ ಕಾರ್ಯದರ್ಶಿ ಪ್ರೊ.ಟಿ.ನಾಗೇಂದ್ರ ಉಪಸ್ಥಿತರಿರಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲ ಶ್ರೀಕಂಠಪ್ಪ, ಟ್ರಸ್ಟ್ ಕಾರ್ಯದರ್ಶಿ ಪ್ರೊ.ಟಿ.ನಾಗೇಂದ್ರ ಇದ್ದರು.

ಜ.5ರಂದು ಮೈಸೂರಿನ ಪುರಭವನದಲ್ಲಿ ವಾಲ್ಮೀಕಿ ಜನಾಂಗದ ಸಮಾವೇಶ

ಮೈಸೂರು, ಡಿ.14(ಜಿಎ)–ಮೈಸೂರಿನ ವಿಶ್ವಋಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಜ.5ರಂದು ಮೈಸೂರಿನ ಪುರ ಭವನದ ಆವರಣದಲ್ಲಿ ಜನಾಂಗದ ಸಮಾ ವೇಶ ಆಯೋಜಿಸಲಾಗುತ್ತಿದೆ ಎಂದು ಟ್ರಸ್ಟ್ ಅಧ್ಯಕ್ಷ ಕೃಷ್ಣನಾಯಕ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ಜಯಂತಿ ಮತ್ತು ನಾಯಕ ಜನಾಂಗದ ಕುಂದುಕೊರತೆ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಲೋಕಸಭಾ ಸದಸ್ಯರಿಗೆ ಮನವಿ ಸಲ್ಲಿಸುವ ಸಲುವಾಗಿ ಜನಾಂಗದ ಸಮಾವೇಶ ನಡೆಸಲು ನಿರ್ಧ ರಿಸಿದ್ದು, ಈ ಬಗ್ಗೆ ಮುಖ್ಯಮಂತ್ರಿ, ಉಸ್ತು ವಾರಿ ಸಚಿವರು, ಶಾಸಕರು, ಸಂಸದರಿಗೆ ಆಹ್ವಾನ ನೀಡಿ ಮುಂದಿನ ದಿನಗಳಲ್ಲಿ ತಿಳಿಸಲಾಗುತ್ತದೆ ಎಂದರು. ಜನಾಂಗದ ಸಂಘ ಸಂಸ್ಥೆಗಳ ವತಿಯಿಂದ ಬೇಡಿಕೆ ಇದ್ದರೆ ಅಂದು ನಡೆಯುವ ಸಮಾವೇಶದಲ್ಲಿ ಸಲ್ಲಿಸ ಬಹುದು. ಮನವಿ ಸಲ್ಲಿಸಲು ಬಯಸುವವರು ಸಂಘದ ಹೆಸರು, ಅಧ್ಯಕ್ಷರ ಹೆಸರು ತಿಳಿಸಿ ಕಾಯ್ದಿರಿಸಲು 9972832410 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ನಾಗ ರಾಜು, ನಿಂಗರಾಜು ಉಪಸ್ಥಿತರಿದ್ದರು.

ವರುಣ ಕ್ಷೇತ್ರದ ವಸತಿರಹಿತರಿಂದ ಅರ್ಜಿ ಆಹ್ವಾನ

ಮೈಸೂರು: ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಹೌಸಿಂಗ್ ಫಾರ್ ಆಲ್ ಶೀರ್ಷಿಕೆಯಡಿ ಪ್ರಧಾನಮಂತ್ರಿ ಆವಾಸ್ ಯೋಜನೆ ಮತ್ತು ಕೆ.ಆರ್.ಆಶ್ರಯ ವಸತಿ ಯೋಜನೆ ಯಡಿ ಮನೆಗಳನ್ನು ನಿರ್ಮಿಸಿ ನಿಯಮಾನುಸಾರ ಹಂಚಲು ವರುಣ ಕ್ಷೇತ್ರದ ವಸತಿ ರಹಿತರಿಂದ ಅರ್ಜಿ ಆಹ್ವಾನಿಸಿದೆ. ಜನವರಿ 2ರವರೆಗೆ ಅರ್ಜಿಗಳನ್ನು ವಿದ್ಯಾಭಾರತಿ ಕಲ್ಯಾಣಮಂಟಪದ ಎದುರು ಉತ್ತರಾದಿ ಮಠ ರಸ್ತೆಯಲ್ಲಿರುವ ಕೆ.ಆರ್.ಆಶ್ರಯ ಶಾಖೆ ಯಲ್ಲಿ ಪಡೆದು, ಜ.3ರಿಂದ ಏಪ್ರಿಲ್ 2ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಈ ಅವಕಾಶವನ್ನು ವರುಣ ಕ್ಷೇತ್ರದ ವಸತಿರಹಿತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.18ಕ್ಕೆ ಶರಣದರ್ಶನ ಕೃತಿ ಬಿಡುಗಡೆ

ಮೈಸೂರು, ಡಿ.14(ಎಸ್‌ಪಿಎನ್)– ಕೋವಿಡ್–19 ಲಾಕ್‌ಡೌನ್ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಪ್ರಯತ್ನದ ಭಾಗವಾಗಿ ಆನ್‌ಲೈನ್‌ನಲ್ಲಿ ನಡೆಸಿದ ಪ್ರವಚನಗಳು ಇದೀಗ 'ಶರಣ ದರ್ಶನ' ಕೃತಿಯಾಗಿ ಪ್ರಕಟಗೊಂಡಿದ್ದು, ಈ ಕೃತಿ ಡಿ.18 ಬೆಳಗ್ಗೆ 10.30ಕ್ಕೆ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಬಿಡುಗಡೆಗೊಳ್ಳಲಿದೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ನಾಡೋಜ ಡಾ.ಗೊ.ರು. ಚನ್ನಬಸಪ್ಪನವರಿಗೆ ಅಭಿನಂದನೆ ಹಾಗೂ 'ಶರಣದರ್ಶನ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಹಾಗೂ ಮುಕ್ತ ವಿವಿ ಪ್ರಾಧ್ಯಾಪಕಿ ಡಾ.ಜ್ಯೋತಿಶಂಕರ್ ಕೃತಿ ಕುರಿತು ಮಾತನಾಡಲಿದ್ದಾರೆ.

ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಮತ್ತು ಪ್ರೊ.ಎಸ್.ಜಿ.ಶಿವಶಂಕರ್ ಸಂಪಾದಕತ್ವದಲ್ಲಿ 'ಶರಣ ದರ್ಶನ' ಹೆಸರಿನಲ್ಲಿ ಪ್ರಕಟಗೊಂಡಿರುವ ಈ ಕೃತಿ 600 ಪುಟಗಳನ್ನು ಒಳಗೊಂಡಿದೆ. ಕೋವಿಡ್–19 ವೇಳೆ 110 ಆನ್‌ಲೈನ್ ಪ್ರವಚನ ಕಾರ್ಯಕ್ರಮ ನಡೆದಿತ್ತು. ಅದರಲ್ಲಿ ಐವತ್ತು ಪ್ರವಚನಗಳನ್ನು ಲೇಖನಗಳನ್ನಾಗಿಸಿ ಪ್ರಕಟಿಸಲಾಗಿದೆ.

ಚರ್ಮದ ಖಾಯಿಲೆ, ಸಂರಕ್ಷಣೆ ಕುರಿತ ಡಾ.ಹನುಮಂತಪ್ಪರ ಕೃತಿ ಇಂದು ಬಿಡುಗಡೆ

ಮೈಸೂರು, ಡಿ.14– ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ನಾಳೆ(ಡಿ.15) ಬೆಳಗ್ಗೆ 11 ಗಂಟೆಗೆ ಚರ್ಮರೋಗ ತಜ್ಞ ಡಾ.ಹೆಚ್.ಹನುಮಂತಪ್ಪ ಅವರ 'ಚರ್ಮದ ಖಾಯಿಲೆಗಳು ಮತ್ತು ಸಂರಕ್ಷಣೆ' ಕೃತಿ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ನಿವೃತ್ತ ಡಿವೈಎಸ್‌ಪಿ ಜೆ.ಬಿ.ರಂಗಸ್ವಾಮಿ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿವೃತ್ತ ನಿರ್ದೇಶಕ ಡಾ.ಜಿ.ಎಂ.ವಾಮದೇವ ಕೃತಿ ಕುರಿತು ಮಾತನಾಡಲಿದ್ದು, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಶ್ರೀ ಮುತ್ತುರಾಯ ಸ್ವಾಮಿ ದೇವಸ್ಥಾನಕ್ಕೆ ಮೇಘಾಲಯ ರಾಜ್ಯಪಾಲ ವಿಜಯಶಂಕರ್ ಭೇಟಿ



ಗುಡ್ಡದ ಶ್ರೀ ಮುತ್ತುರಾಯ ಸ್ವಾಮಿ ದೇವಸ್ಥಾನಕ್ಕೆ ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು, ಡಿ.14(ಎಸ್‌ಪಿಎನ್)– ಹನುಮ ಜಯಂತಿ ಪ್ರಯುಕ್ತ ಮೈಸೂರು ವಿಜಯನಗರ 4ನೇ ಹಂತದ ಬಸವನ ಪುರದ ಗುಡ್ಡದ ಶ್ರೀ ಮುತ್ತುರಾಯ ಸ್ವಾಮಿ ದೇವಸ್ಥಾನಕ್ಕೆ ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಭಾರತದ ಪ್ರತಿಯೊಂದು ಹಳ್ಳಿಯಲ್ಲೂ ಹನುಮ ಗುಡಿ ಇದ್ದೇ ಇರುತ್ತದೆ. ಹನುಮ ನಮ್ಮ ಧಾರ್ಮಿಕ ಅಸ್ಮಿತೆ. ಅಲ್ಲದೆ, ರಾಮಾಯಣದಲ್ಲಿ ಹನುಮನ ಪಾತ್ರ ಪ್ರಮುಖವಾಗಿರುವುದು ಎಲ್ಲರಿಗೂ ತಿಳಿದ ವಿಷಯ ಎಂದರಲ್ಲದೆ, ಹನುಮನ ಜನ್ಮಸ್ಥಳ ಆಂಜನಾದ್ರಿ ಬೆಟ್ಟ ಕರ್ನಾಟಕದಲ್ಲಿರುವುದು ಹೆಮ್ಮೆಯ ವಿಷಯ ಎಂದರು.

ಹಾಗಾಗಿ ಪ್ರತಿ ವರ್ಷ ಹನುಮ ಜಯಂತಿ ಸಂದರ್ಭದಲ್ಲಿ ವಿಜಯನಗರ 4ನೇ ಹಂತದಲ್ಲಿರುವ ಮುತ್ತುರಾಯ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ಹನುಮಂತನಿಗೆ ನನ್ನ ಭಕ್ತಿ ಸಮರ್ಪಿಸುವುದು ವಾಡಿಕೆ. ಹಾಗಾಗಿ ಇಂದು ಬೇರೆ ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ಹಿನ್ನೆಲೆಯಲ್ಲಿ ಈ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿದ್ದೇನೆ ಎಂದು ಹೇಳಿದರು.

ಮೇಘಾಲಯ ರಾಜ್ಯಭವನ 30 ಎಕರೆ ಪ್ರದೇಶದಲ್ಲಿದೆ. ರಾಜಭವನದ ಪ್ರವೇಶ ದ್ವಾರದಲ್ಲೇ 1200 ವರ್ಷಗಳಿಗೂ ಹಳೆಯದಾದ ಪಾರ್ವತಿ ಪರಮೇಶ್ವರ ದೇವಾಲಯವಿದೆ. ಅಲ್ಲದೆ, ತಾಯಿ ಚಾಮುಂಡೇಶ್ವರಿ ದೇವಿ ಭಾವಚಿತ್ರವನ್ನು ಆ ದೇವಸ್ಥಾನದಲ್ಲಿ ಅಳವಡಿಸಿದ್ದು, ನಿತ್ಯ ಅಲ್ಲಿನ ದೇವಸ್ಥಾನಕ್ಕೆ ಭೇಟಿ ನೀಡಿ, ದೈವದ ಆಶೀರ್ವಾದ ಪಡೆದ ನಂತರ ನನ್ನ ನಿತ್ಯ ಕೆಲಸ ಆರಂಭವಾಗುತ್ತದೆ. ಗುಡಿಯಲ್ಲಿರುವ ತಾಯಿ ಚಾಮುಂಡೇಶ್ವರಿ ಭಾವಚಿತ್ರ ನೋಡಿದಾಗ ಬೆಟ್ಟದ ತಾಯಿ ನೆನಪಾಗುತ್ತಾಳೆ. ಏಕೆಂದರೆ ಮೈಸೂರು ನನ್ನ ಕರ್ಮಭೂಮಿ ಎಂದರು. ಈ ವೇಳೆ ಬಿಜೆಪಿ ಮುಖಂಡ ಎಲ್.ಆರ್.ಮಹದೇವಸ್ವಾಮಿ, ಮುತ್ತುರಾಯಸ್ವಾಮಿ ಟ್ರಸ್ಟ್ ಅಧ್ಯಕ್ಷ ಬಿ.ಶ್ರೀನಿವಾಸ್, ಕಾರ್ಯದರ್ಶಿ ಮೊಗಣ್ಣೇಗೌಡ, ಖಜಾಂಚಿ ಹೆಚ್.ಡಿ.ಶ್ರೀಕಾಂತ್, ಪ್ರಧಾನ ಅರ್ಚಕ ಅರುಣಶಾಸ್ತ್ರಿ ಸೇರಿದಂತೆ ಇತರರಿದ್ದರು.

ಬೂತ್ ಅಧ್ಯಕ್ಷರಿಗೆ ಅಭಿನಂದನೆ



ಬಿಜೆಪಿ ಸಂಘಟನಪರ್ವ ಅಭಿಯಾನದ ಅಂಗವಾಗಿ ಬೂತ್ ಅಧ್ಯಕ್ಷರ ಚುನಾವಣೆ ನಡೆಸುತ್ತಿದ್ದು, ಚಾಮುಂಡೇಶ್ವರಿ ಕ್ಷೇತ್ರದ ಆಲನಹಳ್ಳಿ ಮಹಾಶಕ್ತಿ ಕೇಂದ್ರದ ಬೂತ್ ನಂ.229, 233, 235ರ ಅಧ್ಯಕ್ಷರಾಗಿ ಆಯ್ಕೆಯಾದ ಬಸವರಾಜ್, ಸಾಗರ್, ರಾಜು ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಬಿಜೆಪಿ ರಾಜ್ಯ ಚುನಾವಣಾಧಿಕಾರಿ ಡಾ.ನವೀನ್, ಜಿಲ್ಲಾ ಚುನಾವಣಾಧಿಕಾರಿ ಪ್ರೊ.ಸಿದ್ದರಾಮಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಜಿಲ್ಲಾ ಸಹ ಚುನಾವಣಧಿಕಾರಿ ವಿ.ಸೋಮಸುಂದರ, ಮಂಡಲದ ಬಿಜೆಪಿ ಅಧ್ಯಕ್ಷ ವೈ.ಟಿ.ರವಿ, ಮಹಾಶಕ್ತಿಕೇಂದ್ರದ ಅಧ್ಯಕ್ಷ ಆಲನಹಳ್ಳಿ ಮಹದೇವಸ್ವಾಮಿ, ಹಿರಿಯಣ್ಣ, ಸುನಿಲ್, ಶಿವು, ನಂಜುಂಡಸ್ವಾಮಿ, ಪರಶುರಾಮಪ್ಪ, ಮಯೂರ, ಮೂರ್ತಿ, ಮಹೇಶ್, ಚಂದ್ರು, ಮದುರಾಜ್ ಮತ್ತಿತರರು ಉಪಸ್ಥಿತರಿದ್ದರು.

ಕ್ಯಾನ್ಸರ್ ಚಿಕಿತ್ಸೆಗಾಗಿ ಔಷಧಿ ಹಸ್ತಾಂತರ



ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿರುವ ಮಂಜುಳಮ್ಮ ಎಂಬುವರಿಗೆ ಶ್ರೀ ಮೈಸೂರು ಗುಜರಾತಿ ಸಮಾಜದ ವತಿಯಿಂದ 6 ತಿಂಗಳ ಚಿಕಿತ್ಸೆಗಾಗಿ 60 ಸಾವಿರ ರೂ.ಮೌಲ್ಯದ ಔಷಧಿಗಳನ್ನು ಆರ್‌ಎಂಓ ಡಾ.ಮುಖೇಶ್ ಜೈನ್ ಉಪಸ್ಥಿತಿಯಲ್ಲಿ ಹಸ್ತಾಂತರಿಸಲಾಯಿತು. ಶ್ರೀ ಮೈಸೂರು ಗುಜರಾತಿ ಸಮಾಜದ ಅಧ್ಯಕ್ಷ ಮೆಹುಲ್ ಜೆ ಪಟೇಲ್, ಕಾರ್ಯದರ್ಶಿ ಕಮಲೇಶ್ ಮೋಧಾ, ಜಂಟಿ ಕಾರ್ಯದರ್ಶಿ ವಿಶಾಲ್ ಶಾ, ಸದಸ್ಯರಾದ ಗೌರವ್ ಮಾಳವೀಯ, ನಿರ್ಮಲ್ ಶಾ ಉಪಸ್ಥಿತರಿದ್ದರು.

ಇಂದು ನುಡಿನಮನ ಕಾರ್ಯಕ್ರಮ

ಮೈಸೂರು,ಡಿ.14–ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧವಿಹಾರದಲ್ಲಿ ಡಿ.15ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ ಧಮ್ಮಚಾರಿ, ಬೌದ್ಧಧಮ್ಮದ ಪ್ರಚಾರಕ ಡಾ.ಬಿ.ರಾಜಾನಂದಮೂರ್ತಿ ಅವರಿಗೆ ನುಡಿನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಜಾನಂದಮೂರ್ತಿಯವರು ವೃತ್ತಿಯಲ್ಲಿ ವೈದ್ಯರಾಗಿದ್ದು, ಕೂಡ ಬಾಬಾಸಾಹೇಬರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡಿದ್ದರು. ರಾಜ್ಯಾದ್ಯಂತ ಬೌದ್ಧಧಮ್ಮದ ಪ್ರಚಾರ, ಆಚಾರ–ವಿಚಾರಗಳನ್ನು ಬೋಧಿಸಿ ಜನರಲ್ಲಿ ಅಂಬೇಡ್ಕರ್ ಮತ್ತು ಬುದ್ಧರ ಚಿಂತನೆಗಳನ್ನು ತಿಳಿಸುವ ಕೆಲಸ ಮಾಡುತ್ತಿದ್ದರು. ಧಮ್ಮದ ಬೆಳವಣಿಗೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಇವರು, ಅಂಬೇಡ್ಕರ್ ಮತ್ತು ಬುದ್ಧರ ಕುರಿತು ಪುಸ್ತಕಗಳನ್ನು ಬರೆದಿದ್ದಾರೆ. ದೇಶ–ವಿದೇಶಗಳಲ್ಲಿ ನಡೆಯುವ ಸಮ್ಮೇಳನಗಳಲ್ಲಿ ಪಾಲ್ಗೊಂಡು ಪ್ರಚಲಿತದಲ್ಲಿದ್ದರು ಎಂದು ಸಮಿತಿ ಕಾರ್ಯದರ್ಶಿ ಆರ್.ಮಹದೇವಪ್ಪ ತಿಳಿಸಿದ್ದಾರೆ.

ಕಾಂಗ್ರೆಸ್‌ನಿಂದ ಸಂವಿಧಾನ ಶಿಕಾರಿ; 75 ಬಾರಿ ಬದಲಾವಣೆ

ಸಂಸತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ



ನವದೆಹಲಿ, ಡಿ.14– 55 ವರ್ಷ ಒಂದೇ ಕುಟುಂಬ ಭಾರತದಲ್ಲಿ ಆಡಳಿತ ನಡೆಸಿದೆ. ಪ್ರತಿ ಹಂತದಲ್ಲಿ ಈ ಕುಟುಂಬ ಸಂವಿಧಾನ ಮುಗಿಸಲು ಯತ್ನಿಸಿದೆ. ಸಂವಿಧಾನವನ್ನು ಬದಲಾಯಿಸುವುದು ಕಾಂಗ್ರೆಸ್‌ಗೆ ನಂತರ ಅಭ್ಯಾಸವಾಯಿತು. ಕಾಂಗ್ರೆಸ್ ಹಂತ ಹಂತವಾಗಿ ಸಂವಿಧಾನವನ್ನು ಬೇಟೆಯಾಡುತ್ತಾ ಬಂದಿದೆ. 75 ಬಾರಿ ಸಂವಿಧಾನ ಬದಲಾವಣೆ ಮಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

ನಮ್ಮ ರಸ್ತೆಗೆ ಅಡ್ಡವಾದರೆ ಸಂವಿಧಾನ ತಿದ್ದುಪಡಿ ಮಾಡಬೇಕು ಎಂದು ಮುಖ್ಯಮಂತ್ರಿಗಳಿಗೆ ನೆಹರು ಪತ್ರ ಬರೆದಿದ್ದರು. ಮೊದಲ ಪ್ರಧಾನಿ ಪಾಪ ಮಾಡಿ ಹೋಗಿದ್ದರು. ನಂತರ ಬಂದವರು ಅದನ್ನೇ ಮುಂದುವರಿಸಿದರು ಎಂದು ಹೇಳುವ ಮೂಲಕ ಗಾಂಧಿ ಕುಟುಂಬವನ್ನು ಕುಟುಕಿದರು. ವಿಶ್ವದ ಅತಿದೊಡ್ಡ, ಕಠಿಣ ಸಂವಿಧಾನ ನಮ್ಮ ದೇಶದ ಸಂವಿಧಾನ. ಇದು ಜಾರಿಯಾಗಿ 75 ವರ್ಷ ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ಲೋಕಸಭೆಯಲ್ಲಿ ಸಂವಿಧಾನ ಕುರಿತು ವಿಶೇಷ ಚರ್ಚೆ ನಡೆಯಿತು. ಈ ವೇಳೆ ನೆಹರು ಅವರಿಂದ ಆರಂಭಿಸಿ ರಾಹುಲ್ ಗಾಂಧಿಯವರೆಗೆ ಗಾಂಧಿ ಕುಟುಂಬ ಹೇಗೆ ಸಂವಿಧಾನವನ್ನು ದುರ್ಬಳಕೆ ಮಾಡಿದೆ ಎಂಬುದನ್ನು 1 ಗಂಟೆ 47 ನಿಮಿಷಗಳ ಭಾಷಣದಲ್ಲಿ ವಿವರಿಸಿ ಮೋದಿ ಆಕ್ರೋಶ ಹೊರ ಹಾಕಿದರು.

ಮೋದಿ ಹೇಳಿದ್ದೇನು?: ಕಾಂಗ್ರೆಸ್‌ನ ಒಂದು ಕುಟುಂಬ ಸಂವಿಧಾನಕ್ಕೆ ಹಾನಿ ಮಾಡಲು ಯಾವುದೇ ಅವಕಾಶ ಬಿಟ್ಟಿಲ್ಲ. 55 ವರ್ಷ ಒಂದೇ ಕುಟುಂಬ ಆಡಳಿತ ನಡೆಸಿದೆ. ಇದು ವಿಚಾರ, ನೀತಿ–ರೀತಿ ನಿರಂತರವಾಗಿ ನಡೆಯುತ್ತಿದೆ. ಈ ಕುಟುಂಬ ಪ್ರತಿ ಹಂತದಲ್ಲಿ ಸಂವಿಧಾನವನ್ನು ಮುಗಿಸಲು ಯತ್ನಿಸಿದೆ. 1947–52ವರೆಗೆ ಚುನಾಯಿತ ಸರ್ಕಾರ ಇರಲಿಲ್ಲ. ಸೆಲೆಕ್ಟೆಡ್ ಸರ್ಕಾರ ಇತ್ತು. ರಾಜ್ಯಸಭೆ, ರಾಜ್ಯ ಸರ್ಕಾರ ಇರಲಿಲ್ಲ. ಚುನಾಯಿತ ಸರ್ಕಾರ ಇಲ್ಲದಿದ್ದಾಗ ಸಂವಿಧಾನ ತಿದ್ದುಪಡಿ ಮಾಡುವ ಕೆಲಸ ಮಾಡಲಾಯಿತು. ಸಂವಿಧಾನ ನಿರ್ಮಾತೃಗಳಿಗೆ ಅವಮಾನಿಸುವ ಕೆಲಸ ಮಾಡಲಾಯಿತು.

ಸಂವಿಧಾನ ನಮ್ಮ ರಸ್ತೆಗೆ ಅಡ್ಡಲಾಗಿ ಬಂದರೆ ಸಂವಿಧಾನದ ತಿದ್ದುಪಡಿ ಮಾಡಬೇಕು ಎಂದು ನೆಹರು ಸಿಎಂಗಳಿಗೆ ಪತ್ರ ಬರೆದಿದ್ದರು. ನೆಹರು ಅವರು ನಿರ್ಧಾರಕ್ಕೆ ಸಾಕಷ್ಟು ಆಕ್ಷೇಪಗಳು ಬಂದರೂ ಲೆಕ್ಕಿಸದೇ ತಮ್ಮದೇ ಸಂವಿಧಾನ ನಡೆಸಿದರು. ಕಾಂಗ್ರೆಸ್ ಹಂತ ಹಂತವಾಗಿ ಸಂವಿಧಾನವನ್ನು ಬೇಟೆಯಾಡಿದೆ. ಮೊದಲ ಪ್ರಧಾನಿ ಪಾಪ ಮಾಡಿ ಹೋಗಿದ್ದರು. ನಂತರ ಬಂದವರು ಅದೇ ಸಂಪ್ರದಾಯವನ್ನು ಮುಂದುವರಿಸಿದರು. ನ್ಯಾಯಾಂಗದ ರೆಕ್ಕೆ ಕತ್ತರಿಸುವ ಕೆಲಸ ಇಂದಿರಾಗಾಂಧಿ ಮಾಡಿದ್ದರು. ತುರ್ತು ಪರಿಸ್ಥಿತಿ ಹೇರುವ ಮೂಲಕ ನ್ಯಾಯಾಂಗದ ಹಕ್ಕುಗಳನ್ನು ಇಂದಿರಾಗಾಂಧಿ ಕಿತ್ತುಕೊಂಡಿದ್ದರು. ನ್ಯಾಯಾಂಗದ ಮೇಲೆ ನಿಯಂತ್ರಣ ಮಾಡಲು ಅಧಿಕಾರ ಮಾಡಿಕೊಂಡಿದ್ದರು. ಕೋರ್ಟ್ ಅವರ ಆಯ್ಕೆಯನ್ನು ರದ್ದು ಮಾಡಿತ್ತು. ಅದಕ್ಕೆ ಸಿಟ್ಟಿನಿಂದ ಇಂದಿರಾಗಾಂಧಿ ಕುರ್ಚಿ ಉಳಿಸಿಕೊಳ್ಳಲು ತುರ್ತು ಪರಿಸ್ಥಿತಿ ಹೇರಿದರು.

1975ರಲ್ಲಿ ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಪ್ರಧಾನಮಂತ್ರಿ, ಅಧ್ಯಕ್ಷ ಇವರ ಚುನಾವಣೆ ವಿರುದ್ಧ ನ್ಯಾಯಾಲಯಕ್ಕೆ ಹೋಗಲು ಸಾಧ್ಯವಾಗದ ತಿದ್ದುಪಡಿ ಮಾಡಿದರು. ರಾಜೀವ್ ಗಾಂಧಿ ಪ್ರಧಾನಮಂತ್ರಿಯಾದ ಬಳಿಕ ಸಂವಿಧಾನಕ್ಕೆ ಮತ್ತೊಂದು ಹಾನಿ ಮಾಡಿದರು. ಎಲ್ಲರಿಗೂ ಸಮಾನತೆ, ಎಲ್ಲರ ನ್ಯಾಯಕ್ಕೆ ಧಕ್ಕೆ ಮಾಡಿದರು. ಶಹಬಾನು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಆದರೆ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಸುಪ್ರೀಂ ಕೋರ್ಟ್ ಆದೇಶವನ್ನು ಮೆಟ್ಟಿ ನಿಂತರು. ಕೋರ್ಟ್ ಆದೇಶ ಬದಲಿಸಲು ಸಂವಿಧಾನ ತಿದ್ದುಪಡಿ ಮಾಡಿದರು. ವೋಟು ಬ್ಯಾಂಕ್‌ಗಾಗಿ, ನ್ಯಾಯಕ್ಕಾಗಿ ಹಂಬಲಿಸುತ್ತಿದ್ದ ಮಹಿಳೆಯ ಹಕ್ಕು ಕಸಿಯಲಾಯಿತು.

ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಬೇಕಾ ಬೇಡವೇ ಎಂದು ಚರ್ಚೆ ನಡೆದಿತ್ತು. ಸ್ವತಃ ಅಂಬೇಡ್ಕರ್ ಅವರು ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಆದರೆ ಕಾಂಗ್ರೆಸ್ ಅಧಿಕಾರಕ್ಕಾಗಿ ವೋಟ್ ಬ್ಯಾಂಕ್ ಖುಷಿಪಡಿಸಲು ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡುವ ಮೂಲಕ ಸಂವಿಧಾನ ನಿರ್ಮಾತೃರ ಮನಸ್ಸಿಗೆ ಕಾಂಗ್ರೆಸ್ ಘಾಸಿ ಮಾಡಿತ್ತು.

ಕಾಂಗ್ರೆಸ್‌ಗೆ ಸಂವಿಧಾನ ಪವಿತ್ರ ಗ್ರಂಥ ಅಲ್ಲ, ಆಟದ ವಸ್ತುವಾಗಿದೆ. ಜನರನ್ನು ಹೆದರಿಸಲು ಸಂವಿಧಾನವನ್ನು ಕಾಂಗ್ರೆಸ್ ಅಸ್ತ್ರ ಮಾಡಿಕೊಂಡಿದೆ. ಕಾಂಗ್ರೆಸ್ ನಾಯಕರು ತಮ್ಮ ಪಕ್ಷದ ಸಂವಿಧಾನವನ್ನೇ ಪಾಲಿಸುವುದಿಲ್ಲ. ಕುಟುಂಬ ರಾಜಕೀಯ, ಅಧಿಕಾರ ದಾಹದಿಂದ ಕೂಡಿದೆ. ಸರ್ದಾರ್ ಪಟೇಲ್ ಪ್ರಧಾನಿಯಾಗಬೇಕಿತ್ತು. ಆದರೆ ಅವರನ್ನು ಪ್ರಧಾನಿಯಾಗಿ ಆಯ್ಕೆ ಮಾಡಲು ಬಿಡಲಿಲ್ಲ. ತಮ್ಮ ಪಕ್ಷದ ಸಂವಿಧಾನ ಪಾಲನೆ ಮಾಡದವರು ದೇಶದ ಸಂವಿಧಾನ ಹೇಗೆ ಸ್ವೀಕಾರ ಮಾಡುತ್ತಾರೆ?

ಕಾಂಗ್ರೆಸ್‌ನಲ್ಲಿ ಸೀತರಾಮ್ ಕೇಸರಿ ಎನ್ನುವ ಅತೀ ಹಿಂದುಳಿದ ಸಮುದಾಯದ ಅಧ್ಯಕ್ಷರಿದ್ದರು. ಅವರನ್ನು ಶೌಚಾಲಯದಲ್ಲಿ ಕೂಡಿ ಹಾಕಿ ಅವಮಾನ ಮಾಡಲಾಯಿತು. ಕಾಂಗ್ರೆಸ್ ಪಕ್ಷವನ್ನು ಒಂದು ಕುಟುಂಬ ಕಬ್ಜಾ ಮಾಡಿಕೊಂಡಿತು. ಸಮಾನ ನಾಗರಿಕ ಸಂಹಿತ ಸಂವಿಧಾನ ರಚನಾ ಸಮಿತಿಯ ಗಮನದಲ್ಲಿತ್ತು. ಚರ್ಚೆ ಬಳಿಕ ಆಯ್ಕೆಯಾಗಿ ಬಂದ ಸರ್ಕಾರ ಈ ಬಗ್ಗೆ ನಿರ್ಧಾರ ಮಾಡಲಿ ಎಂದು ಬಿಡಲಾಯಿತು. ಧಾರ್ಮಿಕ ಅಧಾರದ ಮೇಲೆ ನೀಡಲಾಗುವ ವೈಯಕ್ತಿಕ ಕಾನೂನು ಅಂತ್ಯಗೊಳಿಸಲು ಅಂಬೇಡ್ಕರ್ ನಿರ್ಧರಿಸಿದ್ದರು. ಸುಪ್ರೀಂಕೋರ್ಟ್ ಕೂಡಾ ಏಕರೂಪ ನಾಗರಿಕ ನೀತಿ ಸಂಹಿತೆ ಜಾರಿಯಾಗಬೇಕು ಎಂದು ಹೇಳಿದೆ. ಎಲ್ಲಾ ಭಾವನೆ ಗಮನದಲ್ಲಿಟ್ಟುಕೊಂಡು ಅದನ್ನು ಜಾರಿ ಮಾಡುವ ದಾರಿಯಲ್ಲಿದ್ದೇವೆ. ಕಾಂಗ್ರೆಸ್ ಇದನ್ನು ವಿರೋಧ ಮಾಡುತ್ತಿದೆ. ಯಾಕೆಂದರೆ ಇದು ಅವರ ರಾಜಕೀಯಕ್ಕೆ ಹೊಂದಿಕೆ ಆಗುವುದಿಲ್ಲ ಎಂದು ಮೋದಿ ಹೇಳಿದರು.

> “ ಮನಮೋಹನ್ ಸಿಂಗ್ ಅವಧಿಯಲ್ಲಿ ಇತಿಹಾಸದಲ್ಲಿ ಮೊದಲ ಬಾರಿಗೆ ಸಂವಿಧಾನಕ್ಕೆ ಆಳವಾದ ಏಟು ನೀಡಲಾಯಿತು. ಚುನಾವಣೆಯಲ್ಲಿ ಆಯ್ಕೆಯಾದ ಸರ್ಕಾರದ ಪ್ರಧಾನಿಯ ಮೇಲೆ ನ್ಯಾಷನಲ್ ಅಡ್ವೈಸರಿ ಸಮಿತಿ ರಚನೆ ಮಾಡಲಾಯಿತು. ಜನರು ಸರ್ಕಾರವನ್ನು ಆಯ್ಕೆ ಮಾಡುತ್ತಾರೆ. ಸಂಸದರು ಪ್ರಧಾನಿ ಅವರನ್ನು ಆಯ್ಕೆ ಮಾಡುತ್ತಾರೆ. ಪ್ರಧಾನಿ ಮಂತ್ರಿ ಮಂಡಲವನ್ನು ರಚನೆ ಮಾಡುತ್ತಾರೆ. ಇಂತಹ ಕ್ಯಾಬಿನೆಟ್ ನಿರ್ಧಾರವನ್ನು ಪತ್ರಕರ್ತರ ಮುಂದೆ ಹರಿದು ಹಾಕಲಾಯಿತು. ಒಬ್ಬ ಅಹಂಕಾರಿ ಕ್ಯಾಬಿನೆಟ್ ನಿರ್ಧಾರವನ್ನು ಹರಿದು ಹಾಕುವುದು ಯಾವ ರೀತಿಯ ವ್ಯವಸ್ಥೆ (ಎರಡು ವರ್ಷ ಜೈಲುಶಿಕ್ಷೆಗೆ ಗುರಿಯಾದ ಜನಪ್ರತಿನಿಧಿಗಳ ಸದಸ್ಯತ್ವವನ್ನು ಅನರ್ಹಗೊಳಿಸುವುದರಿಂದ ರಕ್ಷಿಸಲು 2013ರಲ್ಲಿ ಯುಪಿಎ2 ಸರ್ಕಾರವು ತರಲು ಹೊರಟಿದ್ದ ಸುಗ್ರೀವಾಜ್ಞೆಯ ಪ್ರತಿಯನ್ನು ಸ್ವತಃ ರಾಹುಲ್ ಗಾಂಧಿ ಸಾರ್ವಜನಿಕವಾಗಿ ಹರಿದು ಹಾಕಿದ್ದರು). ಒಬ್ಬ ಅಹಂಕಾರಿ ಸಂಪುಟ ನಿರ್ಧಾರ ಹರಿದು ಹಾಕಿದರೆ ಸಚಿವ ಸಂಪುಟದ ನಿರ್ಧಾರ ಬದಲಾಗುತ್ತದೆ.
>
> –ಪ್ರಧಾನಿ ನರೇಂದ್ರ ಮೋದಿ

ಆಹಾರ ಸುರಕ್ಷತೆ, ಔಷಧ ಆಡಳಿತ ಇಲಾಖೆ ಮರು ಪದನಾಮೀಕರಿಸಿ ಆದೇಶ

ಮೈಸೂರು, ಡಿ.14(ಎಸ್‌ಪಿಎನ್)– ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆಗಳನ್ನು ವಿಲೀನಗೊಳಿಸಿ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ(ಎಫ್‌ಡಿಎ) ಎಂದು ಮರು ಪದನಾಮೀಕರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ವೈ.ದಿನಕರನ್ (ಭಾವೈಪ ಮತ್ತು ಸಮನ್ವಯ) ಶನಿವಾರ ಆದೇಶಿಸಿದ್ದಾರೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಆಯುಕ್ತರನ್ನು, ಇನ್ನು ಮುಂದೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ (ಎಫ್‌ಡಿಎ) ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಿ ಆದೇಶಿಸಿದ್ದು, ಇವರ ಆಡಳಿತಾತ್ಮಕ ನಿಯಂತ್ರಣದಡಿಯಲ್ಲಿ ಎರಡು ಇಲಾಖೆಗಳ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಕಾರ್ಯ ನಿರ್ವಹಿಸತಕ್ಕದ್ದು. ಅಲ್ಲದೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆಯ ಕಾರ್ಯ ವೈಖರಿಗಳು ಬಹುತೇಕ ಒಂದೇ ರೀತಿಯಲ್ಲಿದ್ದು, ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಆಹಾರ ಹಾಗೂ ಔಷಧಿಗಳು ಲಭ್ಯವಾಗುವಂತೆ ಕಾರ್ಯನಿರ್ವಹಿಸುತ್ತಿದ್ದವು. ಆದ್ದರಿಂದ, ಆಯುಕ್ತರು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಇವರ ಅಧೀನದಲ್ಲಿ ಔಷಧ ನಿಯಂತ್ರಣ ಇಲಾಖೆಯನ್ನು ವಿಲೀನಗೊಳಿಸುವುದರಿಂದ ಸಾರ್ವಜನಿಕರಿಗೆ ಇನ್ನು ಹೆಚ್ಚಿನ ಗುಣಾತ್ಮಕ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಹಾಗಾಗಿ ಔಷಧ ನಿಯಂತ್ರಣ ಇಲಾಖೆಯನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ವಿಲೀನಗೊಳಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಎಫ್‌ಡಿ 710 ಇಎಕ್ಸ್‌ಪಿ–5 2024, ದಿನಾಂಕ:6.12.2024ರಲ್ಲಿ ನೀಡಿರುವ ಸಹಮತಿ ಮೇರೆಗೆ ಮತ್ತು ಸಚಿವ ಸಂಪುಟ ಪ್ರಕರಣ ಸಂಖ್ಯೆ:ಸಿ. 699/2024ರಲ್ಲಿ ನೀಡಿರುವ ಅನುಮೋದನೆ ಅನ್ವಯ ಆದೇಶಿಸಿದ್ದಾರೆ.

> “ ಜಮ್ಮು–ಕಾಶ್ಮೀರ, ಗುಜರಾತ್, ಉತ್ತರ ಪ್ರದೇಶ, ಅಸ್ಸಾಂ, ಹರಿಯಾಣ, ರಾಜಾಸ್ಥಾನ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈಗಾಗಲೇ ಔಷಧ ನಿಯಂತ್ರಣ ಇಲಾಖೆ ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಗಳು, ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ನಿಯಂತ್ರಣ ಇಲಾಖೆಯಡಿಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದು ಕಂಡ ಬಂದ ಹಿನ್ನಲೆಯಲ್ಲಿ ನಮ್ಮ ರಾಜ್ಯದಲ್ಲಿಯೂ ಔಷಧ ನಿಯಂತ್ರಣ ಇಲಾಖೆ ಮತ್ತು ಆಹಾರ ಸುರಕ್ಷತೆ ಇಲಾಖೆಗಳನ್ನು ವಿಲೀನಗೊಳಿಸುವುದು ಆಡಳಿತಾತ್ಮಕ ದೃಷ್ಟಿಯಿಂದ ಅಗತ್ಯವಾಗಿರುತ್ತದೆ.
>
> –ವೈ.ದಿನಕರನ್, ಅಧೀನ ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಹಾಡಹಗಲೇ ಮನೆ ಬೀಗ ಒಡೆದು 15 ಲಕ್ಷ ನಗದು, 130 ಗ್ರಾಂ ಚಿನ್ನಾಭರಣ ಕಳ್ಳತನ

ಹಾಸನ: ನಗರದ ಹೊಸ ಬಸ್ ನಿಲ್ದಾಣದ ಎದುರಿನ ಕೆಹೆಚ್‌ಬಿ ಬಡಾವಣೆಯ ಮನೆಯೊಂದರಲ್ಲಿ ಸುಮಾರು 15 ಲಕ್ಷ ರೂ. ನಗದು ಹಾಗೂ 7 ಲಕ್ಷ ರೂ. ಬೆಲೆ ಬಾಳುವ 130 ಗ್ರಾಂ. ಚಿನ್ನಾಭರಣವನ್ನು ಕೇವಲ 20 ನಿಮಿಷದಲ್ಲಿ ಕಳ್ಳರು ಕದ್ದು ಪರಾರಿಯಾಗಿದ್ದಾರೆ. ಬಡಾವಣೆಯ ಸಚಿನ್ ಮನೆಯಲ್ಲಿ ಈ ಕೃತ್ಯ ನಡೆದಿದೆ. ಸಚಿನ್ ಅವರ ಪತ್ನಿ ಸರ್ಕಾರಿ ನೌಕರರಾಗಿದ್ದು ಶುಕ್ರವಾರ ಬೆಳಿಗ್ಗೆ ಕೆಲಸಕ್ಕೆ ತೆರಳಿದ್ದರು. ನಂತರ ಪತಿ ಸಚಿನ್ ಮನೆಗೆ ಬೀಗ ಹಾಕಿಕೊಂಡು ಹೊರಗೆ ಹೋಗಿ, ಸಂಜೆ ಮನೆಗೆ ವಾಪಸ್ ಬಂದಿದ್ದಾರೆ. ಮನೆಯ ಮುಂದಿನ ಬಾಗಿಲು ತೆರೆದಿತ್ತು. ಆತಂಕದಿಂದ ಒಳಗೆ ಹೋಗಿ ನೋಡಿದಾಗ ಕಳ್ಳತನ ನಡೆದುಹೋಗಿದೆ.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಂಭ್ರಮದ ಶಿವದೀಪೋತ್ಸವ

ಅಜ್ಞಾನದಿಂದ ಸುಜ್ಞಾನದೆಡೆಗೆ ಕೊಂಡೊಯ್ಯುವುದೇ ಶಿವ ದೀಪೋತ್ಸವ: ಡಾ.ಗುಬ್ಬಿಗೂಡು



ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶಿವದೀಪೋತ್ಸವ.

ಸುತ್ತೂರು, ಡಿ.14– ಶಿವದೀಪೋತ್ಸವದ ಅಂಗವಾಗಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ನಾರಾಯಣ ಸ್ವಾಮಿ ದೇವಾಲಯಗಳಲ್ಲಿ ಶುಕ್ರವಾರ ಸಂಜೆ ವಿಶೇಷ ಪೂಜಾ ಕಾರ್ಯಕ್ರಮಗಳು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದವು.

ಶಿವದೀಪೋತ್ಸವ (ಕೃತ್ತಿಕಾ ಮಹೋತ್ಸವ)ದಲ್ಲಿ ಮಹಾಮಂಗಳಾರತಿ, ಬೆಳ್ಳಿ ರಥದ ಪ್ರಾಕಾರೋತ್ಸವ ನೆರವೇರಿತು. ಸುತ್ತೂರು ಶಾಲೆಯ ಮಕ್ಕಳ ಸಾಮೂಹಿಕ ಪ್ರಾರ್ಥನೆಯ ನಂತರ ಪದವಿಪೂರ್ವ ಶಿಕ್ಷಣ ಇಲಾಖೆಯ ಎನ್.ಎಸ್.ಎಸ್ ಘಟಕದ ರಾಜ್ಯ ಸಂಯೋಜನಾಧಿಕಾರಿ ಡಾ. ಗುಬ್ಬಿಗೂಡು ರಮೇಶ್ ಉಪನ್ಯಾಸ ನೀಡುತ್ತಾ, ಅಜ್ಞಾನದಿಂದ ಸುಜ್ಞಾನದೆಡೆಗೆ ಕೊಂಡೊಯ್ಯುವುದೇ ಶಿವದೀಪೋತ್ಸವ. ಇಂದು ಜಾಗತೀಕರಣದಿಂದ ಪ್ರಪಂಚದಾದ್ಯಂತ ದ್ವೇಷ, ಅಸೂಯೆ, ಆಕ್ರೋಶ ತುಂಬಿ ತುಳುಕುತ್ತಿದ್ದು ದೇಶ ದೇಶಗಳ ನಡುವೆ ವೈರತ್ವ ಗುಣಗಳು ಬೆಳೆಯುತ್ತಿವೆ.

ಸುತ್ತೂರು ಶ್ರೀಮಠದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಸಂಸ್ಥೆಗೆ ಕೀರ್ತಿಯನ್ನು ತರುವಂತವರಾಗಬೇಕು. ಪ್ರಸ್ತುತ ದಿನಗಳಲ್ಲಿ ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತಿದ್ದು ನೈತಿಕ ಶಿಕ್ಷಣದ ಅವಶ್ಯಕತೆ ಇರುತ್ತದೆ. ಕುಟುಂಬದ ಹಿರಿಯರಿಗೆ ಗೌರವ ಕೊಡಬೇಕು. ಕಷ್ಟದಲ್ಲಿರುವವರಿಗೆ ಸಹಾಯವನ್ನು ಮಾಡಬೇಕು. ಅತಿಯಾಸೆಯಿಂದ ಮನುಷ್ಯ ಹೊರಬಂದು ಹಂಚಿ ತಿನ್ನುವಂತಹ ಮನಸ್ಸನ್ನು ಬೆಳೆಸಿಕೊಳ್ಳಬೇಕು ಹಾಗೂ ಸಂಕುಚಿತ ಮನೋಭಾವವನ್ನು ಬಿಟ್ಟು ವಿಶಾಲ ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಳ್ಳಬೇಕು. 12ನೇ ಶತಮಾನದಲ್ಲಿ ಶಿವಶರಣರು ವಚನಗಳ ಮೂಲಕ ಸಮಾಜದ ಅಂಕು–ಡೊಂಕುಗಳು, ವಿಡಂಬನೆ, ಓರೆ–ಕೋರೆಗಳನ್ನು ತಿದ್ದುವಂತಹ ಸತ್ಯಾನ್ವೇಷಣೆಯ ವಾಸ್ತವದ ಬದುಕು ಮತ್ತು ಅನುಭವಗಳನ್ನು ಎಲ್ಲರಿಗೂ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ವಚನಗಳ ಮೂಲಕ ತಿಳಿಸಿದರು.

ವಚನ ಸಾಹಿತ್ಯ ಇಡೀ ವಿಶ್ವಕ್ಕೆ ಕೊಟ್ಟ ಬಹುದೊಡ್ಡ ಕೊಡುಗೆಯಾಗಿದೆ. ವಚನಗಳಲ್ಲಿ ಬೆಳಕಿದೆ, ಬದುಕಿಗೆ ದಾರಿ ಇದೆ, ನೊಂದವರಿಗೆ ಸಾಂತ್ವನವಿದೆ, ಸಮಸ್ಯೆಗಳಿಗೆ ಉತ್ತರವಿದೆ, ಮಾನವನ ಆತ್ಮೋದ್ಧಾರಕ್ಕೆ ಬೇಕಾದುದೆಲ್ಲಾ ಇದೆ.

ಸರ್ವಕಾಲಕ್ಕೂ ವಚನಗಳ ಸಾರಾಂಶ ಒಂದೇ ಆಗಿರುತ್ತದೆ. ಇಂತಹ ವಚನ ಸಾಹಿತ್ಯದಲ್ಲಿ ಬರುವ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಾರ್ಥಕ ಬದುಕನ್ನು ಸಾಗಿಸೋಣ. ಇಂದಿನ ಯುವಕರು ಸಾಮಾಜಿಕ ಜಾಲತಾಣಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸಿಕೊಳ್ಳಬೇಕು. ಸಂದೇಶಗಳನ್ನು ರವಾನೆ ಮಾಡುವಾಗ ಸಂಸ್ಕೃತಿ, ಮೌಲ್ಯಗಳು, ಆಧ್ಯಾತ್ಮಿಕ, ಧಾರ್ಮಿಕ ವಿಚಾರಗಳಿಗೆ ಒತ್ತು ನೀಡಿ, ಲೋಕಕಲ್ಯಾಣಕ್ಕಾಗಿ ಉಪಯೋಗವಾಗುವಂತಹ ಮಾಹಿತಿಗಳನ್ನು ಹಂಚಿಕೊಳ್ಳಬೇಕು ಎಂದು ಗುಬ್ಬಿಗೂಡು ನುಡಿದರು.



ಡಾ.ಗುಬ್ಬಿಗೂಡು

ಶಿವದೀಪೋತ್ಸವದ ಅಂಗವಾಗಿ ದೇವಾಲಯಗಳಿಗೆ ಮಾಡಿದ್ದ ವಿಶೇಷ ದೀಪಾಲಂಕಾರ ನೆರೆದಿದ್ದ ಸಹಸ್ರಾರು ಭಕ್ತಾದಿಗಳ ಕಣ್ಣು ಮತ್ತು ಮನಕ್ಕೆ ಮುದ ನೀಡಿದರೆ, ಬಾಣ ಬಿರುಸುಗಳು ಆಕಾಶದೆತ್ತರಕ್ಕೆ ಹಾರಿ ಚಿತ್ತಾಕರ್ಷಣೆ ಮೂಡಿಸಿ ನೆರೆದಿದ್ದ ಸಹಸ್ರಾರು ಭಕ್ತಾದಿಗಳಿಗೆ ಹರ್ಷೋದ್ಗಾರ ಮಾಡಿದರು. ಕಾರ್ಯಕ್ರಮದಲ್ಲಿ ಸಾಲೂರು, ಬರಡನಪುರ, ಕುಂದೂರು, ನೀಲಕಂಠ ಸ್ವಾಮಿ, ರಾಗಿಬೊಮ್ಮನಹಳ್ಳಿ, ಮಾಗಡಿ ಕಮ್ಮತಗಿ, ದಂಡೀಕೆರೆ, ಕಳ್ಳೀಪುರ, ಕುಂತೂರು, ಪುರ, ಕಲ್ಮಟ, ಮಾಡ್ರಳ್ಳಿ, ನರೇಗ್ಯಾತನಹಳ್ಳಿ, ಮೊದಲಾದ ಮಠಗಳ ಪೂಜ್ಯರು, ಹರಗುರು ಚರಮೂರ್ತಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿ ಎಸ್.ಪಿ.ಮಂಜುನಾಥ, ಎಸ್.ಶಿವಕುಮಾರ ಸ್ವಾಮಿ, ಎಸ್.ಪಿ.ಉದಯಶಂಕರ್ ಸುತ್ತಮುತ್ತಲಿನ ಗ್ರಾಮಗಳ ಸಹಸ್ರಾರು ಭಕ್ತಾದಿಗಳು ಭಾಗವಹಿಸಿದ್ದರು.

ದೇಶ - ವಿದೇಶ

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸಂಶೋಧಕ ಸುಚಿರ್ ಬಾಲಾಜಿ ಶವವಾಗಿ ಪತ್ತೆ



ಸ್ಯಾನ್ ಫ್ರಾನ್ಸಿಸ್ಕೋ: ಕೃತಕ ಬುದ್ಧಿಮತ್ತೆ ಸಂಸ್ಥೆಯಾದ ಓಪನ್ ಎಐ ಕಾರ್ಯಚಟುವಟಿಕೆಗಳು ಕಾನೂನನ್ನು ಉಲ್ಲಂಘಿಸುತ್ತಿವೆ ಎಂದು ಆರೋಪಿಸಿದ್ದ ಸಂಸ್ಥೆಯ ಮಾಜಿ ಉದ್ಯೋಗಿ ಭಾರತೀಯ ಮೂಲದ ಸುಚಿರ್ ಬಾಲಾಜಿ ಅವರ ಮೃತದೇಹವು ಸ್ಯಾನ್ ಫ್ರಾನ್ಸಿಸ್ಕೋದ ಅವರ ಅಪಾರ್ಟ್‌ಮೆಂಟ್‌ನಲ್ಲಿ ಪತ್ತೆಯಾಗಿದೆ.

26 ವರ್ಷದ ಸುಚಿರ್ ಬಾಲಾಜಿ ಅವರು ನ.26 ರಂದು ಮೃತಪಟ್ಟಿದ್ದು, ಘಟನೆ ತಡವಾಗಿ ಬೆಳಕಿಗೆ ಬಂದಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಓಪನ್ ಎಐ ವಿರುದ್ಧ ಮಾಡಿರುವ ಆರೋಪಗಳಿಂದ ಗಮನ ಸೆಳೆದಿದ್ದ ಸುಚಿರ್ ಬಾಲಾಜಿ ಅವರ ನಿಧನಕ್ಕೆ ಹಲವಾರು ಟೆಕ್ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಬಾಲಾಜಿ ಅವರ ಸಾವಿನ ಸುದ್ದಿಗೆ ಉದ್ಯಮಿ ಎಲಾನ್ ಮಸ್ಕ್ ಪ್ರತಿಕ್ರಿಯಿಸಿದ್ದು, ಓಪನ್ ಎಐ ವಿರುದ್ಧ ಮಸ್ಕ್ ಕೂಡಾ ಆರೋಪಗಳನ್ನು ಮಾಡಿದ್ದರು. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸಂಶೋಧಕರಾಗಿದ್ದ ಸುಚಿರ್ ಬಾಲಾಜಿ, ಓಪನ್ ಎಐ ಬಗ್ಗೆ ಜಗತ್ತನ್ನು ಎಚ್ಚರಿಸಿದ್ದರು ಎಂದಿದೆ. ಸ್ಥಳ ಮಹಜರು ನಡೆಸಿರುವ ಸ್ಯಾನ್ ಫ್ರಾನ್ಸಿಸ್ಕೊ ಪೊಲೀಸರು ಬಾಲಾಜಿ ಅವರು ಆತ್ಮಹತ್ಯೆಯಿಂದ ಸಾವನ್ನಪ್ಪಿದ್ದು, ಅಪರಾಧ ಕೃತ್ಯ ನಡೆದಿರುವುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ಹೇಳಿದ್ದಾರೆ.

ದಿಲ್ಲಿ ಚಲೋಗೆ ಮುಂದಾದ ರೈತರ ಪಡೆಗೆ ಅಶ್ರುವಾಯು, ಜಲಫಿರಂಗಿ ಪ್ರಯೋಗ



ಚಂಡೀಗಢ: ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ)ಗೆ ಕಾನೂನು ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ರೈತರು ಶನಿವಾರ ದಿಲ್ಲಿ ಚಲೋ ಪುನರಾರಂಭಿಸುತ್ತಿದ್ದಂತೆ ಹರಿಯಾಣ ಪೊಲೀಸರು ಅವರ ಮೇಲೆ ಅಶ್ರುವಾಯು, ಜಲಫಿರಂಗಿ ಪ್ರಯೋಗಿಸಿದ್ದಾರೆ. ಸರ್ಕಾರದ ಕಡೆಯಿಂದ ಮಾತುಕತೆಗೆ ಯಾವುದೇ ಸಂದೇಶ ಬಂದಿಲ್ಲವಾದ್ದರಿಂದ ಪ್ರತಿಭಟನಾನಿರತ ರೈತರು ಇಂದು ಮಧ್ಯಾಹ್ನ 12 ಗಂಟೆಗೆ ಶಂಭು ಗಡಿಯಿಂದ ದೆಹಲಿಗೆ ತಮ್ಮ ಪಾದಯಾತ್ರೆಯನ್ನು ಪುನರಾರಂಭಿಸಿದರು. ದೆಹಲಿಯತ್ತ ಸಾಗುತ್ತಿದ್ದ ಪ್ರತಿಭಟನಾಕಾರರ ಗುಂಪನ್ನು ಚದುರಿಸಲು ಹರಿಯಾಣದ ಭದ್ರತಾ ಸಿಬ್ಬಂದಿ ಅಶ್ರುವಾಯು ಮತ್ತು ಜಲಫಿರಂಗಿ ಬಳಸಿದರು. ಘಟನೆಯಲ್ಲಿ ಹಲವು ರೈತರು ಗಾಯಗೊಂಡಿದ್ದು, ಅವರನ್ನು ಪ್ರತಿಭಟನಾ ಸ್ಥಳದಲ್ಲಿ ನಿಲ್ಲಿಸಿದ್ದ ಆಂಬುಲೆನ್ಸ್‌ಗಳ ಮೂಲಕ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 101 ರೈತರ ಜಾಥಾ ಹರಿಯಾಣ ಭದ್ರತಾ ಸಿಬ್ಬಂದಿ ಹಾಕಿದ್ದ ಬ್ಯಾರಿಕೇಡ್‌ಗಳನ್ನು ತಲುಪಿದ ನಂತರ ಪೊಲೀಸರು ಅಶ್ರುವಾಯು ಮತ್ತು ಜಲಫಿರಂಗಿ ಪ್ರಯೋಗಿಸಿದ್ದಾರೆ.

7 ವರ್ಷಗಳ ಬಳಿಕ ಅಮೆರಿಕಕ್ಕೆ ಪಾಕ್ ವಿಮಾನಯಾನ



ಇಸ್ಲಾಮಾಬಾದ್: ಏಳು ವರ್ಷಗಳ ಅಮಾನತು ಆದೇಶದ ಬಳಿಕ ಪಾಕಿಸ್ತಾನ ಇಂಟರ್‌ನ್ಯಾಷನಲ್ ಏರ್‌ಲೈನ್ಸ್ ಅಮೆರಿಕಕ್ಕೆ ತನ್ನ ವಿಮಾನಯಾನವನ್ನು ಪುನಾರಂಭಿಸಲಿದೆ. ಇದು ದೇಶದ ವಾಯುಯಾನ ವಲಯಕ್ಕೆ ಮಹತ್ವದ ಬೆಳವಣಿಗೆಯಾಗಿದೆ ಎಂದು ಅಧಿಕೃತ ಮಾಧ್ಯಮ ಸಂಸ್ಥೆ ವರದಿ ಮಾಡಿದೆ. ನ್ಯೂಯಾರ್ಕ್‌ಗೆ 4 ಮತ್ತು ಚಿಕಾಗೋಗೆ 2 ಸೇರಿದಂತೆ ಪಾಕಿಸ್ತಾನ ಮತ್ತು ಅಮೆರಿಕ ನಡುವೆ ವಾರಕ್ಕೆ 6 ವಿಮಾನಗಳ ಹಾರಾಟವನ್ನು ಪಾಕ್‌ನ ಈ ವಿಮಾನಯಾನ ಸಂಸ್ಥೆ ನಿರ್ವಹಿಸುತ್ತಿತ್ತು. ಆದರೆ 2017ರಲ್ಲಿ ಅಮೆರಿಕಕ್ಕೆ ಪಿಐಎ ವಿಮಾನಗಳನ್ನು ಸ್ಥಗಿತಗೊಳಿಸಲಾಯಿತು. ವರದಿ ಪ್ರಕಾರ, ಅಬುಧಾಬಿ ಮತ್ತು ಕತಾರ್ ಎರಡೂ ಪಾಕಿಸ್ತಾನ ಇಂಟರ್‌ನ್ಯಾಷನಲ್ ಏರ್‌ಲೈನ್ಸ್‌ನ ಖಾಸಗೀಕರಣದ ಬಗ್ಗೆ ಬಲವಾದ ಆಸಕ್ತಿ ವ್ಯಕ್ತಪಡಿಸಿವೆ. ಇದು ವಿದೇಶಿ ಹೂಡಿಕೆಗೆ ಸಂಭಾವ್ಯ ಅವಕಾಶವನ್ನು ಸೃಷ್ಟಿಸಿದೆ. ಒಪ್ಪಂದದ ನಿಯಮಗಳನ್ನು ಅಂತಿಮಗೊಳಿಸಲು ಎರಡೂ ದೇಶಗಳೊಂದಿಗೆ ಸಕ್ರಿಯ ಚರ್ಚೆಗಳು ನಡೆಯುತ್ತಿವೆ. ಹೂಡಿಕೆದಾರರನ್ನು ಆಕರ್ಷಿಸಲು, ಪಾಕಿಸ್ತಾನದ ಸೆಕ್ಯುರಿಟೀಸ್ ಮತ್ತು ಎಕ್ಸೆಂಜ್ ಕಮಿಷನ್ ಪಿಐಎನಲ್ಲಿ ಪಾಲನ್ನು ಪಡೆಯಲು ಬಯಸುವವರಿಗೆ ಗಣನೀಯ ಪ್ರೋತ್ಸಾಹ ನೀಡುತ್ತಿದೆ ಎಂದು ವರದಿಯಾಗಿದೆ.

ಭಾರತದ 91 ಜಿಲ್ಲೆಗಳಲ್ಲಿ ಬರಗಾಲದ ಅಪಾಯ; 51 ಜಿಲ್ಲೆಗಳಲ್ಲಿ ಪ್ರವಾಹ ಭೀತಿ

ನವದೆಹಲಿ: ಭಾರತದ 91 ಜಿಲ್ಲೆಗಳು ಬರಗಾಲದ ಹೆಚ್ಚಿನ ಅಪಾಯವನ್ನು ಎದುರಿಸುತ್ತಿವೆ. 51 ಜಿಲ್ಲೆಗಳು ಹೆಚ್ಚಿನ ಪ್ರವಾಹದ ಅಪಾಯದಲ್ಲಿವೆ ಮತ್ತು 11 ಜಿಲ್ಲೆಗಳು ಬರಗಾಲ ಮತ್ತು ಪ್ರವಾಹದ ಅತೀ ಹೆಚ್ಚು ಅಪಾಯಗಳನ್ನು ಎದುರಿಸುತ್ತಿವೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಬಿಡುಗಡೆ ಮಾಡಿದ ಹೊಸ ವರದಿ ಹೇಳಿದೆ.

ಐಪಿಸಿಸಿ ಚೌಕಟ್ಟನ್ನು ಬಳಸಿಕೊಂಡು 'ಪ್ರವಾಹ ಮತ್ತು ಬರಗಾಲದ ಅಪಾಯಗಳನ್ನು ನಕ್ಷೆ ಮಾಡುವುದು' ಶೀರ್ಷಿಕೆ ವರದಿಯು ಹವಾಮಾನ ದುರ್ಬಲತೆಯನ್ನು ನಿರ್ಣಯಿಸಲು ಭಾರತದ ಜಿಲ್ಲೆಗಳನ್ನು ಗುರುತಿಸಿದೆ. ಜಿಲ್ಲೆಗಳ ಅಪಾಯ–ನಿರ್ದಿಷ್ಟ ಅಪಾಯಗಳ ಪ್ರೊಫೈಲಿಂಗ್ ರಾಜ್ಯ ಸರ್ಕಾರಗಳು ಪೂರ್ವಭಾವಿಯಾಗಿ ತಯಾರಿಸಲು ಮತ್ತು ಸಂಪನ್ಮೂಲಗಳು, ಸಿಬ್ಬಂದಿ ಮತ್ತು ವಿನ್ಯಾಸ ಕಾರ್ಯಕ್ರಮಗಳನ್ನು ನಿಯೋಜಿಸಲು ಅನುವು ಮಾಡಿಕೊಡುತ್ತದೆ, ಪ್ರವಾಹಗಳು ಮತ್ತು ಅನಾವೃಷ್ಟಿಗಳಿಂದ ಹೆಚ್ಚು ಹಾನಿಗೊಳಗಾದ ಜಿಲ್ಲೆಗಳಲ್ಲಿ ಸ್ಥಿತಿಸ್ಥಾಪಕತ್ವವನ್ನು ಬೆಳೆಸುತ್ತದೆ ಎಂದು ವರದಿ ಹೇಳುತ್ತದೆ. ಅಧ್ಯಯನದ ಪ್ರಕಾರ, ಅಸ್ಸಾಂ, ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಗುಜರಾತ್, ಒಡಿಶಾ ಮತ್ತು ಜಮ್ಮು ಮತ್ತು ಕಾಶ್ಮೀರದ ಸುಮಾರು ಶೇಕಡಾ 85ರಷ್ಟು ಜಿಲ್ಲೆಗಳು ಅತೀ ಹೆಚ್ಚು ಪ್ರವಾಹ ಅಪಾಯದ ವರ್ಗದಲ್ಲಿವೆ.

ಸಿರಿಯಾದ ಶೇ.90ರಷ್ಟು ಕ್ಷಿಪಣಿ ವ್ಯವಸ್ಥೆ ಧ್ವಂಸ: ಇಸ್ರೇಲ್

ಜೆರುಸಲೇಂ(ಇಸ್ರೇಲ್): ಸಿರಿಯಾದ ವಾಯು ರಕ್ಷಣಾ ವ್ಯವಸ್ಥೆಯನ್ನು ತೀವ್ರವಾಗಿ ಹಾನಿಗೊಳಿಸಿರುವುದಾಗಿ ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಘೋಷಿಸಿದೆ. ಸಿರಿಯಾದ ಮೇಲ್ಮೈಯಿಂದ ಗಾಳಿಯಲ್ಲಿ ದಾಳಿ ನಡೆಸಬಲ್ಲ ಶೇ. 90ರಷ್ಟು ಕ್ಷಿಪಣಿ ವ್ಯವಸ್ಥೆಯನ್ನು ನಾಶ ಮಾಡಲಾಗಿದೆ ಎಂದು ಅದು ಹೇಳಿದೆ. ಬಷರ್ ಅಲ್ ಅಸ್ಸಾದ್ ಸರ್ಕಾರದ ಪತನದ ಹಿನ್ನೆಲೆಯಲ್ಲಿ ಸಿರಿಯಾದ ಪರಿಸ್ಥಿತಿಯನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡುತ್ತಿರುವುದಾಗಿ ಐಡಿಎಫ್ ತಿಳಿಸಿದೆ. ಕಳೆದ ಹಲವಾರು ದಿನಗಳಲ್ಲಿ ನೂರಾರು ಇಸ್ರೇಲಿ ಫೈಟರ್ ಜೆಟ್‌ಗಳು ಮತ್ತು ವಿಮಾನಗಳು ಸಿರಿಯಾದ ಫೈಟರ್ ಜೆಟ್‌ಗಳು, ಹೆಲಿಕಾಪ್ಟರ್‌ಗಳು, ಕ್ಷಿಪಣಿಗಳು, ಯುಎವಿಗಳು, ರಾಡಾರ್‌ಗಳು ಮತ್ತು ರಾಕೆಟ್‌ಗಳು ಸೇರಿದಂತೆ ಅದರ ಅತ್ಯಂತ ಕಾರ್ಯತಂತ್ರದ ಶಸ್ತ್ರಾಸ್ತ್ರಗಳನ್ನು ಗಮನಾರ್ಹವಾಗಿ ಧ್ವಂಸಗೊಳಿಸಿವೆ.

ಸಿರಿಯಾದ ಹಲವು ಪ್ರಮುಖ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ. ಉತ್ತರ ಡಮಾಸ್ಕಸ್ ಬಳಿಯ ಟಿ 4 ವಿಮಾನ ನಿಲ್ದಾಣವು ಗಮನಾರ್ಹವಾಗಿ ಹಾನಿಗೊಳಗಾಗಿದ್ದು, ಅಲ್ಲಿ ಬೀಡುಬಿಟ್ಟಿದ್ದ ಎಸ್‌ಯು–22 ಮತ್ತು ಎಸ್‌ಯು –24 ಫೈಟರ್ ಸ್ಕ್ವಾಡ್ರನ್‌ಗಳು ಸಂಪೂರ್ಣವಾಗಿ ನಾಶವಾಗಿವೆ. 3 ಹೆಚ್ಚುವರಿ ಫೈಟರ್ ಸ್ಕ್ವಾಡ್ರನ್‌ಗಳನ್ನು ಹೊಂದಿರುವ 'ಬ್ಲೇ' ವಿಮಾನ ನಿಲ್ದಾಣ ಮತ್ತು ಹತ್ತಿರದ ಶಸ್ತ್ರಾಸ್ತ್ರ ಶೇಖರಣಾ ಸ್ಥಳವೂ ಇಸ್ರೇಲ್ ದಾಳಿಯಲ್ಲಿ ಹಾನಿಗೊಳಗಾಗಿದೆ.

ಕೊಡಗಿನಲ್ಲಿ ಶ್ರದ್ಧಾ ಭಕ್ತಿಯಿಂದ ಪುತ್ತರಿ ಆಚರಣೆ



ಕದಿರು ತೆಗೆದು ದೇವಾಲಯಕ್ಕೆ ಕೊಂಡೊಯ್ದು ವಿಶೇಷ ಪೂಜೆ ಸಲ್ಲಿಸಲಾಯಿತು.

ಮಡಿಕೇರಿ,ಡಿ.14– ಕೊಡಗಿನ ಪ್ರಮುಖ ಹಬ್ಬಗಳಲ್ಲಿ ಒಂದಾದ ಧಾನ್ಯಲಕ್ಷ್ಮಿ ಸದಾ ಕಾಲ ಮನೆ ತುಂಬಿರಲಿ ಎಂಬ ಆಶಯದೊಂದಿಗೆ ಜಿಲ್ಲೆಯಾದ್ಯಂತ ಪುತ್ತರಿ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಶ್ರೀ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ರಾತ್ರಿ 7.30ಕ್ಕೆ ನೆರೆ ಕಟ್ಟಿ, 8.30ಕ್ಕೆ ಕದಿರು ತೆಗೆದು ದೇವಾಲಯಕ್ಕೆ ತರಲಾಯಿತು. ಬಳಿಕ ವಿಶೇಷ ಪೂಜೆ ನೆರವೇರಿಸಿ ರಾತ್ರಿ 9.30ಕ್ಕೆ ಪ್ರಸಾದ ವಿತರಣೆ ನಡೆಯಿತು. ಆ ಮೂಲಕ ಜಿಲ್ಲೆಯಲ್ಲಿ ಶ್ರೀ ಪಾಡಿ ಇಗ್ಗುತ್ತಪ್ಪನ ಸನ್ನಿಧಿಯಲ್ಲಿ ಮೊದಲು ಪುತ್ತರಿ ಹಬ್ಬವನ್ನು ಆಚರಿಸಲಾಯಿತು. ತದನಂತರ ದೇವಾಲಯದ ಮುಹೂರ್ತ ನಿಗದಿಯಂತೆ ಜಿಲ್ಲೆಯ ವಿವಿಧೆಡೆ ಹಬ್ಬಾಚರಣೆ ನಡೆಸಲಾಯಿತು.

ನಗರದ ಓಂಕಾರೇಶ್ವರ ದೇವಾಲಯ, ಕೊಡವ ಸಮಾಜ, ಗೌಡ ಸಮಾಜಗಳಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಬಳಿಕ ಧಾನ್ಯಲಕ್ಷ್ಮಿಯನ್ನು ಬರಮಾಡಿಕೊಳ್ಳಲಾಯಿತು. ಓಂಕಾರೇಶ್ವರ ದೇವಾಲಯದಲ್ಲಿ ರಾತ್ರಿ 7.50ಕ್ಕೆ ನೆರೆಕಟ್ಟಿ ದೇವಾಲಯದ ಗದ್ದೆಯಲ್ಲಿ ಭೂಮಿ ತಾಯಿ ಮತ್ತು ಧಾನ್ಯ ಲಕ್ಷ್ಮಿಗೆ ಅರ್ಚಕ ವೃಂದದವರು ವಿಶೇಷ ಪೂಜೆ ಸಲ್ಲಿಸಿದರು. ತದನಂತರ ರಾತ್ರಿ 8.50 ಗಂಟೆಗೆ ಕದಿರು ತೆಗೆದು ದೇವಾಲಯಕ್ಕೆ ಕೊಂಡೊಯ್ದು ವಿಶೇಷ ಪೂಜೆ ಸಲ್ಲಿಸಲಾಯಿತು.

ಬಳಿಕ ದುಡಿ ಕೊಟ್‌ಪಾಟ್‌ನೊಂದಿಗೆ ದೇವಾಲಯದಿಂದ ಕೊಡವ ಸಮಾಜಕ್ಕೆ ಕದಿರು ಕೊಂಡೊಯ್ಯಲಾಯಿತು. ನಂತರ ಸಮಾಜದಲ್ಲಿ ತೂಕ್ ಬೊಳ್‌ಚ(ತೂಗು ದೀಪ) ಬೆಳಗಿ ಸಾಂಪ್ರದಾಯಿಕ ಪೂಜೆ ನೆರವೇರಿಸಲಾಯಿತು. ತದನಂತರ ದೀಪಕ್ಕೆ ಕದಿರುಕಟ್ಟಿ ಇಗ್ಗುತ್ತಪ್ಪ ಮತ್ತು ಗುರು ಕಾರೋಣರನ್ನು ನೆನೆದು ಮಾತೆ ಕಾವೇರಿಗೆ ನಮಿಸಿ ದೀಪಕ್ಕೆ ಅಕ್ಕಿ ಹಾಕಿ ಧಾನ್ಯ ಸಂಪತ್ತು ವೃದ್ಧಿಸಲಿ ಎಂದು ನೆರೆದಿದ್ದವರು ಪ್ರಾರ್ಥಿಸಿದರು.

ಗೌಡ ಸಮಾಜದ ಬಳಿಯ ಗದ್ದೆಯಲ್ಲಿ ಕದಿರು ತೆಗೆದು ನೆಲ್ಲಕ್ಕಿ ನಡುಬಾಡೆಗೆ ಕೊಂಡೊಯ್ದು ಕಾವೇರಿ ಮಾತೆ, ಇಗ್ಗುತ್ತಪ್ಪ ಹಾಗೂ ಕುಲ ದೇವರನ್ನು ನೆನೆದು ದೀಪಕ್ಕೆ ಅಕ್ಕಿ ಹಾಕುವ ಮೂಲಕ ಪುತ್ತರಿ ಹಬ್ಬಾಚರಿಸಲಾಯಿತು.

ಕದಿರು ತೆಗೆಯುವ ಸಂದರ್ಭ ಕೊಡಗಿನ ಪದ್ಧತಿ, ಪರಂಪರೆ ಮತ್ತು ಸಂಪ್ರದಾಯದಂತೆ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಹಬ್ಬದ ಶುಭ ಸಂಕೇತವನ್ನು ಸೂಚಿಸಲಾಯಿತು. 'ಪೊಲಿ ಪೊಲಿಯೇ ಬಾ' ಎಂದು ಧಾನ್ಯ ಲಕ್ಷ್ಮಿಯನ್ನು ಬೇಡಲಾಯಿತು. ಸಮಾಜಗಳು ಮತ್ತು ದೇವಾಲಯದಲ್ಲಿ ನೆರೆದಿದ್ದವರಿಗೆ ಹಬ್ಬದ ಸಾಂಪ್ರದಾಯಿಕ ತಿನಿಸು ತಂಬಿಟ್ಟನ್ನು ಪ್ರಸಾದ ರೂಪದಲ್ಲಿ ವಿತರಿಸಲಾಯಿತು.

ಈ ಸಂದರ್ಭ ಕೊಡವ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ಕೊಡವ ಮಕ್ಕಡ ಕೂಟ, ಕೊಡವ ಪೊಮ್ಮಕ್ಕಡ ಕೂಟ, ವಿವಿಧ ಕೊಡವ ಕೇರಿಗಳ ಅಧ್ಯಕ್ಷರು, ಗೌಡ ಸಮಾಜ, ಗೌಡ ವಿದ್ಯಾಭಿವೃದ್ಧಿ ಸಂಘ, ಗೌಡ ಸಮಾಜಗಳ ಒಕ್ಕೂಟ, ಗೌಡ ಯುವ ವೇದಿಕೆ ಪದಾಧಿಕಾರಿಗಳು, ಶ್ರೀ ಓಂಕಾರೇಶ್ವರ ದೇವಾಲಯ ಸಮಿತಿ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಉಪಸ್ಥಿತರಿದ್ದರು.

ಕದಿರು ಹಂಚಿಕೆ

ಮಡಿಕೇರಿ ನಗರ ವ್ಯಾಪ್ತಿಯೊಳಗೆ ಭತ್ತದ ಗದ್ದೆಗಳು ಇಲ್ಲದ ಹಿನ್ನೆಲೆಯಲ್ಲಿ ನಗರ ನಿವಾಸಿಗಳು ಶ್ರೀ ಓಂಕಾರೇಶ್ವರ ದೇವಾಲಯ, ಕೊಡವ ಮತ್ತು ಗೌಡ ಸಮಾಜಗಳಿಗೆ ತೆರಳಿ ನೆರೆ ಮತ್ತು ಕದಿರನ್ನು ಕೊಂಡೊಯ್ದು ಧಾನ್ಯಲಕ್ಷ್ಮಿಯನ್ನು ಮನೆ ತುಂಬಿಕೊಂಡರು. ಪಾಯಸಕ್ಕೆ ಕದಿರಿನಲ್ಲಿದ್ದ ಅಕ್ಕಿಯನ್ನು ಹಾಕಿ ಹೊಸ ಅಕ್ಕಿಯ ಪಾಯಸ, ತಂಬಿಟ್ಟು, ಹುತ್ತರಿ ಗೆಣಸಿನ ವಿವಿಧ ಖಾದ್ಯಗಳನ್ನು ಸವಿದು ಹಬ್ಬವನ್ನು ಸಂಭ್ರಮಿಸಿದರು.

ಬೆಳ್ಳಂಬೆಳಗ್ಗೆ ಬಸ್‌ಗಾಗಿ ಕಾಯುತ್ತಿದ್ದ ಮಹಿಳೆ ಮೇಲೆ ಕಾಡಾನೆ ದಾಳಿ



ಕಾಡಾನೆ ದಾಳಿಯಿಂದ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಹಿಳೆ.

ಗೋಣಿಕೊಪ್ಪ ಡಿ.14– ಪಟ್ಟಣಕ್ಕೆ ತೆರಳಲು ಮನೆಯ ಅನತಿ ದೂರದ ರಸ್ತೆಯ ಬದಿಯಲ್ಲಿರುವ ತಂಗುದಾಣಕ್ಕೆ ತೆರಳಿ ಬಸ್‌ಗಾಗಿ ಕಾಯುತ್ತಿದ್ದ ಮಹಿಳೆ ಮೇಲೆ ಕಾಡಾನೆಯೊಂದು ದಿಢೀರನೇ ದಾಳಿ ನಡೆಸಿದ ಘಟನೆ ಶುಕ್ರವಾರ ಬೆಳಗ್ಗೆ ನಡೆದಿದೆ.

ಮಹಿಳೆಯ ಪಕ್ಕೆಲುಬಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ಸೇರಿಸಲಾಗಿದೆ.

ದ.ಕೊಡಗಿನ ಪರಕಟಗೇರಿ ಗ್ರಾಮದ ಕರ್ತಮಾಡ ಶಾರದ (55) ಎಂಬವರು ಕಾಡಾನೆಯ ದಾಳಿಗೆ ತುತ್ತಾದವರು. ತನ್ನ ಮನೆಯಲ್ಲಿ ಒಬ್ಬಂಟಿಯಾಗಿ ವಾಸವಿರುವ ಕರ್ತಮಾಡ ಶಾರದ ಅವರು ಪುತ್ತರಿ ಹಬ್ಬಕ್ಕೆ ಸಾಮಗ್ರಿ ಖರೀದಿಸಲು ಗೋಣಿಕೊಪ್ಪಕ್ಕೆ ತೆರಳುವ ಉದ್ದೇಶದಿಂದ ಬಸ್ಸಿಗಾಗಿ ಮುಂಜಾನೆ 6.30ರ ಸುಮಾರಿಗೆ ಕಾಯುತ್ತಿದ್ದರು. ಈ ವೇಳೆ ಸಮೀಪದ ಅರಣ್ಯದಿಂದ ಬಂದ ಕಾಡಾನೆ ಮಹಿಳೆಯ ಮೇಲೆ ದಾಳಿ ಮಾಡಿದೆ. ಕೂಡಲೇ ಅಕ್ಕಪಕ್ಕದವರು ವಿಷಯ ತಿಳಿದು ಅವರನ್ನು ಚಿಕಿತ್ಸೆಗಾಗಿ ಗೋಣಿಕೊಪ್ಪ ಆಸ್ಪತ್ರೆಗೆ ಸಾಗಿಸುವ ಮೂಲಕ ಪ್ರಥಮ ಚಿಕಿತ್ಸೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಮಾಕುಟ್ಟ ವನ್ಯಜೀವಿ ವಿಭಾಗದ ಆರ್‌ಎಫ್‌ಓ ಸಂತೋಷ್ ಹೂಗಾರ್, ಪೊನ್ನಂಪೇಟೆ ವಲಯ ಅರಣ್ಯ ಅಧಿಕಾರಿಗಳಾದ ಶಂಕರ್, ಗಣೇಶ್, ಮಣಿಕಂಠ ಹಾಗೂ ಸಿಬ್ಬಂದಿಗಳು ಗೋಣಿಕೊಪ್ಪ ಆಸ್ಪತ್ರೆಗೆ ಆಗಮಿಸಿ ಘಟನೆಯ ಬಗ್ಗೆ ಮಾಹಿತಿ ಪಡೆದರು.

ಕುಶಾಲನಗರದಲ್ಲಿ ಅದ್ದೂರಿ ಹನುಮ ಜಯಂತಿ

● ಜನಮನ ರಂಜಿಸಿದ ದಶಮಂಟಪಗಳ ಶೋಭಾಯಾತ್ರೆ ● ಕಣ್ಮನ ಸೆಳೆದ ಬಾಣಬಿರುಸುಗಳ ಪ್ರದರ್ಶನ



ಜನಮನ ರಂಜಿಸಿದ ದಶ ಮಂಟಪಗಳ ಶೋಭಾಯಾತ್ರೆ

ಕುಶಾಲನಗರ, ಡಿ.14– ಪಟ್ಟಣದ ರಥಬೀದಿಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಆಂಜನೇಯ ದೇವಾಲಯ ಸೇವಾ ಸಮಿತಿ ಮತ್ತು ಶ್ರೀ ರಾಮಾಂಜನೇಯ ಉತ್ಸವ ಸಮಿತಿ ಹಾಗೂ ದಶಮಂಟಪ ಸಮಿತಿ ಸಂಯುಕ್ತಾಶ್ರಯದಲ್ಲಿ 39ನೇ ಹನುಮ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಮಿನಿ ದಸರಾ ಮಾದರಿಯಲ್ಲಿ ಏರ್ಪಡಿಸಿದ್ದ ದಶಮಂಟಪಗಳ ಶೋಭಾಯಾತ್ರೆ ಜನಮನ ರಂಜಿಸಿತು.

ಶ್ರೀ ಆಂಜನೇಯ ವಿಗ್ರಹವನ್ನು ವಿದ್ಯುತ್ ಅಲಂಕೃತ ಮಂಟಪದಲ್ಲಿ ಪ್ರತಿಷ್ಠಾಪಿಸಿ ಪಟ್ಟಣದಲ್ಲಿ ವಾದ್ಯಗೋಷ್ಠಿಗಳೊಂದಿಗೆ ಮೆರವಣಿಗೆ ನಡೆಸಲಾಯಿತು.

ರಥಬೀದಿಯ ಆಂಜನೇಯ ದೇವಾಲಯದ ಶ್ರೀ ರಾಮಾಂಜನೇಯ ಉತ್ಸವ ಸಮಿತಿ ಮಂಟಪ, ಗೋಪಾಲ್ ಸರ್ಕಲ್‌ನ ಗಜಾನನ ಗೆಳೆಯರ ಬಳಗದ ಮಂಟಪ, ಮಾದಾಪಟ್ಟಣದ ರಾಮದೂತ ಜಯಂತಿ ಆಚರಣಾ ಸಮಿತಿಯ ಉತ್ಸವ ಮಂಟಪ, ಹೆಚ್.ಆರ್.ಪಿ.ಕಾಲೋನಿಯ ಅಂಜನಿಪುತ್ರ ಜಯಂತ್ಯುತ್ಸವ ಆಚರಣಾ ಸಮಿತಿ ಮಂಟಪ,ಶ್ರೀರಾಮಮಂದಿರ ಮಂಟಪ, ಹಾರಂಗಿ–ಚಿಕ್ಕತ್ತೂರಿನ ವೀರ ಹನುಮ ಸೇವಾ ಸಮಿತಿಯ ಮಂಟಪ, ಮುಳ್ಳುಸೋಗೆಯ ಚಾಮುಂಡೇಶ್ವರಿ ಉತ್ಸವ ಸಮಿತಿ ಮಂಟಪ, ಕೂಡಿಗೆ ಹನುಮ ಸೇವಾ ಸಮಿತಿಯ ಮಂಟಪ, ಬೈಚನಹಳ್ಳಿಯ ಗೆಳೆಯರ ಬಳಗದ ಮಂಟಪ ಹಾಗೂ ಗುಡ್ಡೆಹೊಸೂರು ವೀರಾಂಜನೇಯ ಸೇವಾ ಸಮಿತಿ ವತಿಯಿಂದ ಹೊರಟ ದಶಮಂಟಪಗಳ ಶೋಭಾಯಾತ್ರೆ ಹನುಮ ಜಯಂತ್ಯುತ್ಸವಕ್ಕೆ ಮೆರಗು ನೀಡಿದವು. ವಿದ್ಯುತ್ ಅಲಂಕೃತ ಮಂಟಪಗಳು ಆಂಜನೇಯ ದೇವಾಲಯ ಬಳಿ ಸೇರಿ ನಂತರ ರಥ ಬೀದಿ ಮೂಲಕ ಹೊರಟು ಗಣಪತಿ ದೇವಾಲಯ ಮುಂಭಾಗದಿಂದ ಬೈಚನಹಳ್ಳಿ ಮಾರ್ಗವಾಗಿ ಮಡಿಕೇರಿ ರಸ್ತೆ ಪೆಟ್ರೋಲ್ ಬಂಕ್ ತನಕ ತೆರಳಿ ಗುಂಡೂರಾವ್ ಜಾತ್ರಾ ಮೈದಾನದಲ್ಲಿ ಸ್ವಸ್ಥಾನಗಳಿಗೆ ಮರಳಿದವು. ಮೆರವಣಿಗೆಯಲ್ಲಿ ಕಾರ್ಯಕರ್ತರು ಜೈ.ಜೈ ಹನುಮ, ಜೈ.ಜೈರಾಮ, ಜೈ.ಜೈ.ಸೀತೆ ಎಂಬ ಘೋಷಣೆಗಳನ್ನು ಕೂಗುತ್ತ ಸಾಗಿದರು. ಉತ್ಸವಗಳೊಂದಿಗೆ ಡೀಜೆ ಸೌಂಡ್‌ಗೆ ಕಾರ್ಯಕರ್ತರು ಕುಣಿತು ಕುಪ್ಪಳಿಸಿದರು. ಮೆರವಣಿಗೆ ಸಂದರ್ಭ ಬಾಣಬಿರುಸುಗಳ ಪ್ರದರ್ಶನ ಕಣ್ಮನ ಸೆಳೆಯಿತು. ಶೋಭಾಯಾತ್ರೆಯ ವೀಕ್ಷಣೆಗೆ ಪಟ್ಟಣ ಸೇರಿದಂತೆ ಇತರೆಡೆಗಳಿಂದ ಜನಸಾಗರವೇ ಹರಿದು ಬಂದಿತು.

ಹನುಮ ಜಯಂತಿ ದಶಮಂಟಪಗಳ ಸಮಿತಿ ಅಧ್ಯಕ್ಷ ಎಂ.ಡಿ.ಕೃಷ್ಣಪ್ಪ, ಉಪಾಧ್ಯಕ್ಷ ಕಿಶೋರ್ ಕುಮಾರ್, ಪ್ರಧಾನ ಕಾರ್ಯದರ್ಶಿ ರಾಮನಾಥನ್, ಖಜಾಂಚಿ ಗಿರೀಶ್, ನಿರ್ದೇಶಕರಾದ ಬಿ.ಅಮೃತ್ ರಾಜ್, ಕೆ.ಎಸ್.ನಾಗೇಶ್, ಕೆ.ಡಿ.ಪ್ರಶಾಂತ್ ಮುಖಂಡರಾದ ನವನೀತ್, ಜಗದೀಶ್, ಕೆ.ಎನ್.ದೇವರಾಜ್, ವಿಶ್ವಗಿರಿ ಸಲಹೆಗಾರರಾಗಿ ಡಿ.ಸಿ.ಮಂಜುನಾಥ್, ಶಶಿಕುಮಾರ್, ಪ್ರಜ್ವಲ್, ಸುನೀಲ್, ಮಣಿ, ಶಿವಣ್ಣ, ಕೆ.ಜಿ.ಮನು, ಎಚ್.ಡಿ.ಶಿವಾಜಿರಾವ್ ಮತ್ತಿತರರು ಇದ್ದರು.

ಬಿಗಿ ಭದ್ರತೆ : ಮೆರವಣಿಗೆ ಸಂದರ್ಭ ಡಿವೈಎಸ್ಪಿ ಗಂಗಾಧರಪ್ಪ , ವೃತ್ತ ನಿರೀಕ್ಷಕ ರಾಜೇಶ್ ಹಾಗೂ ಪಿಎಸ್‌ಐಗಳಾದ ಚಂದ್ರಶೇಖರ್, ಎಚ್.ಟಿ.ಗೀತಾ ಹಾಗೂ ಸಿಬ್ಬಂದಿಗಳ ನೇತೃತ್ವದಲ್ಲಿ ಬಿಗಿ ಪೊಲೀಸ್ ಭದ್ರತೆ ಕೈಗೊಳ್ಳಲಾಗಿತ್ತು.

ಗಾಳಿಬೀಡು ಗ್ರಾಪಂಗೆ ರಾಷ್ಟ್ರೀಯ ಪುರಸ್ಕಾರ



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಗಾಳಿಬೀಡು ಗ್ರಾಪಂ ಅಧ್ಯಕ್ಷೆ ಉಷಾ ಮತ್ತು ಅಭಿವೃದ್ಧಿ ಅಧಿಕಾರಿ ಕೆ.ಎ. ಶಶಿಕಿರಣ್ ಅವರು ಪ್ರತಿಷ್ಠಿತ ದೀನ್ ದಯಾಳ್ ಪಂಚಾಯತ್ ವಿಕಾಸ್ ಪುರಸ್ಕಾರ ಸ್ವೀಕರಿಸಿದರು.

ಮಡಿಕೇರಿ,ಡಿ.14– ಕೇಂದ್ರ ಸರಕಾರದಿಂದ ಕೊಡಮಾಡುವ ಪ್ರತಿಷ್ಠಿತ ದೀನ್ ದಯಾಳ್ ಪಂಚಾಯತ್ ವಿಕಾಸ್ ಪುರಸ್ಕಾರಕ್ಕೆ ಮಡಿಕೇರಿ ತಾಲೂಕಿನ ಗಾಳಿಬೀಡು ಗ್ರಾಮ ಪಂಚಾಯಿತಿ ಆಯ್ಕೆಯಾಗುವ ಮೂಲಕ ಪ್ರಶಸ್ತಿ ಪಟ್ಟಿಯಲ್ಲಿ ಸ್ಥಾನ ಪಡೆದ ರಾಜ್ಯದ ಏಕೈಕ ಪಂಚಾಯಿತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಡಿ.11ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಉಷಾ ಮತ್ತು ಅಭಿವೃದ್ಧಿ ಅಧಿಕಾರಿ ಕೆ.ಎ. ಶಶಿಕಿರಣ್ ಅವರು ಪ್ರತಿಷ್ಠಿತ ದೀನ್ ದಯಾಳ್ ಪಂಚಾಯತ್ ವಿಕಾಸ್ ಪ್ರಶಸ್ತಿಯನ್ನು ಸ್ವೀಕರಿಸುವ ಮೂಲಕ ರಾಷ್ಟ್ರೀಯ ಪ್ರಶಸ್ತಿ ಪಡೆದ ಕರ್ನಾಟಕದ ಏಕೈಕ ಗ್ರಾಮ ಪಂಚಾಯಿತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಬಡತನ ನಿರ್ಮೂಲನೆ, ಜೀವನೋಪಾಯ ಅಭಿವೃದ್ಧಿ ಅಂಶದಡಿ ಈ ಪುರಸ್ಕಾರವನ್ನು ಗಾಳಿಬೀಡು ಗಾಮ ಪಂಚಾಯಿತಿ ಪಡೆದುಕೊಂಡಿದ್ದು ಪ್ರಶಸ್ತಿಯೊಂದಿಗೆ 1 ಕೋಟಿ ರೂಪಾಯಿಗಳ ನಗದು ಒಳಗೊಂಡಿದೆ.

ಗಾಳಿಬೀಡು ಗ್ರಾಪಂ ವ್ಯಾಪ್ತಿಯ ಗ್ರಾಮಸ್ಥರ ಜೀವನ ಮಟ್ಟ ಸುಧಾರಣೆ, ಮೂಲಸೌಕರ್ಯವನ್ನು ಸಮರ್ಪಕವಾಗಿ ಒದಗಿಸಿ ಜೀವನೋಪಾಯ ಅಭಿವೃದ್ಧಿಗೊಳಿಸಿರುವುದು, ಶಾಲೆಯಲ್ಲಿ ಉದ್ಯಾನ ವನ, ಶೌಚಾಲಯ ವ್ಯವಸ್ಥೆ, ಚಪ್ಪಂಡ ಕೆರೆಯನ್ನು ಅಮೃತ ಸರೋವರ ನಿರ್ಮಾಣದ ಮೂಲಕ ಪ್ರವಾಸೋದ್ಯಮದ ಅಭಿವೃದ್ಧಿ, ಜನರಿಗೆ ಅಗತ್ಯ ದಾಖಲೆ, ಫಲಾನುಭವಿಗಳಿಗೆ ಪಿಂಚಣಿ ವ್ಯವಸ್ಥೆ, ಅಂಗನವಾಡಿ ಮಕ್ಕಳಿಗೆ ಪೌಷ್ಟಿಕಾಂಶ ಆಹಾರ ವಿತರಣೆ, ಸ್ವಸಹಾಯ ಸಂಘಕ್ಕೆ ಆರ್ಥಿಕ ನೆರವು ನೀಡಿ ಸ್ವಾವಲಂಬಿಗೊಳಿಸಲು ರೂಪಿಸಿರುವ ಯೋಜನೆಗಳು, ಮನೆ ಮನೆಗೆ ನೈಸರ್ಗಿಕವಾಗಿ ಕುಡಿಯುವ ನೀರಿನ ಸರಬರಾಜು ಸೇರಿದಂತೆ ಇನ್ನಿತರ ಕೆಲಸಗಳನ್ನು ಪರಿಗಣಿಸಿ ಪ್ರತಿಷ್ಠಿತ ದೀನ್ ದಯಾಳ್ ಪಂಚಾಯತ್ ವಿಕಾಸ್ ಪುರಸ್ಕಾರಕ್ಕೆ ಪಂಚಾಯಿತಿಯನ್ನು ಆಯ್ಕೆ ಮಾಡಲಾಗಿದೆ. ಗಾಳಿಬೀಡು ಗ್ರಾಪಂ ರಾಷ್ಟ್ರೀಯ ಪ್ರಶಸ್ತಿ ಪಡೆದ ಕರ್ನಾಟಕದ ಏಕೈಕ ಗ್ರಾಪಂ ಎಂಬ ಹೆಗ್ಗಳಿಕೆಯೊಂದಿಗೆ ಕೊಡಗಿಗೆ ಕೀರ್ತಿ ತಂದಿದೆಯಲ್ಲದೇ, ಜಿಲ್ಲೆಯ ಇತರ ಗ್ರಾಮ ಪಂಚಾಯಿತಿಗಳಿಗೆ ಮಾದರಿಯಾಗಿದೆ.

ಸ್ವಯಂ ಬೋಪಯ್ಯಗೆ ಚಿನ್ನ



ಗೋಣಿಕೊಪ್ಪ, ಡಿ.14– ಒರಿಸ್ಸಾದ ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ 16 ವಯೋಮಿತಿ ವಿಭಾಗದಲ್ಲಿ ಗೋಣಿಕೊಪ್ಪ ಕ್ಯಾಲ್ಸ್ ಶಾಲೆಯ ಎನ್.ಪಿ. ಸ್ವಯಂ ಬೋಪಯ್ಯ ಮಿಡ್ಲೆ ರಿಲೇಯಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. 100 ಮೀ. ಹರ್ಡಲ್ಸ್, 800 ಮೀ. ರಿಲೇ ಮತ್ತು ವೇಗದ ನಡಿಗೆಯಲ್ಲಿ ಎಎಸ್‌ಎಫ್ ಕ್ರೀಡಾಪಟುಗಳಾದ ಎಂ. ಎಂ. ಜನ್ಯ ಬೊಳ್ಳಮ್ಮ, ಸ್ವಯಂ ಬೋಪಯ್ಯ, ಕರ್ನಾಟಕ ತಂಡವನ್ನು ಪ್ರತಿನಿಧಿಸಿದರು.

ಚಾ.ನಗರ ಜಿಲ್ಲೆಯಲ್ಲಿ ಮೆಗಾ ಲೋಕ್ ಅದಾಲತ್ ಯಶಸ್ವಿ



ಚಾಮರಾಜನಗರದಲ್ಲಿ ಲೋಕ್ ಅದಾಲತ್ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ಡಿ.14– ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಶನಿವಾರ ನಡೆದ ರಾಷ್ಟ್ರೀಯ ಮೆಗಾ ಲೋಕ್ ಅದಾಲತ್‌ನಲ್ಲಿ ಹಲವು ಪ್ರಕರಣಗಳು ಇತ್ಯರ್ಥಗೊಂಡು ಯಶಸ್ವಿಯಾಯಿತು.

ಜಿಲ್ಲಾ ಸೆಷನ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್ ಕಾರ್ಯಕ್ರಮ ಜರುಗಿತ್ತು. ಅದಾಲತ್‌ನಲ್ಲಿ ಬಾಕಿ ಇರುವ ಬ್ಯಾಂಕ್ ವಸೂಲಾತಿ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪ್ರಕರಣಗಳು, ಕೌಟುಂಬಿಕ ಪ್ರಕರಣಗಳು, ಕಾರ್ಮಿಕ ಸಂಬಂಧಿತ ವಿವಾದಗಳು, ಚೆಕ್ ಬೌನ್ಸ್ ಪ್ರಕರಣಗಳು, ಹಣ ವಸೂಲಾತಿ ಪ್ರಕರಣಗಳು, ಎಂಎಂಡಿಆರ್ ಕಾಯ್ದೆ ಪ್ರಕರಣಗಳು, ಜನನ ನೋಂದಣಿ ಪ್ರಕರಣಗಳು, ಪಾಲು ವಿಭಾಗ, ದಾವೆ ಹಾಗೂ ಸಿವಿಲ್ ಪ್ರಕರಣಗಳು, ಕಂದಾಯ ಪ್ರಕರಣಗಳು ಸೇರಿದಂತೆ ಸಾವಿರಾರು ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಪಡಿಸಲಾಯಿತು.

ಇತ್ಯರ್ಥಗೊಂಡಿರುವ ಪ್ರಕರಣಗಳ ನಿಖರ ಸಂಖ್ಯೆ ಸದ್ಯಕ್ಕೆ ತಿಳಿದು ಬಂದಿಲ್ಲ. ನ್ಯಾಯಾಲಯದಲ್ಲಿ ಬಾಕಿ ಪ್ರಕರಣ, ವ್ಯಾಜ್ಯಪೂರ್ವ ಪ್ರಕರಣ ಸೇರಿದಂತೆ 10 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥ ಮಾಡುವ ಗುರಿಯನ್ನು ಈ ಬಾರಿ ಪ್ರಾಧಿಕಾರ ಹಾಕಿಕೊಂಡಿತ್ತು ಹೀಗಾಗಿ, ಸೋಮವಾರ ಅಥವಾ ಮಂಗಳವಾರ ಇತ್ಯರ್ಥಗೊಂಡ ಪ್ರಕರಣಗಳ ನಿಖರ ಮಾಹಿತಿ ತಿಳಿಯಲಿದ್ದು, ಗುರಿ ತಲುಪುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಉಳಿದಂತೆ ಜಿಲ್ಲೆಯ ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರಿನ ನ್ಯಾಯಾಲಯಗಳಲ್ಲೂ ಅದಾಲತ್ ಶನಿವಾರ ಯಶಸ್ವಿಯಾಗಿ ನಡೆದಿದ್ದು, ಸಾಕಷ್ಟು ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಗಿದೆ. ರಾಷ್ಟ್ರೀಯ ಮೆಗಾಲೋಕ ಅದಾಲತ್ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಕಕ್ಷಿದಾರರು ನ್ಯಾಯಾಲಯಕ್ಕೆ ಬೆಳಗ್ಗೆಯೇ ಬಂದಿದ್ದರು. ಬೆಳಗ್ಗೆ 11 ಗಂಟೆ ಸುಮಾರಿಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಅದಾಲತ್ ಆರಂಭವಾಯಿತು ವಕೀಲರು, ಕಕ್ಷಿದಾರರ ಸಮ್ಮುಖದಲ್ಲಿ ನ್ಯಾಯಾಧೀಶರು ಪ್ರಕರಣಗಳ ವಿಚಾರಣೆಯನ್ನು ಮಾಡಿ ಬಹುತೇಕ ಪ್ರಕರಣಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಿದರು. ಉಳಿದಂತೆ ರಾಜಿಗೆ ಸಮ್ಮತಿಯಾಗದ ಪ್ರಕರಣಗಳಿಗೆ ಮುಂದಿನ ದಿನಾಂಕವನ್ನು ನೀಡಿದರು.

ಈ ವೇಳೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್. ಭಾರತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ನ್ಯಾಯಾಧೀಶರಾದ ಈಶ್ವರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ನಂಜಪ್ಪ ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ ಸೇರಿದಂತೆ ಹಿರಿಯ ಹಾಗೂ ಕಿರಿಯ ವಕೀಲರು, ನ್ಯಾಯಾಲಯದ ಸಿಬ್ಬಂದಿ ಹಾಜರಿದ್ದರು.

ಇದೇ ರೀತಿ ಜಿಲ್ಲಾ ನ್ಯಾಯಾಲಯದಲ್ಲಿ ಚೆಕ್‌ಬೌನ್ಸ್, ಕೌಟುಂಬಿಕ, ಆಸ್ತಿ ವಿಭಾಗ ಸಂಬಂಧಿತ ಪ್ರಕರಣಗಳನ್ನು ಇತ್ಯರ್ಥಪಡಿಸುವ ಮೂಲಕ ಹಲವು ವರ್ಷಗಳಿಂದ ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ ಪ್ರಕರಣಗಳನ್ನು ಮುಕ್ತಾಯಗೊಳಿಸಲಾಯಿತು.

ಬಹುತೇಕ ಪ್ರಕರಣ ಇತ್ಯರ್ಥ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯದಲ್ಲಿ ಮೂರು ದಂಪತಿ ತಮ್ಮ ಹಲವು ವರ್ಷಗಳ ಮುನಿಸನ್ನು ಬದಿಗಿರಿಸಿ ಒಂದಾದರು. ತಮ್ಮ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಆಗಮಿಸಿದ ದಂಪತಿಗಳು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ವೆಂಕಟೇಶ್ ಅವರ ಸಮ್ಮುಖದಲ್ಲಿ ರಾಜೀ ಸಂಧಾನ ಮಾಡಿಕೊಳ್ಳುವ ಮೂಲಕ ಹಲವು ವರ್ಷಗಳಿಂದ ನಡೆಯುತ್ತಿದ್ದ ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಂಡರು.

ಸುಳ್ವಾಡಿ ವಿಷ ಪ್ರಸಾದ ದುರಂತಕ್ಕೆ ಆರು ವರ್ಷ; ಸಮಾಧಿಗಳ ಮುಂದೆ ಗೋಳಾಡಿದ ಕುಟುಂಬಸ್ಥರು



ಕಿಚ್ಚುಗುತ್ತಿ ಮಾರಮ್ಮ ದೇವಾಲಯದಲ್ಲಿ ನಡೆದಿದ್ದ ವಿಷ ಪ್ರಸಾದ ದುರಂತಕ್ಕೆ ಇಂದು 6 ವರ್ಷಗಳಾಗಿದ್ದು, ಮೃತರ ಸಂಬಂಧಿಕರು ಸಮಾಧಿ ಮುಂದೆ ಗೋಳಾಡುತ್ತಿರುವುದು.

ಹನೂರು, ಡಿ.14– ತಾಲೂಕಿನ ಸುಳ್ವಾಡಿ ಗ್ರಾಮದ ಹೊರವಲಯದಲ್ಲಿರುವ ಕಿಚ್ಚುಗುತ್ತಿ ಮಾರಮ್ಮ ದೇವಾಲಯದಲ್ಲಿ ನಡೆದಿದ್ದ ವಿಷ ಪ್ರಸಾದ ದುರಂತಕ್ಕೆ ಇಂದು 6 ವರ್ಷಗಳಾಗಿದ್ದು, ಮೃತರ ಸಂಬಂಧಿಕರು ಸಮಾಧಿ ಮುಂದೆ ಗೋಳಾಡಿದರು.

ಬಿದರಹಳ್ಳಿ, ಎಂ.ಜಿ.ದೊಡ್ಡಿ, ಮಾರ್ಟಳ್ಳಿ ಗ್ರಾಮದಲ್ಲಿ ಒಟ್ಟು 17 ಮಂದಿ ಕ್ರಿಮಿನಾಶಕ ಬೆರೆಸಿದ್ದ ಪ್ರಸಾದ ಸೇವಿಸಿ ಅಸುನೀಗಿದ್ದರು. ಮೃತರ ಸಂಬಂಧಿಕರು ಸಮಾಧಿಗಳಿಗೆ ತೆರಳಿ ಪೂಜೆ ಸಲ್ಲಿಸುವ ವೇಳೆ ಅಗಲಿದವರನ್ನು ನೆನೆದು ಕಣ್ಣೀರಿಟ್ಟರು. ಇನ್ನು, ದುರಂತಕ್ಕೆ ಕಾರಣವಾದ ನಾಲ್ವರು ಆರೋಪಿಗಳು ಮೈಸೂರಿನ ಜೈಲಿನಲ್ಲಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಅಷ್ಟೇ ಅಲ್ಲದೇ ಅಂತಾರಾಷ್ಟ್ರೀಯ ಮಟ್ಟದಲ್ಲೂ ಈ ಪೈಶಾಚಿಕ ಕೃತ್ಯ ಸದ್ದು ಮಾಡಿತ್ತು. ಬರೋಬ್ಬರಿ 150ಕ್ಕೂ ಅಧಿಕ ಮಂದಿ ಅಸ್ವಸ್ಥರಾಗಿ 17 ಮಂದಿ ಅಸುನೀಗಿದ್ದರು. ಜೀವ ಉಳಿಸಿಕೊಂಡು ಬಂದವರು. ಕಳೆದ ಆರು ವರ್ಷಗಳಿಂದಲೂ ಅಂಗಾಂಗಗಳ ವೈಫಲ್ಯದಿಂದ ಇನ್ನೂ ಚೇತರಿಸಿಕೊಳ್ಳದೆ ಆಸ್ಪತ್ರೆಗಳಿಗೆ ಅಲೆಯುವಂತ ಪರಿಸ್ಥಿತಿ ಇದೆ. ವಿಷ ಪ್ರಸಾದ ತಿಂದು ಬದುಕುಳಿದರೂ ನರಳಾಟದ ಜೀವನವಾಗಿದ್ದು ಸಂತ್ರಸ್ತರ ಯಾತನೆ ಮುಂದುವರೆದಿದೆ.

ಹಿನ್ನೆಲೆ: 2018ರ ಡಿ.14 ರಂದು ಹನೂರು ತಾಲೂಕಿನ ಮಾರ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಳ್ವಾಡಿ ಕಿಚ್ಚುಗುತ್ತಿ ಮಾರಮ್ಮನ ದೇವಾಲಯದಲ್ಲಿ ನಡೆದ ಸಮಾರಂಭದಲ್ಲಿ ವಿಷ ಪ್ರಸಾದ ಸೇವಿಸಿ ಬಿದರಹಳ್ಳಿ, ಎಂ.ಜಿ.ದೊಡ್ಡಿ, ಮಾರ್ಟಳ್ಳಿ ಸೇರಿದಂತೆ ವಿವಿಧ ಗ್ರಾಮಗಳ 17 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟು, 150ಕ್ಕೂ ಹೆಚ್ಚು ಮಾರಮ್ಮನ ಭಕ್ತರು ವಿವಿಧ ನ್ಯೂನತೆಗಳಿಂದ ಹಾಗೂ ಅಂಗಾಂಗಗಳ ವೈಫಲ್ಯಗಳಿಂದ ಕೊನೆಗೂ ಬದುಕುಳಿದು ಬಂದರು. ಅಂದಿನ ಕಹಿ ಘಟನೆಯಿಂದ ಇನ್ನೂ ಹೊರಬರದೆ ಇಲ್ಲಿನ ಜನತೆ ಒಂದಲ್ಲ ಒಂದು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ದೇಗುಲದಲ್ಲಿ ತಮ್ಮ ಅಧಿಪತ್ಯವನ್ನು ಸಾಧಿಸಬೇಕೆಂಬ ಉದ್ದೇಶದಿಂದ ಅಂದಿನ ಸಾಲೂರು ಮಠದ ಕಿರಿಯ ಸ್ವಾಮೀಜಿಯಾಗಿದ್ದ ಮಹಾದೇವಸ್ವಾಮಿ ಸೇರಿ ಮೂವರು ದೇವರ ಪ್ರಸಾದಕ್ಕೆ ಸಿದ್ಧಪಡಿಸಿದ್ದ ಟೊಮೆಟೊ ಬಾತ್‌ಗೆ ಕ್ರಿಮಿನಾಶಕ ಬೆರೆಸಿ ಪೈಶಾಚಿಕ ಕೃತ್ಯ ಎಸಗಿದ್ದರು.

ಆಂಜನೇಯಸ್ವಾಮಿ ದೇವಾಲಯದಲ್ಲಿ ಪೂಜೆ...



ಗುಂಡ್ಲುಪೇಟೆಯ ಶ್ರೀ ಆಂಜನೇಯಸ್ವಾಮಿ ದೇವಾಲಯದಲ್ಲಿ ಹನುಮ ಜಯಂತಿ ಅಂಗವಾಗಿ ವಿಶೇಷ ಪೂಜೆ ನೆರವೇರಿಸಲಾಯಿತು.

ಕೆಸರುಗದ್ದೆಯಂತಾಗಿದ್ದ ಕ್ರೀಡಾಂಗಣವನ್ನು ಸ್ವಂತ ಖರ್ಚಿನಲ್ಲಿ ಸಮತಟ್ಟು ಮಾಡಿಸುತ್ತಿರುವ ನಗರದ ಕ್ರೀಡಾಪಟುಗಳು



ಚಾಮರಾಜನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣವನ್ನು ಸಮತಟ್ಟು ಮಾಡಿಸುತ್ತಿರುವ ಕ್ರೀಡಾಪಟುಗಳು.

ಚಾಮರಾಜನಗರ, ಡಿ.14– ಇತ್ತೀಚೆಗೆ ಮೂರು ದಿನ ಕಾಲ ಸುರಿದ ಸೈಕ್ಲೋನ್ ಮಳೆಗೆ ರಾಡಿಯಾಗಿ ಪರಿವರ್ತನೆಯಾಗಿದ್ದ ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣವನ್ನು ಸಮತಟ್ಟು ಮಾಡುವ ಕಾರ್ಯಕ್ಕೆ ಇಲ್ಲಿನ ಕ್ರೀಡಾಪಟುಗಳು ಮುಂದಾಗಿದ್ದಾರೆ.

ಕಳೆದ 20 ವರ್ಷಗಳ ಹಿಂದೆ ಚಾಮರಾಜನಗರ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಕಾರ್ಯಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿದ್ದು, ಕ್ರೀಡಾಪಟುಗಳಿಗೆ ಅನೂಕೂಲವಾಗುವಂತ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಮಳೆಯಿಂದ ಕೆಸರುಗದ್ದೆಯಾಗಿದ್ದ ಕ್ರೀಡಾಂಗಣದಲ್ಲಿ ನೀರುನಿಲ್ಲದಂತೆ ವ್ಯವಸ್ಥೆ ಮಾಡಿಕೊಡಬೇಕು ಎಂದು ಸಂಬಂಧಪಟ್ಟ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದರೆ 15 ದಿನವಾದರೂ ಅವರು ನಮ್ಮ ಮನವಿಗೆ ಸ್ಪಂದಿಸಲಿಲ್ಲ. ನಾಡಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ವಾರಕ್ಕೂ ಮುಂಚೆ ಕ್ರೀಡಾಂಗಣವನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಅಧಿಕಾರಿಗಳು ಮುಂದಾಗುತ್ತಾರೆ. ಕ್ರೀಡಾಪಟುಗಳು ಮನವಿ ಕೊಟ್ಟರೇ ಅದಕ್ಕೆ ಪ್ರತಿಕ್ರಿಯೆ ಬರುವುದಿಲ್ಲ. ವಿವಿಧ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡಿದ್ದ ವಿವಿಧ ಕ್ರೀಡಾಪಟುಗಳು ಬಿದ್ದು ಗಾಯಗೊಂಡಿರುವ ನಿದರ್ಶನಗಳು ಇವೆ.

ಕ್ರೀಡಾಪಟುಗಳೇ ತಮ್ಮ ಸ್ವಂತ ಹಣ ಖರ್ಚು ಮಾಡಿ ಕ್ರೀಡಾಂಗಣದ ಮಣ್ಣನ್ನು ಸಮತಟ್ಟು ಮಾಡಿ, ಆಟಗಾರರಿಗೆ ಅನುಕೂಲ ಮಾಡಿ ಕೊಡುವ ಕಾರ್ಯಕ್ಕೆ ಮುಂದಾಗಿದ್ದಾರೆ. ಇಲಾಖೆಯವರು ಕ್ರೀಡಾಂಗಣಕ್ಕೆ ಕಾರು, ಮೋಟಾರ್ ಸೈಕಲ್ ಬಾರದಂತೆ ಗೇಟ್‌ಗೆ ಬೀಗ ಹಾಕಬೇಕು. ಯಾವುದೇ ಕಾರಣಕ್ಕೂ ಖಾಸಗಿ ಕಾರ್ಯಕ್ರಮ ನಡೆಸಲು ಜಿಲ್ಲಾಡಳಿತ ಅನುಮತಿ ನೀಡಬಾರದು ಎಂದು ಕ್ರೀಡಾಪಟು, ಕರ್ನಾಟಕ ಕನ್ನಡ ರಕ್ಷಣಾ ಸೇನೆ ಚಾಮರಾಜನಗರ ನಗರ ಘಟಕ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಜನಾರ್ಧನಸ್ವಾಮಿ ದೇವಸ್ಥಾನದಲ್ಲಿ ವಿಷ್ಣು ದೀಪೋತ್ಸವ

ಚಾಮರಾಜನಗರ: ನಗರದ ರಾಮಸಮುದ್ರ ಹರಳುಕೋಟೆ ಜನಾರ್ಧನಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಸಂಜೆ ವಿಷ್ಣು ದೀಪೋತ್ಸವ ಶ್ರದ್ಧಾಭಕ್ತಿಯಿಂದ ನೆರವೇರಿತು.

ಜನಾರ್ಧನ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ವಿಷ್ಣು ದೀಪೋತ್ಸವವನ್ನು ನ್ಯಾಯಾಧೀಶರಾದ ನಿವೇದಿತಾ ದಂಪತಿ, ಮುಖಂಡರಾದ ಎಂ.ರಾಮಚಂದ್ರ, ಎಲ್. ಮಾನಸ, ಆನಂದ್ ನೆರವೇರಿಸಿದರು.

ಜನಾರ್ಧನ ಪ್ರತಿಷ್ಠಾನದ ಅರ್ಚಕ ಅನಂತ ಪ್ರಸಾದ್ ಮಾತನಾಡಿ, ಕಾರ್ತಿಕ ಮಾಸದ ನಂತರ ಬರುವ ಶಿವ ದೀಪೋತ್ಸವ, ವಿಷ್ಣು ದೀಪೋತ್ಸವಕ್ಕೆ ಪುರಾಣಗಳಲ್ಲಿ ವಿಶಿಷ್ಟವಾದ ಸ್ಥಾನವಿದೆ, ದೇಶಾದ್ಯಂತ ಈ ದೀಪೋತ್ಸವಗಳನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದರು.

ಮನುಷ್ಯರಲ್ಲಿರುವ ಅಜ್ಞಾನದ ಕತ್ತಲೆ ಹೋಗಿ ಜ್ಞಾನದ ಬೆಳಕು ಮೂಡಿ, ಅಸೂಯೆ, ದ್ವೇಷಗಳಂತಹ ದುಶ್ಚಟಗಳು ಹೋಗಿ ಮನಸ್ಸು ಆಧ್ಯಾತ್ಮದತ್ತ ಹೊರಳಲಿ, ಸರ್ವರಿಗೂ ಒಳಿತು ಮಾಡುವಂತಾಗಲಿ ಎಂಬುದೇ ಈ ದೀಪೋತ್ಸವದ ಉದ್ದೇಶ ಎಂದರು.

ಜನಾರ್ಧನಸ್ವಾಮಿ ಸರ್ವರಿಗೂ ಒಳಿತು ಮಾಡಿ, ಮಳೆ, ಬೆಳೆ ಸಮೃದ್ಧಿಯಾಗಿ ಜನರು ಸಂತೋಷದಿಂದ ಸಹಬಾಳ್ವೆಯಿಂದ ಇರುವಂತೆ ಪ್ರಾರ್ಥಿಸಿದರು.

ಜನಾರ್ಧನಸ್ವಾಮಿ ಉತ್ಸವ ಮೂರ್ತಿಯನ್ನು ದೇವಸ್ಥಾನದ ಒಳಾವರಣದಿಂದ ದೀಪೋತ್ಸವದ ಸ್ಥಳಕ್ಕೆ ಗೋವಿಂದನ ನಾಮಸ್ಮರಣೆ ಮಾಡುತ್ತ ಹೊತ್ತು ತರಲಾಯಿತು. ದೀಪೋತ್ಸವದಲ್ಲಿ ಡಾ. ಬಾಲಸುಬ್ರಹ್ಮಣ್ಯಂ ರುದ್ರಭೂಮಿ ಸತೀಶ್, ರಾಸೇರಿದಂತೆ ದೇವಸ್ಥಾನದ ಭಕ್ತರು ಭಾಗವಹಿಸಿದ್ದರು.



ಜನಾರ್ಧನ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ವಿಷ್ಣು ದೀಪೋತ್ಸವದ ಅಂಗವಾಗಿ ಜನಾರ್ಧನಸ್ವಾಮಿ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 15-12-2024

■ ಎಂ.ಬಿ.ಪವನ್‌ಮೂರ್ತಿ
ಮೊ.9738845134


ವಿಷ್ಣು ದೀಪೋತ್ಸವದ ವಿವರ

ದೇವಸ್ಥಾನದಲ್ಲಿ ಡಿ.16ರ ಸೋಮವಾರ ಬೆಳಗ್ಗೆ 7ಕ್ಕೆ ಶ್ರೀ ಲಕ್ಷ್ಮೀಕಾಂತಸ್ವಾಮಿ ಮತ್ತು ಶ್ರೀ ಲಕ್ಷ್ಮೀದೇವಿಗೆ ಅಭಿಷೇಕ, ವಿಶೇಷ ಹೋಮ, ಹವನ ಹಾಗೂ ವಿಶೇಷ ಅಲಂಕಾರದೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿವೆ. ಸಂಜೆ 4.30ಕ್ಕೆ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಮ್ಮುಖದಲ್ಲಿ ಗಣಪತಿ ಹೋಮ, ಸುದರ್ಶನ ಹೋಮ, ಪೂರ್ಣಾಹುತಿ ಹಾಗೂ ಶ್ರೀ ಲಕ್ಷ್ಮೀಕಾಂತಸ್ವಾಮಿಯ ಉತ್ಸವ ನಡೆಯಲಿದೆ. ಸಂಜೆ 6ಕ್ಕೆ ಭೈರವೈಕ್ಯ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಕೃಪಾಶೀರ್ವಾದದೊಂದಿಗೆ ವಿಷ್ಣು ದೀಪೋತ್ಸವ ನಡೆಯಲಿದೆ. ನಂತರ ಪುಟ್ಟಸ್ವಾಮಿ ಸಾಂಸ್ಕೃತಿಕ ತಂಡದವರಿಂದ 'ವಿಷ್ಣು ಸಹಸ್ರನಾಮ' ಮತ್ತು ಭಕ್ತಿ ಗಾಯನ ಕಾರ್ಯಕ್ರಮ ನಡೆಯಲಿದೆ. ಮೈಸೂರಿನ 'ಕುಮಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್‌ನ ಕರ್ನಾಟಕ ಕಲಾಶ್ರೀ ಎಸ್.ಕುಮಾರ್ ಶಿಷ್ಯ ವೃಂದದವರಿಂದ ಶ್ರೀ ಕೃಷ್ಣಾರ್ಪಣ ನಮಸ್ತು' ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ.



ಗರ್ಭಗುಡಿಯಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವರ ವಿಗ್ರಹ.

ಹೆಬ್ಬಾಳು ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದ
ವಿಷ್ಣು ದೀಪೋತ್ಸವ



ಮೈಸೂರಿನ ಹೆಬ್ಬಾಳಿನಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನ.

ನೂರಾರು ವರ್ಷಗಳ ಕಾಲ ಪಾಳು ಬಿದ್ದಿದ್ದ ದೇವಸ್ಥಾನವೀಗ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿ ನೆಲೆನಿಂತು ಭಕ್ತಿಭಾವದ ತಾಣವಾಗಿದೆ. ಈ ಪ್ರಾಚೀನ ದೇವಾಲಯ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಆಶ್ರಯದಲ್ಲಿ ಕಾಯಕಲ್ಪ ಕಂಡಿದೆ.

ದೇವಾಲಯ ಬಹುತೇಕ ಕಲ್ಲುಗಳಿಂದಲೇ ನಿರ್ಮಾಣಗೊಂಡಿದೆ ಇದೊಂದು ಅತ್ಯಂತ ಪುರಾತನ ದೇವಾಲಯ ಎಂಬುದು ನೋಡಿದ ಕೂಡಲೇ ಅರಿವಿಗೆ ಬರುತ್ತದೆ. ಹೌದು, ಹೆಬ್ಬಾಳಿನ ಶ್ರೀ ಲಕ್ಷ್ಮೀಕಾಂತ ಸ್ವಾಮಿ ದೇವಸ್ಥಾನ ಈಗ ಧಾರ್ಮಿಕ ಕ್ಷೇತ್ರವಾಗಿ ಭಕ್ತರನ್ನು ಸೆಳೆಯುತ್ತಿದೆ. 1960ರಿಂದ ಹಂತ ಹಂತವಾಗಿ ಜೀರ್ಣೋದ್ಧಾರ ಕಂಡ ಈ ದೇವಾಲಯದಲ್ಲಿ ಪ್ರತಿ ವರ್ಷ ವಿಷ್ಣು ದೀಪೋತ್ಸವ ನಡೆಯುತ್ತಿದ್ದು, ಸೋಮವಾರ (ಡಿ.16) ದೀಪೋತ್ಸವಕ್ಕೆ ಸಕಲ ಸಿದ್ಧತೆಯಾಗಿದೆ.

1960ರಲ್ಲಿ ಕುಂಬಾರಕೊಪ್ಪಲು ಯುವಕರ ಸಂಘದ ಪದಾಧಿಕಾರಿಗಳ ಕಣ್ಣಿಗೆ ಈ ದೇವಾಲಯ ಬಿದ್ದಿತ್ತು ಆಗ ಅದರ ಜೀರ್ಣೋದ್ಧಾರಕ್ಕೆ ಮುನ್ನುಡಿ ಸಿಕ್ಕಂತಾಯಿತು. ಅಂದು ಸದರಿ ಸಂಘದ ಯುವ ಮುಖಂಡರಾಗಿದ್ದ ಕುಂಬಾರಕೊಪ್ಪಲಿನ ಡಿ.ಮಾದೇಗೌಡರು (ವಿಧಾನಪರಿಷತ್ ಮಾಜಿ ಸದಸ್ಯರು), ಅವರ ತಂದೆ ದೊಡ್ಡ ತಮ್ಮಯ್ಯ, ಕುಂಬಾರಕೊಪ್ಪಲು ಯಜಮಾನರಾದ ಶ್ರೀನಿವಾಸಗೌಡ, ವಿಷಕಂಠೇಗೌಡ ಹೀಗೆ ಗ್ರಾಮದ ಹಲವರ ಪ್ರಯತ್ನ ದೇವಸ್ಥಾನದ ಜೀರ್ಣೋದ್ಧಾರಕ್ಕೆ ನಾಂದಿಯಾಯಿತು. ವಿಧಾನಪರಿಷತ್ ಮಾಜಿ ಸದಸ್ಯರೂ ಆದ ಕುಂಬಾರಕೊಪ್ಪಲು ಹಿರಿಯ ಮುಖಂಡ ಡಿ.ಮಾದೇಗೌಡರು ಇದರ ಐತಿಹ್ಯವನ್ನು ಅರ್ಥಪೂರ್ಣವಾಗಿ ವಿವರಿಸಿ ಹೇಳುತ್ತಾರೆ; ಹೆಬ್ಬಾಳು ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನ ಹಾಗೂ ಹೆಬ್ಬಾಳು ಊರು ಪಾಳು ಬಿದ್ದಿತ್ತು. ನನಗೆ ತಿಳಿದ ಮಟ್ಟಿಗೆ ಬಹಳ ಬಾಳಿ ಬದುಕಿದ ಊರು ಇದಾಗಿತ್ತು. ಹೆಬ್ಬಾಳು ಅಂದರೆ 'ಹಿರಿದಾಗಿ ಬಾಳು' ಎಂಬ ತಾತ್ಪರ್ಯವಾಗಿದೆ. ಒಂದು ಕಾಲದಲ್ಲಿ ಸಮೃದ್ಧಿ ಜೀವನ ನಡೆಸಿದ ಜನ ಸಮುದಾಯ ಅಲ್ಲಿದ್ದರು. ಸಮೃದ್ಧವಾಗಿತ್ತು ಎನ್ನುವುದಕ್ಕೆ ಕೆಲ ಕುರುಹುಗಳೂ ಲಭ್ಯ ಇವೆ. ದೇವಸ್ಥಾನ ಸಂಪೂರ್ಣ ಕಲ್ಲಿನಿಂದ ನಿರ್ಮಾಣವಾಗಿದ್ದು, ಸಾವಿರಾರು ವರ್ಷಗಳಷ್ಟು ಪ್ರಾಚೀನತೆ ಹೊಂದಿದೆ. ಅದಕ್ಕೆ ಸಾಕ್ಷ್ಯಗಳಿವೆ.

ದೇವಸ್ಥಾನದ ಮುಂದೆಯೇ ಹೆಬ್ಬಾಳು ಕರೆ ಇದ್ದು, ಒಂದು ಕಾಲದಲ್ಲಿ ಜನ ಸಮುದಾಯ ನೆಲೆ ನಿಂತಿತ್ತು ಎಂದು ಹೇಳಬಹುದು. ಸಮೃದ್ಧವಾಗಿದ್ದದ್ದನ್ನು ನಾವ್ಯಾರು ಕಂಡಿಲ್ಲವಾದರೂ ಕೆಲ ಕುರುಹುಗಳಿಂದ ಊಹಿಸಬಹುದು. ಹೆಬ್ಬಾಳು ಕೆರೆ ಸಹ ಪಾಳು ಬಿದ್ದಿತ್ತು. ಏರಿ ಮಾತ್ರ ಇತ್ತು. ನೀರು ಇಲ್ಲದೇ ಜನ ಅದರ ಮಧ್ಯಭಾಗದಲ್ಲೇ ಓಡಾಡುವಂತಹ ಸ್ಥಿತಿ ಇತ್ತು. ಜೊತೆಗೆ ಹೆಬ್ಬಾಳು ಕೆರೆ ಮುಂಭಾಗದಲ್ಲಿ ದೊಡ್ಡ ತೋಪು ಇತ್ತು. ಅಲ್ಲಿ ಪುರಾತನವಾದ ಮರಗಳಿದ್ದವು. ಈಗ ಅದನ್ನು ಬೇರೆ ರೀತಿಯಲ್ಲಿ ಉನ್ನತೀಕರಿಸಲಾಗಿದೆ ಎಂದರು.

ಹೆಬ್ಬಾಳು ಕರೆಯನ್ನು ಇನ್ಫೋಸಿಸ್‌ನವರು ದತ್ತು ಪಡೆದು 120 ಕೋಟಿಗೂ ಅಧಿಕ ಹಣ ವೆಚ್ಚ ಮಾಡಿ ಅಭಿವೃದ್ಧಿಪಡಿಸಿದ್ದಾರೆ. ಬಹುಶಃ ಕರ್ನಾಟಕದಲ್ಲಿ ಅಷ್ಟೊಂದು ವೆಚ್ಚ ಮಾಡಿ ಜೀರ್ಣೋದ್ಧಾರ ಮಾಡಿದ ಕೆರೆ ಇರಲಿಕ್ಕಿಲ್ಲ. ಸುತ್ತಮುತ್ತ ಹಸರೀಕರಣ ಮಾಡಿದ್ದಾರೆ. ಏರಿ ಮೇಲೆ ಸಾವಿರ ಸಾವಿರ ಜನ ನಿತ್ಯವೂ ವಾಯು ವಿಹಾರ ಮಾಡುತ್ತಿದ್ದಾರೆ. ಒಟ್ಟಾರೆ ದೇವಸ್ಥಾನ ಮತ್ತು ಅದರ ಸುತ್ತಮುತ್ತಲ ಪ್ರದೇಶವು ಈಗ ಪುನರುತ್ಥಾನ ಕಂಡಿದೆ. ಪುನಃ ಭವ್ಯವಾಗಿ ಬಾಳುವ ಪ್ರದೇಶವಾಗಿ ಪರಿವರ್ತನೆಯಾಗಿದೆ.

ಲಕ್ಷ್ಮೀಕಾಂತನಗರ, ಸುಬ್ರಹ್ಮಣ್ಯನಗರ, ಕುಂಬಾರಕೊಪ್ಪಲು ಒಳಗೊಂಡಂತೆ ಹೆಬ್ಬಾಳು ವಸತಿ ಪ್ರದೇಶವಾಗುವ ಜೊತೆಗೆ ಕೈಗಾರಿಕಾ ಪ್ರದೇಶವಾಗಿಯೂ ಅಭಿವೃದ್ಧಿಯಾಗಿದೆ. ಸೂಕ್ಷ್ಮ, ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳು ಸೇರಿದಂತೆ ಸಾವಿರಾರು ಕೈಗಾರಿಕೆಗಳು ಸ್ಥಾಪನೆಗೊಂಡಿವೆ. ಬಾಳಿ ಬದುಕಿದ ಪ್ರದೇಶವೊಂದು ಪುನರುತ್ಥಾನಗೊಂಡಿದ್ದರ ಸಂಕೇತ ಇದು. ಅಲ್ಲದೆ, ಹೆಬ್ಬಾಳು ಕೈಗಾರಿಕಾ ಪ್ರದೇಶದಿಂದ ಆಗುತ್ತಿರುವ ರಫ್ತು, ಬೆಂಗಳೂರಿನ ಪೀಣ್ಯಗೂ ಹೆಚ್ಚು ವರಮಾನ ತಂದುಕೊಡುತ್ತಿದೆ. ಹೆಬ್ಬಾಳು ಕೈಗಾರಿಕಾ ಪ್ರದೇಶವು ಆಗ್ನೇಯ ಏಷ್ಯದಲ್ಲೇ ಅತಿ ದೊಡ್ಡ ಕೈಗಾರಿಕಾ ಪ್ರದೇಶವಾಗಿದೆ. ಇದು ನಮ್ಮ ಹೆಮ್ಮೆ.

ಸುಮಾರು 650 ವರ್ಷಗಳ ಸುದೀರ್ಘ ಕಾಲ ಆಡಳಿತ ನಡೆಸಿದ ರಾಜಮನೆತನ ಎಂದರೆ ಅದು ತಲಕಾಡಿನ ಗಂಗರು. ಬಹುಶಃ ಗಂಗರು ತಮ್ಮ ಕಾಲಾವಧಿಯಲ್ಲಿ ಈ ದೇವಸ್ಥಾನ ನಿರ್ಮಾಣ ಮಾಡಿರಬಹುದು. ಆದರೆ ಅದಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ. ಗಂಗರು 3ನೇ ಶತಮಾನದಿಂದ 10ನೇ ಶತಮಾನದ ವರೆಗೆ ಈ ಭಾಗದಲ್ಲಿ ಆಡಳಿತ ನಡೆಸಿದ್ದಾರೆ. ಹಾಗಾಗಿ ಅವರಿಂದ ಈ ದೇವಾಲಯ ನಿರ್ಮಾಣಗೊಂಡಿರಬಹುದು.

ಇದು ಪಾಳು ಬಿದ್ದು ಎಷ್ಟು ವರ್ಷಗಳಾಯಿತು ಎಂಬುದು ಯಾರಿಗೂ ಗೊತ್ತಿಲ್ಲ. ನನ್ನ ತಾತ (ಅವರು 100 ವರ್ಷ ಬಾಳಿದ್ದರು) ಕೂಡ ದೇವಸ್ಥಾನ ಮತ್ತು ಆ ಪ್ರದೇಶ ಪಾಳು ಬಿದ್ದಿದ್ದನ್ನೇ ನೋಡಿದ್ದರು. ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನ ಒಳಗೊಂಡಂತೆ ಇಡೀ ಹೆಬ್ಬಾಳು ಪಾಳು ಬಿದ್ದ ಮೇಲೆ ಅಲ್ಲಿನ ಜನ ಸಮುದಾಯ ವಲಸೆ ಹೋಗಿ, ಹೆಬ್ಬಾಳು ಎಲ್ಲೆಯೊಳಗೆ ಬರುವ ಕುಂಬಾರಕೊಪ್ಪಲು ಮತ್ತು ಮಂಚೇಗೌಡನಕೊಪ್ಪಲಿನಲ್ಲಿ ನೆಲೆ ನಿಂತಿರಬಹುದು ಎಂದು ಅಂದಾಜಿಸುತ್ತಾರೆ ಡಿ.ಮಾದೇಗೌಡರು. ದೇವಸ್ಥಾನ ಪಾಳು ಬಿದ್ದಿದ್ದರೂ ಮುಜರಾಯಿ ಇಲಾಖೆಯಿಂದ ಅರ್ಚಕರನ್ನು ನೇಮಿಸಲಾಗಿತ್ತು. ಮೈಸೂರಿನ ಅರ್ಚಕರೊಬ್ಬರು ವಾರಕ್ಕೊಮ್ಮೆ ಬಂದು ಪೂಜೆ ಮಾಡಿ ಹೋಗುತ್ತಿದ್ದರು. ಅಷ್ಟು ಬಿಟ್ಟರೆ ಒಳಗೆ ಹೋಗುವ ಧೈರ್ಯ ಯಾರಿಗೂ ಇರಲಿಲ್ಲ. ಗಿಡಗಂಟಿಗಳು ಕಾಡಿನಂತೆ ದೇವಸ್ಥಾನವನ್ನು ಆವರಿಸಿತ್ತು. ಗೋಪುರದ ಕೆಳಭಾಗದಲ್ಲಿ ಮಳೆ ಬಿದ್ದಾಗ ದನಕರು ಮತ್ತು ಅವುಗಳ ಪಾಲಕರು ಹೋಗಿ ನಿಲ್ಲುತ್ತಿದ್ದರಷ್ಟೇ. ಇಂತಹ ಸನ್ನಿವೇಶದಲ್ಲಿಯೂ ದೇವಸ್ಥಾನದ ಲಕ್ಷ್ಮೀಕಾಂತಸ್ವಾಮಿ ಮತ್ತು ಲಕ್ಷ್ಮೀದೇವಿ ವಿಗ್ರಹಗಳು ಸುರಕ್ಷಿತವಾಗಿ ಇದ್ದವು.


60ರ ದಶಕದಲ್ಲಿ ಪಾಳು ಬಿದ್ದ ಈ ದೇವಸ್ಥಾನವು ಕುಂಬಾರಕೊಪ್ಪಲು ಯುವಕರ ಕಣ್ಣಿಗೆ ಬಿದ್ದಿತು. ಅವರು ದೇವಸ್ಥಾನ ಸ್ವಚ್ಛಗೊಳಿಸಿದ್ದರು. ಹೀಗಾಗಿ ಇದು ಕುಂಬಾರಕೊಪ್ಪಲು ಯಜಮಾನರ ಗಮನಕ್ಕೂ ಬಂದಿತು. ನಂತರ ಅಂದು ಶಾಸಕರು ಮತ್ತು ಮಂತ್ರಿಯೂ ಆಗಿದ್ದ ಕೆ.ಪುಟ್ಟಸ್ವಾಮಿ ಅವರಲ್ಲಿ ಸದರಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕುಂಬಾರಕೊಪ್ಪಲು ಯುವಕರು ಮತ್ತು ಯಜಮಾನರು ಮನವಿ ಮಾಡಿದರು. ಪುಟ್ಟಸ್ವಾಮಿಯವರು ಅಂದು ಕಂದಾಯ ಮತ್ತು ಮುಜರಾಯಿ ಸಚಿವರಾಗಿದ್ದ ಹುಚ್ಚಮಾಸ್ತಿಗೌಡರನ್ನು ದೇವಸ್ಥಾನಕ್ಕೆ ಕರೆತಂದಿದ್ದರು. ಅವರು ದೇವಸ್ಥಾನ ನೋಡಿ ಇಲ್ಲಿನ ಲಕ್ಷ್ಮೀ ವಿಗ್ರಹ ಅತ್ಯಂತ ಸುಂದರವಾಗಿದೆ ಎಂದಿದ್ದರು. ನಾನು ಮುಜರಾಯಿ ಸಚಿವನಾಗಿ ನೂರು ದೇವಸ್ಥಾನಗಳಲ್ಲಿ ವಿಗ್ರಹಗಳನ್ನು ನೋಡಿದ್ದು, ಇಂತಹ ಸುಂದರ ವಿಗ್ರಹ ಕಂಡಿಲ್ಲ ಎಂದಿದ್ದರು. ಬಳಿಕ ದೇವಸ್ಥಾನ ಜೀರ್ಣೋದ್ಧಾರಕ್ಕೆ ಸರ್ಕಾರದಿಂದ ನೆರವಾದರು.

ಸರ್ಕಾರರಿಂದ ಶೇ.50ರಷ್ಟು ಅನುದಾನ ನೀಡಿದರೆ ಸಾರ್ವಜನಿಕರು ಶೇ.50ರಷ್ಟು ಕೊಡುಗೆ ನೀಡಬೇಕೆಂಬ ಷರತ್ತಿನೊಂದಿಗೆ ಜೀರ್ಣೋದ್ಧಾರ ಪ್ರಕ್ರಿಯೆಗೆ ಚಾಲನೆ ಸಿಕ್ಕಿತು. ಬಳಿಕ ಮೊದಲ ಹಂತದಲ್ಲಿ ಗರ್ಭಗುಡಿ ಮತ್ತು ಪ್ರಾಕಾರವನ್ನು 30 ಸಾವಿರ ವೆಚ್ಚದಲ್ಲಿ ದುರಸ್ತಿ ಮಾಡಿ ಸಲಾಯಿತು. 15 ಸಾವಿರವನ್ನು ನಾವು ಊರಿನವರು ತಹಸೀಲ್ದಾರ್ ಖಾತೆಗೆ ಡಿಪಾಸಿಟ್ ಮಾಡಿದ್ದೆವು. ಹೀಗೆ ಹಂತ ಹಂತವಾಗಿ ದೇವಸ್ಥಾನ ಜೀರ್ಣೋದ್ಧಾರ ನಡೆಯಿತು ಎಂದು ಮಾದೇ ಗೌಡರು ನೆನಪಿಸಿಕೊಳ್ಳುತ್ತಾರೆ.

ಶ್ರೀಮಠದ ವ್ಯಾಪ್ತಿಗೆ ದೇವಸ್ಥಾನ ಬರುವ ಮೊದಲು ಡಿ.ಮಾದೇಗೌಡರು ಸೇರಿದಂತೆ ಕುಂಬಾರಕೊಪ್ಪಲು ಯಜಮಾನರ ನೇತೃತ್ವದಲ್ಲಿ ದೇವಸ್ಥಾನ ಜೀರ್ಣೋದ್ಧಾರ ಕಾರ್ಯ ಹಾಗೂ ದೀಪೋತ್ಸವ ನಡೆಯುತ್ತಿತ್ತು.

ಕೂರ್ಗಳ್ಳಿ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು ಸೇರಿದಂತೆ ಇಲ್ಲಿಗೆ ಸುತ್ತಮುತ್ತಲ ಗ್ರಾಮದವರನ್ನು ಸೇರಿಸಿಕೊಂಡು ದೀಪೋತ್ಸವ ಮಾಡಿಕೊಂಡು ಬರುತ್ತಿದ್ದರು. ಶ್ರೀ ಮಠದ ವ್ಯಾಪ್ತಿಗೆ ಮೇಲೆ ದೀಪೋತ್ಸವ ಉಜ್ವಲವಾಗಿ ನಡೆದುಕೊಂಡು ಬರುತ್ತಿದೆ. ಅದೇ ರೀತಿಯಲ್ಲಿ ವಿಷ್ಣು ದೀಪೋತ್ಸವ ಸೋಮವಾರ ದೇವಸ್ಥಾನದಲ್ಲಿ ನಡೆಯಲಿದೆ. ಬೆಳಗ್ಗೆಯಿಂದ ಪೂಜಾ ಕೈಂಕರ್ಯ ನಡೆಯಲಿದ್ದು, ಸಂಜೆ 6ಕ್ಕೆ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ದೀಪಗಳ ಪ್ರಜ್ವಲೆಗೆ ಚಾಲನೆ ದೊರೆಯಲಿದೆ.

ಸುತ್ತಮುತ್ತಲ ಗ್ರಾಮಗಳಾದ ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಪಾಲಹಳ್ಳಿ ಸೇರಿದಂತೆ ಇನ್ನಿತರ ಗ್ರಾಮಸ್ಥರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ವಿಷ್ಣು ಪ್ರಧಾನ ದೇವಸ್ಥಾನ ಇದು. ಇದು ಐತಿಹಾಸಿಕ ದೇವಸ್ಥಾನ. 600 ವರ್ಷಗಳಷ್ಟು ಹಳೇ ದೇವಸ್ಥಾನ. ಯಾರು ಕಟ್ಟಿಸಿದರೋ ಏನೋ ಗೊತ್ತಿಲ್ಲ. ಯಾವುದೇ ಮಾಹಿತಿ ಲಭ್ಯವಿಲ್ಲ. ಕುಂಬಾರಕೊಪ್ಪಲು ಯುವಕರು ಹಾಗೂ ಯಜಮಾನರ ಕೋರಿಕೆ ಮೇರೆಗೆ 1974ರಲ್ಲಿ ಭೈರವೈಕ್ಯ ಪದ್ಮಭೂಷಣ ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಆಗ ದೇವಸ್ಥಾನದಲ್ಲಿ ಬಳ್ಳಿಗಳು ಹಬ್ಬಿದ್ದವು. ಇಂತಹ ಸನ್ನಿವೇಶದಲ್ಲಿ ಡಾ. ಶ್ರೀ ಬಾಲಗಂಗಾಧರನಾಥ ಶ್ರೀಗಳು ದೇವಸ್ಥಾನ ಜೀರ್ಣೋದ್ಧಾರಕ್ಕೆ ಕ್ರಮ ವಹಿಸಿದರು.




–ಶ್ರೀ ಸೋಮೇಶ್ವರನಾಥ ಸ್ವಾಮೀಜಿ,
ಶ್ರೀ ಆದಿಚುಂಚನಗಿರಿ ಶಾಖಾ ಮಠ, ಮೈಸೂರು.

> “ ಹೆಬ್ಬಾಳು ಕೇವಲ ದೇವಸ್ಥಾನ ಮತ್ತು ಕೆರೆಗೆ ಸೀಮಿತವಾಗಬಾರದು. ಅದೊಂದು ಕ್ಷೇತ್ರವಾಗಿ ಬೆಳೆಯಬೇಕು ಎಂದು ಭೈರವೈಕ್ಯ ಪದ್ಮಭೂಷಣ ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಲ್ಲಿ ಪ್ರಾರ್ಥನೆ ಮಾಡಿದಾಗ, ಅವರು ದೇವಸ್ಥಾನದ ಜವಾಬ್ದಾರಿ ವಹಿಸಿಕೊಂಡರು. ಬಳಿಕ ಹತ್ತಾರು ಕೋಟಿ ರೂ. ವೆಚ್ಚದಲ್ಲಿ ಕ್ಷೇತ್ರವಾಗಿ ಅಭಿವೃದ್ಧಿ ಆಗಲು ಸಾಧ್ಯವಾಯಿತು. ಇದು ಹೆಮ್ಮೆಯ ವಿಚಾರ. ಬಾಲಗಂಗಾಧರನಾಥ ಶ್ರೀಗಳ ಬಳಿಕ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರು ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಈ ಎಲ್ಲದರ ಹಿನ್ನೆಲೆಯಲ್ಲಿ ಮೈಸೂರಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ 'ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನ'ವೂ ಒಂದು ಎನ್ನುವ ರೀತಿಯಲ್ಲಿ ಅಭಿವೃದ್ಧಿಯಾಗಿದೆ.



–ಡಿ.ಮಾದೇಗೌಡರು, ಮಾಜಿ ಎಂಎಲ್‌ಸಿ



ವಾರಭವಿಷ್ಯ
15.12.2024 ರಿಂದ 21.12.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಧನುಸ್ಸು, ಚಂದ್ರ–ವೃಷಭ, ಮಿಥುನ, ಕಟಕ, ಸಿಂಹ, ಕುಜ–ಕಟಕ, ಬುಧ–ವೃಶ್ಚಿಕ, ಗುರು–ವೃಷಭ, ಶುಕ್ರ–ಮಕರ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವೃತ್ತಿಪರ ವ್ಯವಹಾರಗಳಲ್ಲಿ ಉಂಟಾಗಿದ್ದ ಸಮಸ್ಯೆಗಳು ದೂರವಾಗುವುದು. ಆದಾಯ ಹೆಚ್ಚಿದಂತೆ ಖರ್ಚುಗಳೂ ಹೆಚ್ಚುವುದು. ಸಮಾಜ ಮುಖೀ ಕೆಲಸಗಳಿಂದ ಪ್ರಸಿದ್ಧಿಗೆ ಬರುವಿರಿ. ಸಹೋದರ ಸಂಬಂಧಿಗಳಲ್ಲಿ ವಾದ–ವಿವಾದಗಳು ಉಂಟಾಗಬಹುದು. ಪಾಲುದಾರಿಕೆ ವ್ಯವಹಾರಗಳನ್ನು ಮಾಡದಿರುವುದು ಒಳ್ಳೆಯದು. ವಾರಾಂತ್ಯಕ್ಕೆ ಲಘು ಪ್ರವಾಸಗಳಿಂದ ಮನಸ್ಸು ಹಗುರವೆನಿಸುವುದು.
ಶ್ರೀ ಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ–3

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರಮನಿಂದ ಮಾಡುವ ಕೆಲಸಗಳಲ್ಲಿ ಜಯಶೀಲರಾಗುತ್ತೀರಿ. ಸಮಾಜದ ಪ್ರಮುಖ ವ್ಯಕ್ತಿಗಳೊಂದಿಗೆ ಸಂಪರ್ಕವು ವಿಸ್ತಾರಗೊಳ್ಳುತ್ತದೆ. ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವ ಯೋಗವಿದೆ. ಚರ–ಸ್ಥಿರ ಆಸ್ತಿ ವ್ಯವಹಾರಗಳು ಭಾಗ್ಯದ ಬಾಗಿಲು ತೆರೆಯುವುದು. ಗೃಹ ನಿರ್ಮಾಣ ಕಾರ್ಯಗಳಲ್ಲಿ ಅಡಚಣೆ ಉಂಟಾಗುವುದು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–6

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
ವಾರದಾರಂಭಕ್ಕೆ ಖರ್ಚುಗಳು ಹೆಚ್ಚಾಗುವುದು. ನಿಮ್ಮ ಸುತ್ತ ಕುತ್ಸಿತ ಮನಸ್ಸಿನ ಜನರಿಂದ ತೊಂದರೆ. ಆಲೋಚಿಸಿದ ಕೆಲಸ ಪರರ ಸಹಾಯದಿಂದ ಸಾವಕಾಶವಾಗಿ ಆಗುವುದು. ವಿವಾಹ ವಿಚಾರದಲ್ಲಿ ವಿಘ್ನಗಳು ಉಂಟಾಗುವುದು. ವಾರದ ಉತ್ತರಾರ್ಧಕ್ಕೆ ಅಧಿಕಾರಿಗಳ ಸಹಾಯಹಸ್ತ ದೊರೆತು ಕಾರ್ಯಾನುಕೂಲ. ಪಿತ್ರಾರ್ಜಿತವಲ್ಲದ ಆಸ್ತಿಗೆ ಪ್ರಯತ್ನ ಮಾಡಬೇಡಿ. ಸಟ್ಟಾ, ಜೂಜುಗಳಿಂದ ದೂರವಿರಿ.
ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ–9

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಸ್ಥಿರ ಆಸ್ತಿಗಳ ಮೇಲೆ ಬಂಡವಾಳ ಹೂಡಿಕೆ ಮಾಡಲು ಸಮಯ ಉತ್ತಮವಾಗಿದೆ. ಬರಬೇಕಾದ ಹಣ ಕೈ ಸೇರಲಿದೆ. ಮನೆಯ ಸೌಕರ್ಯಗಳ ನೆರವೇರಿಕೆಗೆ ಹೆಚ್ಚಿನ ಗಮನ ಕೊಡುವಿರಿ. ಚಿನ್ನ, ಬೆಳ್ಳಿ ವ್ಯಾಪಾರಿಗಳಿಗೆ ಉತ್ತಮ ಮಟ್ಟದಲ್ಲಿ ವ್ಯಾಪಾರವಾಗಿ ಲಾಭವೂ ಗಳಿಕೆ ಆಗುವುದು. ವಾರಾಂತ್ಯಕ್ಕೆ ಅನಿರೀಕ್ಷಿತ ಖರ್ಚುಗಳು ಎದುರಾಗುವುದು. ಆರೋಗ್ಯ ಬಿಗಡಾಯಿಸಬಹುದು.
ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ–1

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಮಕ್ಕಳ ಶಿಕ್ಷಣಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡಬೇಕಾಗಬಹುದು. ನಿಮ್ಮ ವೃತ್ತಿ ಜೀವನದಲ್ಲಿ ಹೊಸ ಸಂಪರ್ಕಗಳಿಂದ ಧನ ಲಾಭವಾಗುವ ಸಾಧ್ಯತೆ ಇದೆ. ಶುಭ ಕಾರ್ಯ ಪ್ರಯತ್ನಗಳು ಸಫಲವಾಗುವುದು. ಆಪ್ತೇಷ್ಟರ ಮಿಲನ, ಅವರ ಆದರಾತಿಥ್ಯಕ್ಕೆ ಧನ ವ್ಯಯ. ಯಂತ್ರೋಪಕರಣಗಳ ಮೇಲೆ ಕೆಲಸ ಮಾಡುವಾಗ ಜಾಗೃತರಾಗಿರಿ. ಅನ್ಯ ಸ್ತ್ರೀಯರೊಂದಿಗೆ ಅನುಚಿತವಾಗಿ ವರ್ತಿಸದಿರಿ.
ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–3

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಭಾಗ್ಯಸ್ಥಾನದಲ್ಲಿ ಗುರು, ವಿಕ್ರಮ ಸ್ಥಾನದಲ್ಲಿ ಶನಿದೇವ ಸಂಚರಿಸುವಾಗ ನಿಮ್ಮ ಭಾಗ್ಯದ ಬಾಗಿಲು ತೆರೆದಿದೆ. ವ್ಯಾಪಾರ–ವ್ಯವಹಾರಗಳು ಸುಗಮವಾಗಿ ಸಾಗುವುದರ ಜೊತೆಗೆ ಹೇರಳ ಧನಲಾಭವಾಗುವುದು. ಎಳ್ಳು ಹಾಗೂ ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ಉತ್ತಮ ಆದಾಯವಾಗುವುದು. ಹಲವರಿಗೆ ಹಳೆಯ ಕಾಯಿಲೆಗಳಿಂದ ಮುಕ್ತಿ ದೊರೆಯಲಿದೆ. ಆತುರದ ಡ್ರೈವಿಂಗ್ ಬೇಡ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದಾರಂಭಕ್ಕೆ ನಿರೀಕ್ಷಿತ ಧನ ಕೈ ಸೇರುವುದು. ವ್ಯಾಪಾರದಲ್ಲಿ ಹೊಸ ಯೋಜನೆ ಸೇರಿಸಲು ಅಡ್ಡಿ ಇಲ್ಲ. ಪ್ರಭಾವಿ ವ್ಯಕ್ತಿಗಳ ಸಂಪರ್ಕವೂ ಸಹಾಯವಾಗುವುದು. ವಾರಮಧ್ಯೆ ಕುಟುಂಬದಲ್ಲಿ ಗೊಂದಲ. ವಿದ್ಯಾರ್ಥಿಗಳು ಅಭ್ಯಾಸದ ಕಡೆಗೆ ಹೆಚ್ಚಿನ ಶ್ರಮ ವಹಿಸಬೇಕು. ಸರ್ಕಾರಿ ಅಧಿಕಾರಿಗಳು ಕಾನೂನುಬಾಹಿರ ಕೆಲಸ ಮಾಡಿ ತೊಂದರೆಗೆ ಸಿಲುಕುವರು. ಆರೋಗ್ಯ ಕಾಪಾಡಿಕೊಳ್ಳಿ.
ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ
ಬಹು ನಿರೀಕ್ಷಿತ ಕೆಲಸಗಳು ಸಫಲತೆಯ ಹಾದಿಯಲ್ಲಿ ಸಾಗಿದೆ. ಲೆಕ್ಕ ಪರಿಶೋಧಕರಿಗೆ ಹೊಸ ಕಕ್ಷಿದಾರರು ದೊರಕುವರು. ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ ಐಷಾರಾಮಿ ವಸ್ತು ಮನೆಗೆ ಬರುವುದು. ಸರ್ಕಾರಿ ಕಚೇರಿ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದು. ನೀವು ಇತರರ ಅಪನಂಬಿಕೆಗೆ ಗುರಿಯಾಗುವ ಸಾಧ್ಯತೆ ಇರುತ್ತದೆ. ಅನಾರೋಗ್ಯ ಕಾಡಬಹುದು.
ಶ್ರೀ ನೃಸಿಂಹ ದರ್ಶನ. ಶುಭ ಸಂಖ್ಯೆ–8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ರಾಜಕೀಯ ರಂಗದವರಿಗೆ ವಿರೋಧಿಗಳ ಉಪಟಳ, ಜೊತೆಗೆ ತನಿಖಾ ಸಂಸ್ಥೆಗಳ ಬಿಸಿ ಮುಟ್ಟುವುದು. ಆಸ್ತಿ ವಿಚಾರಗಳು ಎಳೆದಾಡುತ್ತದೆ. ಕೃಷಿಕರಿಗೆ ಇದು ಶುಭವಾರ. ಬೆಳೆದ ಫಸಲಿಗೆ ಉತ್ತಮ ಬೆಲೆ ದೊರಕುತ್ತದೆ. ನ್ಯಾಯಾಲಯ ಕೇಸುಗಳಲ್ಲಿ ಅನುಕೂಲ ಆಗಬಹುದು. ಸರ್ಕಾರಿ ನೌಕರರಿಗೆ ಸ್ಥಾನಪಲ್ಲಟ. ವಾಯು ಪ್ರಕೋಪ ಕಾಡಬಹುದು.
ಶ್ರೀ ಗುರುರಾಯರ ಪ್ರಾರ್ಥನೆ. ಶುಭ ಸಂಖ್ಯೆ–4


ಮಕರ (ಬೋ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದಾರಂಭಕ್ಕೆ ಆರ್ಥಿಕ ಬಿಕ್ಕಟ್ಟುಗಳು ನಿವಾರಣೆ ಆಗುವುದು. ಕುಟುಂಬ ಸದಸ್ಯರ ಸಹಕಾರದಿಂದ ಮನೆಯಲ್ಲಿ ಹರುಷದ ವಾತಾವರಣ. ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ವಿಶೇಷ ಆಸಕ್ತಿ ವಹಿಸುವಿರಿ. ವಿವಾಹ ಯೋಗ್ಯರಿಗೆ ವಿವಾಹ ಬಂಧನ ಉಂಟಾದೀತು. ಅಶುಭ ಶನಿದೇವನಿಂದ ದುಷ್ಟಜನರ ಸಹವಾಸ, ಸಂಪರ್ಕಗಳಿಂದ ಕಾನೂನು ತೊಡಕಿಗೆ ಸಿಲುಕುವಿರಿ.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–9

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಹೊಸ ವ್ಯಾಪಾರದ ಆಸೆ ಈಡೇರಬಹುದು. ಸಾಫ್ಟ್‌ವೇರ್ ಮಂದಿಗೆ ಕಂಪನಿ ಬದಲಾವಣೆಯಿಂದ ಆರ್ಥಿಕ ಉನ್ನತಿ. ವಾರ ಮಧ್ಯೆ ಶುಭ ಸುದ್ದಿ ಬಂದು ಮನಸ್ಸಿಗೆ ಸಮಾಧಾನ. ವ್ಯಾಪಾರದಲ್ಲಿ ಪ್ರತಿಸ್ಪರ್ಧಿಗಳ ಹೊಡೆತದಿಂದ ನಷ್ಟ ಸಂಭವ. ದುಡುಕು ಮಾತಿನಿಂದ ಕಾರ್ಯ ಕೆಡುವುದು. ವಿದ್ಯುತ್ ಹಾಗೂ ಅಗ್ನಿ ಅವಘಡಗಳಿಂದ ಜಾಗೃತರಾಗಿರಿ. ರಾತ್ರಿ ಪ್ರಯಾಣ ಬೇಡ.
ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ–2


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸಪ್ತಾಹದ ಆದಿಗೆ ನೀವು ಇಷ್ಟಪಟ್ಟಿದ್ದನ್ನು ಪಡೆದುಕೊಳ್ಳುವಿರಿ. ಯತ್ನ ಕಾರ್ಯದಲ್ಲಿ ಸಫಲತೆಯನ್ನು ಹೊಂದುವಿರಿ. ಗೃಹ ನಿರ್ಮಾಣ ಪ್ರಯತ್ನಗಳು ಮುಂದೂಡಲ್ಪಡುವುದು. ಧನುರ್ ಮಾಸ ನಂತರ ಪ್ರಯತ್ನಿಸಿ. ಕಚೇರಿಯಲ್ಲಿ ಕೆಲಸದ ಒತ್ತಡ ಹೆಚ್ಚುವುದು. ರಾಹು–ಕೇತುಗಳು ಶುಭರಿಲ್ಲ. ಯಾರಲ್ಲಿಯೂ ವಿರೋಧ ಕಟ್ಟಿಕೊಳ್ಳಬೇಡಿ. ಕಳ್ಳಕಾಕರಿಂದ ತೊಂದರೆ.
ಶ್ರೀ ದತ್ತಾತ್ರೇಯ ಸ್ತುತಿ. ಶುಭ ಸಂಖ್ಯೆ–5

ಮಕ್ಕಳ ಚಿತ್ರಕಥೆ
'ಹೀಗೊಂದು ನೀತಿ ಕಥೆ'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಮ್ಮೆ ನಾಲ್ಕು ಮೇಣದ ಬತ್ತಿಗಳು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿರುತ್ತವೆ.




ಮೊದಲನೆಯ ಮೇಣದ ಬತ್ತಿಯ ಹೆಸರು "ಶಾಂತಿ". ಅದು ಹೇಳುತ್ತದೆ, "ಜಾಗತ್ತಿನಲ್ಲಿ ನನಗೆ ಬೆಲೆಯೇ ಇಲ್ಲ, ಎಲ್ಲೆಲ್ಲೂ ಜಗಳ, ದ್ವೇಷ. ನನ್ನ ಅವಶ್ಯಕತೆ ಇವರಿಗೆ ಇಲ್ಲ" ಎಂದು ಹೇಳಿ ಬೆಳಕು ಆರಿಹೋಗುತ್ತದೆ.




ಎರಡನೆಯದು "ನಂಬಿಕೆ" ಅದು ಹೇಳುತ್ತದೆ "ಮೊದಲಿನಂತೆ ಜನರಲ್ಲಿ ಪರಸ್ಪರ ನಂಬಿಕೆಗಳು ಉಳಿದಿಲ್ಲ. ನನ್ನ ಅವಶ್ಯಕತೆ ಇವರಿಗೆ ಇಲ್ಲ" ಎಂದು ಹೇಳಿ ಬೆಳಕು ಆರಿಹೋಗುತ್ತದೆ.



ಮೂರನೆಯದು "ಪ್ರೀತಿ". ಅದೂ ಕೂಡ ಹಾಗೆಯೇ ದುಃಖ ವ್ಯಕ್ತಪಡಿಸುತ್ತಾ "ಜನ ಪರಸ್ಪರ ಪ್ರೀತಿಸುವುದನ್ನೇ ಮರೆತಿದ್ದಾರೆ. ನನ್ನ ಅವಶ್ಯಕತೆಯೇ ಅವರಿಗೆ ಇಲ್ಲ" ಎಂದು ಆರಿಹೋಗುತ್ತದೆ.



ಆ ಕೊಠಡಿಗೆ ಬಂದ ಪುಟ್ಟ ಬಾಲಕನೊಬ್ಬ ಉರಿಯಬೇಕಿದ್ದ ಮೇಣದ ಬತ್ತಿಗಳು ಆರಿಹೋಗಿದ್ದಕ್ಕೆ ಅಳಲು ಪ್ರಾರಂಭಿಸುತ್ತಾನೆ.



ನಾಲ್ಕನೆಯ ಮೇಣದ ಬತ್ತಿಯು ಹೇಳುತ್ತದೆ "ನನ್ನನ್ನು ಉಪಯೋಗಿಸಿ ಆ ಮೂರನ್ನೂ ಮತ್ತೆ ಹಚ್ಚಬಹುದು" ಎಂದು ಹೇಳುತ್ತದೆ. ಆ ಮಗು ಅದರಿಂದ ಆರಿಹೋಗಿದ್ದ ಮೇಣದ ಬತ್ತಿಗಳನ್ನು ಹಚ್ಚುತ್ತದೆ....ಅದರ ಹೆಸರೇ "ಭರವಸೆ".

ಕೋಟೆ ಬಳಿ ಅರಣ್ಯದ ಅಂಚಿನ ಗ್ರಾಮದ ಜಮೀನಿನಲ್ಲಿ ಹುಲಿ ಕಳೇಬರ ಪತ್ತೆ

● ಮತ್ತೊಂದು ಹುಲಿಯೊಂದಿಗಿನ ಕಾದಾಟದಲ್ಲಿ ಸತ್ತಿರುವ ಶಂಕೆ ● ಬಳಿಕ ಭಕ್ಷಿಸಿದ ಅನುಮಾನ; ಅರಣ್ಯಾಧಿಕಾರಿಗಳ ವಿರುದ್ಧ ಗ್ರಾಮಸ್ಥರ ಸಿಟ್ಟು

ಮೈಸೂರು, ಡಿ.14(ಎಸ್‌ಬಿಡಿ, ಮಂಜು)– ಹೆಚ್.ಡಿ.ಕೋಟೆ ಬಳಿ ಹುಲಿಯೊಂದು ಸಾವನ್ನಪ್ಪಿದ್ದು, ಅದರ ಭಾಗಾರ್ಧ ಕಳೇಬರ ಜೋಳದ ಹೊಲದಲ್ಲಿ ಶನಿವಾರ ಪತ್ತೆಯಾಗಿದೆ

ಹುಲಿಗಳ ಸಂಚಾರವಿರುವ ತಾಲೂಕಿನ ಚಾಕಳ್ಳಿ ಗ್ರಾಮದ ಜಮೀನಿನಲ್ಲಿ ಸುಮಾರು ಒಂದೂವರೆ ವರ್ಷದ ಹುಲಿಯ ಕಳೇಬರ ಪತ್ತೆಯಾಗಿದೆ. ಮತ್ತೊಂದು ಹುಲಿಯೊಂದಿಗಿನ ಕಾದಾಟದಲ್ಲಿ ಸಾವನ್ನಪ್ಪಿರಬಹುದು ಎನ್ನಲಾಗಿದೆ. ಆದರೆ ಕಳೇಬರವನ್ನು ಯಾವುದೋ ಪ್ರಾಣಿ ಭಕ್ಷಿಸಿದುತೆ ಕುಡು ಬಂದಿದೆ

ಇಂದು ಬೆಳಗ್ಗೆ ರೈತ ಶಿವಣ್ಣ ನಾಯಕ ಹಾಗೂ ಅವರ ಮಗ ನಾಗೇಶ್ ಎಂದಿನಂತೆ ಜೋಳದ ಫಸಲಿಗೆ ನೀರು ಹಾಯಿಸಲು ತೆರಳಿದ್ದಾಗ ಜಮೀನಿನಲ್ಲಿ ಹುಲಿಯ ಹೆಜ್ಜೆ ಗುರುತು ನೋಡಿದ್ದಾರೆ. ಇದರಿಂದ ಭಯಭೀತರಾಗಿ ಗ್ರಾಮಕ್ಕೆ ಓಡಿ ಹೋಗಿ, ಗ್ರಾಮಸ್ಥರಿಗೆ ವಿಷಯ ತಿಳಿಸಿದ್ದಾರೆ. ಕೂಡಲೇ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ ಗ್ರಾಮಸ್ಥರು ಗುಂಪಾಗಿ ಶಿವಣ್ಣ ಅವರ ಜಮೀನಿಗೆ ಧಾವಿಸಿದ್ದಾರೆ. ಸುಮಾರು ಹೊತ್ತು ಕಾದರೂ ಅರಣ್ಯ ಇಲಾಖೆಯವರು ಬಾರದ ಕಾರಣ ಗ್ರಾಮಸ್ಥರೇ ಪಟಾಕಿ ಸಿಡಿಸಿ, ಜೋಳದ ಬೆಳೆಯೊಳಗೆ ನುಗ್ಗಿ, ಹುಟುಕಾಟ ನಡೆಸಿದಾಗ ಜಮೀನಿನ ಮಧ್ಯದಲ್ಲಿ ಹುಲಿಯ ಕಳೇಬರ ಕಂಡು ಬೆಚ್ಚಿಬಿದ್ದಿದ್ದಾರೆ.

ಮತ್ತೆ ಕರೆ ಮಾಡಿದ ನಂತರ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಹುಲಿ ಹೆಜ್ಜೆ ಗುರುತು ಪತ್ತೆಯಾಗಿರುವ ಬಗ್ಗೆ ಮಾಹಿತಿ ನೀಡಿದರೂ ನಿರ್ಲಕ್ಷ್ಯ ಮಾಡುತ್ತೀರಿ. ಯಾರ ಮೇಲಾದರೂ ದಾಳಿ ಮಾಡಿ, ದುರಂತ ಸಂಭವಿಸಿದರೆ ಯಾರು ಹೊಣೆ ಎಂದು ಪ್ರಶ್ನಿಸಿದರು.

ಮತ್ತೊಂದು ಹುಲಿ ಭಕ್ಷಿಸಿತೇ?: ಹುಲಿಗಳ ಕಾಳಗದಲ್ಲಿ ಇದು ಸಾವನ್ನಪ್ಪಿದೆ ಎಂದು ಅಂದಾಜಿಸಲಾಗಿದೆ. ಆದರೆ ಕಳೇಬರದ ಭಾಗಾರ್ಧವನ್ನು ಬೇರೊಂದು ಪ್ರಾಣಿ ಭಕ್ಷಿಸಿರುವುದು ಆತಂಕ ಹೆಚ್ಚಿಸಿದೆ. ಕಾಳಗ ನಡೆದಿದೆ ಎಂದರೆ ಈ ಭಾಗದಲ್ಲಿ ಹೆಚ್ಚು ಸಂಖ್ಯೆಯ ಹುಲಿಗಳ ಸಂಚಾರವಿರುಹುದು. ಅಲ್ಲದೆ ಹುಲಿ ಕಳೇಬರವನ್ನು ಮತ್ತೊಂದು ಹುಲಿಯೇ ಭಕ್ಷಿಸುತ್ತದೆ ಎಂದಾದರೆ ಜನ–ಜಾನುವಾರುಗಳ ಗತಿಯೇನು? ಎಂದು ಗ್ರಾಮಸ್ಥರು ಭಯಭೀತರಾಗಿದ್ದಾರೆ. ಕಾಳಗದಲ್ಲಿ ಹುಲಿ ಮರಿ ಸಾವನ್ನಪ್ಪಿದರೆ ಅದರ ಕಳೇಬರವನ್ನು ಬೇರೊಂದು ಹುಲಿ ತಿನ್ನುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಹುಲಿ ಮೃತಪಟ್ಟ ಜಾಗದ ಸುತ್ತಮುತ್ತ ನಾಲ್ಕು ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ನಾಳೆಯವರೆಗೂ ನಿಗಾವಹಿಸಿದ ನಂತರ ಮುಂದಿನ ಕ್ರಮ ವಹಿಸಲು ಅರಣ್ಯಾಧಿಕಾರಿಗಳು ತೀರ್ಮಾನಿಸಿದ್ದಾರೆ.

ಡಿಸಿಎಫ್ ಬಸವರಾಜು, ಎಸಿಎಫ್ ಅಭಿಷೇಕ್, ಆರ್‌ಎಫ್‌ಓ ಹನುಮಂತರಾಜು, ವೈದ್ಯಾಧಿಕಾರಿಗಳಾದ ಡಾ.ಮುಜೀಬ್, ಡಾ.ರಮೇಶ್, ಎಸ್‌ಟಿಪಿಎಫ್ ಸಿಬ್ಬಂದಿ, ಚಿರತೆ ಕಾರ್ಯಪಡೆ ಸಿಬ್ಬಂದಿ ಪರಿಶೀಲನೆ ನಡೆಸಿದರು. ಹುಲಿ ಸಾವನ್ನಪ್ಪಿದ ಸ್ಥಳದಲ್ಲಿ ಶ್ವಾನದಳವೂ ಪರಿಶೀಲನೆ ನಡೆಸಿದೆ. ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಹಾಗೂ ಸಿಬ್ಬಂದಿ ಇದ್ದರು.

ರೈತರ ಆಕ್ರೋಶ: ಕಳೆದ ಆರೇಳು ತಿಂಗಳಿಂದ ಬೋಚಿ ಕಟ್ಟೆ, ಶಾಂತಿಪುರ, ಕೆಜಿ ಹುಂಡಿ, ಚಾಕಳ್ಳಿ ಸುತ್ತಮುತ್ತಲಿನ ಜಮೀನುಗಳಲ್ಲಿ ತಾಯಿ ಹುಲಿ ಎರಡು ಮರಿಗಳೊಂದಿಗೆ ಕಾಣಿಸಿಕೊಳ್ಳುತ್ತಿದೆ. ಶಾಂತಿಪುರ, ಬೋಚಿ, ಕಟ್ಟೆ ಜಮೀನಿನಲ್ಲಿ ರೈತರ ಮೇಲೆ ದಾಳಿಗೆ ಯತ್ನಿಸಿದೆ ಹುಲಿ ಸೆರೆ ಹಿಡಿಯುವಂತೆ ಹೆಚ್.ಡಿ ಕೋಟೆ ಪ್ರಾದೇಶಿಕ ವಲಯ ಅರಣ್ಯ ಕಚೇರಿ ಬಳಿ ಪ್ರತಿಭಟನೆ ಮಾಡಲಾಗಿತ್ತಾದರೂ ಗಂಭೀರವಾಗಿ ಪರಿಗಣಿಸಲಿಲ್ಲ. ಶಾಂತಿಪುರ ಗ್ರಾಮದ ಬಳಿ ರಸ್ತೆ ತಡೆದು ಪ್ರತಿಭಟಿಸಿದರೂ ಕ್ರಮ ವಹಿಸಲಿಲ್ಲ. ಈಗ ಹುಲಿಗಳ ಕಾದಾಟದಲ್ಲಿ ಒಂದು ಸಾವನ್ನಪ್ಪಿದೆ ಎಂದು ಹೇಳುತ್ತೀರಿ. ಸತ್ತಿರುವುದು ಈ ಭಾಗದಲ್ಲಿ ಓಡಾಡುತ್ತಿದ್ದ ಹುಲಿಯೇ ಎಂದು ನೋಡುವುದಕ್ಕೂ ಅವಕಾಶ ನೀಡುತ್ತಿಲ್ಲ. ಹಾಗಾದರೆ ಇನ್ನೂ ಎಷ್ಟು ಹುಲಿಗಳಿರಬಹುದು ಎಂದು ಅರಣ್ಯಾಧಿಕಾರಿಗಳ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದರು.


ಹುಲಿಯ ಕಳೇಬರ ಪರಿಶೀಲಿಸಿದ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ.


ಜಮೀನಿನಲ್ಲಿ ಪತ್ತೆಯಾದ ಹುಲಿಯ ಕಳೇಬರ

> ಹೆಚ್.ಡಿ.ಕೋಟೆ ಪ್ರಾದೇಶಿಕ ವಲಯ ಅರಣ್ಯ ವ್ಯಾಪಿಯ ಚಾಕಳ್ಳಿ ಗ್ರಾಮದ ಜಮೀನಿನಲ್ಲಿ ಒಂದೂವರೆ ವರ್ಷದ ಗಂಡು ಹುಲಿ ಕಳೇಬರ ಪತ್ತೆಯಾಗಿದೆ. ಇದು ಅಸಹಜ ಸಾವಾಗಿದ್ದು, ಡಾ.ಮುಜೀಬ್ ಹಾಗೂ ಡಾ.ರಮೇಶ್, ಪರೀಕ್ಷೆ ನಡೆಸಿದ್ದಾರೆ. ಕಳೇಬರದ ಮಾದರಿಯನ್ನು ಸಂಗ್ರಹಿಸಿ, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಅಲ್ಲಿಂದ ವರದಿ ಬಂದ ನಂತರ ನಿಖರ ಕಾರಣ ತಿಳಿಯಲಿದೆ. ಕಳೆದ ಆರು ತಿಂಗಳಿಂದ ಈ ಭಾಗದಲ್ಲಿ ತಾಯಿ ಹುಲಿ ಎರಡು ಮರಿಗಳೊಂದಿಗೆ ಸಂಚರಿಸುತ್ತಿದ್ದು ಸತ್ತಿರುವುದು ಯಾವ ಹುಲಿ ಎಂಬುದು ನಾಳೆ ತಿಳಿಯಬಹುದು. **-ಬಸವರಾಜು,** ಡಿಸಿಎಫ್

> ಇಂದು ಬೆಳಿಗ್ಗೆ ನನ್ನ ಮಗನ ಜೊತೆ ಜೋಳಕ್ಕೆ ನೀರಾಯಿಸಲು ಜಮೀನಿಗೆ ಬಂದಾಗ ಹುಲಿ ಹೆಜ್ಜೆ ಗುರುತು ಕಂಡವು. ಕೂಡಲೇ ಗ್ರಾಮಕ್ಕೆ ಓಡಿಬಂದು ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿದರೂ ವಿಳಂಬ ಮಾಡಿದರು. ಆದ್ದರಿಂದ ಗ್ರಾಮದವರೇ ಗುಂಪಾಗಿ ಹೋಗಿ ಪಟಾಕಿ ಸಿಡಿಸಿ, ಧೈರ್ಯ ಮಾಡಿ ಜಮೀನಿಗೆ ಹೋದಾಗ ಹುಲಿ ಸತ್ತುಬಿದ್ದಿತ್ತು. ಅರ್ಧಭಾಗವನ್ನು ಯಾವುದೋ ಪ್ರಾಣಿ ತಿಂದು ಹಾಕಿರುವುದನ್ನು ಕಂಡು ಗಾಬರಿಗೊಂಡೆವು. **-ಶಿವಣ್ಣ ನಾಯಕ,** ರೈತ

ಇಂದು ಹುಣಸೂರಲ್ಲಿ ಹನುಮ ಜಯಂತಿ

ಎಸ್ಪಿ ನೇತೃತ್ವದಲ್ಲಿ ಪೊಲೀಸರಿಂದ ಪಥಸಂಚಲನ

ಹುಣಸೂರು, ಡಿ.14– ನಗರದಲ್ಲಿ ನಾಳೆ(ಡಿ.15) ನಡೆಯುವ ಹನುಮ ಜಯಂತಿ ಅಂಗವಾಗಿ ಮೆರವಣಿಗೆ ಸಾಗುವ ರಸ್ತೆಗಳಲ್ಲಿ ಪೊಲೀಸರು ಶನಿವಾರ ಪಥ ಸಂಚಲನ ನಡೆಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ನೇತೃತ್ವದಲ್ಲಿ ಅಡಿಷನಲ್ ಎಸ್‌ಪಿಗಳಾದ ನಾಗೇಶ್, ಸುಂದರರಾಜ್, ಡಿವೈಎಸ್‌ಪಿಗಳಾದ ಗೋಪಾಲಕೃಷ್ಣ, ರವಿಪ್ರಸಾದ್, ನಗರ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಸೇರಿದಂತೆ 1500ಕ್ಕೂ ಹೆಚ್ಚು ಪೊಲೀಸರು ನಗರದ ಮುನೇಶ್ವರ ಕಾವಲ್ ಮೈದಾನದಿಂದ ಹೊರಟು ಸಂವಿಧಾನ ವೃತ್ತ, ಕಲ್ಪತರು ವೃತ್ತ, ಸಂತೆ ಬೀದಿ, ಬಜಾರ್ ರಸ್ತೆ, ಜೆಎಲ್‌ಬಿ ರಸ್ತೆ, ಎಸ್‌ಜೆ ರಸ್ತೆ, ಹೆಚ್.ಡಿ.ಕೋಟೆ ಸರ್ಕಲ್ ಮಾರ್ಗವಾಗಿ ಮತ್ತೆ ಮುನೇಶ್ವರಕಾವಲ್ ಮೈದಾನಕ್ಕೆ ಆಗಮಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಮಾತನಾಡಿ, ಹುಣಸೂರಿನಲ್ಲಿ ನಡೆಯುವ ಹನುಮ ಜಯಂತಿ ರಾಜ್ಯದ ಗಮನ ಸೆಳೆದಿದ್ದು, ಪೊಲೀಸರು ಎಚ್ಚರ ವಹಿಸಬೇಕು. ಇಡೀ ಮೆರವಣಿಗೆಯನ್ನು ಡ್ರೋಣ್ ಮತ್ತು ವಿಡಿಯೋ ಕ್ಯಾಮರಾ ಮೂಲಕ ಚಿತ್ರೀಕರಿಸಲಾಗುವುದು. ನಗರ ಪ್ರವೇಶಿಸುವ ಪ್ರಮುಖ ರಸ್ತೆಗಳಲ್ಲಿ ಬ್ಯಾರಿಕ್ಯಾಡ್ ಅಳವಡಿಸಲಾಗಿದ್ದು, ವಿನಾ ಕಾರಣ ತಿರುಗಾಟ, ಬಾವುಟಗಳನ್ನು ಕಟ್ಟಿಕೊಂಡು ಬರುವ ವಾಹನಗಳಿಗೆ ಪ್ರವೇಶ ನಿರ್ಬಂಧಿಸಲಾಗಿದ್ದು, ಪೊಲೀಸರು ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸಿ, ಜಯಂತಿಯನ್ನು ಸಾರ್ವಜನಿಕರೊಡಗೂಡಿ ಯಶಸ್ವಿಯಾಗಿಸಬೇಕು ಎಂದರು.

ಎಎಸ್‌ಪಿ ಸುಂದರರಾಜ್ ಮಾತನಾಡಿ, ಕರ್ತವ್ಯ ನಿರ್ವಹಿಸಿದ ಸ್ಥಳಗಳಲ್ಲಿ ಯಾವುದೇ ಅಚಾತುರ್ಯಕ್ಕೆ ಅವಕಾಶ ನೀಡದಂತೆ ಶಾಂತ ರೀತಿ ವರ್ತಿಸುವ ಮೂಲಕ ಕರ್ತವ್ಯ ನಿರ್ವಹಿಸಿ. ಯಾವುದೇ ಸಮಸ್ಯೆಯಾದಲ್ಲಿ ತಕ್ಷಣ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ತೊಂದರೆ ಮಾಡಿಕೊಂಡಲ್ಲಿ ಇಲಾಖೆ ಕಠಿಣ ಕ್ರಮ ಜರುಗಿಸಲಿದೆ ಎಂದು ಎಚ್ಚರಿಸಿದರು.

ಡಿವೈಎಸ್‌ಪಿ ಗೋಪಾಲಕೃಷ್ಣ ಮಾತನಾಡಿ, ನಗರದಲ್ಲಿ 60ಕ್ಕೂ ಹೆಚ್ಚು ಸಿಸಿ ಕ್ಯಾಮರಾ ಅಳವಡಿಸಲಾಗಿದ್ದು, ಇಬ್ಬರು ಎಎಸ್‌ಪಿ ನೇತೃತ್ವದಲ್ಲಿ 6 ಡಿವೈಎಸ್‌ಪಿಗಳು, 12 ಸಿಪಿಐ, 40 ಎಸ್‌ಐ, 49 ಎಎಸ್‌ಐ, 10 ಕೆಎಸ್‌ಆರ್‌ಪಿ ತುಕಡಿಗಳು ಸೇರಿದಂತೆ 900ಕ್ಕೂ ಹೆಚ್ಚು ಪೊಲೀಸರನ್ನು ಹನುಮಂತೋತ್ಸವ ಮೆರವಣಿಗೆ ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದೆ. ಎಲ್ಲರೂ ಶಿಸ್ತಿನಿಂದ ಕರ್ತವ್ಯ ನಿರ್ವಹಿಸಬೇಕೆಂದು ಮನವಿ ಮಾಡಿದರು.


ಹುಣಸೂರಲ್ಲಿ ಪೊಲೀಸರು ಪಥಸಂಚಲನ ನಡೆಸಿದರು.

ಪ್ರತಿಯೊಬ್ಬರೂ ಕ್ರೀಡೆಯ ಮಹತ್ವ ಅರಿಯಬೇಕು

ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ


ಕ್ರಿಕೆಟ್ ಪಂದ್ಯಾವಳಿಯನ್ನು ವಾಟಾಳು ಮಠದ ಶ್ರೀಸಿದ್ಧಲಿಂಗಶಿವಾಚಾರ್ಯಸ್ವಾಮೀಜಿ ಉದ್ಘಾಟಿಸಿದರು.

ತಿ.ನರಸೀಪುರ, ಡಿ.14– ದೈಹಿಕ ಚಟುವಟಿಕೆಯ ಮುಂದುವರಿದ ಭಾಗವೇ ಕ್ರೀಡೆಯಾಗಿದ್ದು, ಪ್ರತಿಯೊಬ್ಬರೂ ಕ್ರೀಡೆ ಬಗ್ಗೆ ಆಸಕ್ತಿ ವಹಿಸುವ ಜೊತೆಗೆ ಅದರ ಮಹತ್ವ ಅರಿಯಬೇಕು ಎಂದು ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಪುರಸಭೆ ವ್ಯಾಪ್ತಿಗೊಳಪಡುವ ಹೆಳವರ ಹುಂಡಿ ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀಬಸವೇಶ್ವರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡಾಕೂಟಗಳ ಮಹತ್ವ ಅರಿಯುವ ಮೂಲಕ ಇಂದಿನ ಯುವ ಜನತೆ ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗಬೇಕಿದೆ ಎಂದರು.

ಪ್ರಸ್ತುತ ಯುವಕರು ಮೊಬೈಲ್ ಬಳಕೆಯಲ್ಲಿ ತಮ್ಮ ಸಮಯ ವ್ಯರ್ಥ ಮಾಡುತ್ತಿದ್ದು, ಕ್ರೀಡೆಗೆ ಸಮಯ ಮೀಸಲಿಡುವ ಯುವಕರ ಸಂಖ್ಯೆ ಕ್ಷೀಣಿಸುತ್ತಿದೆ. ಗ್ರಾಮೀಣ ಸಂಸ್ಕೃತಿ ಬಿಂಬಿಸುವ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಯುವಕರು ಮೊಬೈಲ್ ಚಟದಿಂದ ಹೊರ ಬರಬೇಕೆಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಎಲ್ಲಾ ಕ್ರೀಡಾಭಿಮಾನಿಗಳನ್ನು ಕ್ರೀಡಾಂಗಣದಲ್ಲಿ ಹಿಡಿದಿಟ್ಟುಕೊಳ್ಳುವ ಶಕ್ತಿ ಕ್ರಿಕೆಟ್ ಪಂದ್ಯಾವಳಿಗಿದೆ. ಹಾಗಾಗಿ ಕ್ರೀಡಾಪಟುಗಳು ಕ್ರೀಡಾ ಮನೋಭಾವದಿಂದ ಭಾಗವಹಿಸಿ ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಬೇಕೆಂದರು.

ಪ್ರತಿಯೊಬ್ಬರಿಗೂ ಕ್ರೀಡೆ ಅವಶ್ಯಕ. ಕ್ರೀಡೆಗಳಿಂದ ಮನುಷ್ಯ ದೈಹಿಕ ಮತ್ತು ಮಾನಸಿಕವಾಗಿ ಸದೃಢನಾಗುತ್ತಾನೆ. ಕ್ರೀಡಾಪಟುಗಳು ಯಾವುದೇ ಕಾರಣಕ್ಕೂ ಜಗಳ ಮಾಡಿಕೊಳ್ಳಬಾರದು ಎಂದು ಕಿವಿಮಾತು ಹೇಳಿದರು.

ಪಂದ್ಯಾವಳಿಯಲ್ಲಿ ತಾಲೂಕಿನ ವೀರಶೈವ ಬಳಗದ 8 ತಂಡಗಳು ಭಾಗವಹಿಸಿದ್ದವು. 2 ದಿನಗಳ ಕಾಲ ಪಂದ್ಯಾವಳಿ ನಡೆಯಲಿದ್ದು, ಭಾನುವಾರ ಫೈನಲ್ ನಡೆಯುವ ಪಂದ್ಯದಲ್ಲಿ ಗೆಲ್ಲುವ ತಂಡ ಪ್ರಥಮ ಬಹುಮಾನ 20 ಸಾವಿರ ರೂ., ಟ್ರೋಫಿ ಹಾಗೂ ರನ್ನರ್ ಅಪ್ ತಂಡ 10 ಸಾವಿರ ರೂ. ಹಾಗೂ ಆಕರ್ಷಕ ಟ್ರೋಫಿ ಪಡೆದುಕೊಳ್ಳಲಿದೆ.

ಈ ವೇಳೆ ಕೆಇಬಿ ಸಿದ್ದಲಿಂಗಸ್ವಾಮಿ, ಹಲವಾರ ಪರಮೇಶ್ ಪಟೇಲ್, ಕಿರಗಸೂರು ಮಹದೇವಸ್ವಾಮಿ, ತೊಂಟೇಶ್, ಪೂಜಿತ್ ಕುಮಾರ್, ಕಾರ್ ಮಲ್ಲಪ್ಪ, ತೋಟದಪ್ಪ ಬಸವರಾಜು, ಕುರುಬೂರು ಶಿವು, ವಾಟಾಳ್ ನಾಗೇಂದ್ರ ಪ್ರಸಾದ್, ವಕೀಲ ಜ್ಞಾನೇಂದ್ರ ಮೂರ್ತಿ, ಎಲ್‌ಐಸಿ ಪ್ರಕಾಶ್, ಪಂದ್ಯಾವಳಿ ಆಯೋಜಕರಾದ ಪ್ರವೀಣ್, ಚೇತನ್, ಮಂಜುನಾಥಸ್ವಾಮಿ, ಮಹೇಶ್, ಪವನ್, ಶಿವಶಂಕರ್ ಸ್ಪೋರ್ಟ್ಸ್ ಅಕಾಡೆಮಿಯ ನವೀನ್, ಶ್ರೀಕಾಂತ್, ಮಧು, ನಿತಿನ್, ಗ್ಯಾಸ್ ಕುಮಾರ್, ನಿಖಿಲ್ ಮತ್ತಿತರರಿದ್ದರು.

ಆಟೋ ನಿಲ್ದಾಣದ ನಾಮಫಲಕ ಅನಾವರಣ

ತಿ.ನರಸೀಪುರ, ಡಿ.14– ಸಾರ್ವಜನಿಕರಿಗೆ ತೊಂದರೆಯಾಗದ ರೀತಿ ಸೇವೆ ನೀಡುವಂತೆ ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ ಆಟೋ ಚಾಲಕರಿಗೆ ಕಿವಿಮಾತು ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮುಂಭಾಗ ಆಟೋ ನಿಲ್ದಾಣದ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಸಾರ್ವಜನಿಕ ಆಸ್ಪತ್ರೆಯಲ್ಲಿ ಆಟೋ ಸೌಲಭ್ಯ ರೋಗಿಗಳಿಗೆ ತುರ್ತಾಗಿ ಅಗತ್ಯ ಇರುವುದರಿಂದ ತಾತ್ಕಾಲಿಕವಾಗಿ ಪುರಸಭೆ ವತಿಯಿಂದ ನಿಲ್ದಾಣ ಕಲ್ಪಿಸಿಕೊಡಲಾಗಿದೆ. ರಸ್ತೆ ಬದಿ ನಿಲ್ದಾಣ ಮಾಡಿಕೊಟ್ಟಿರುವುದರಿಂದ ಸಂಚಾರ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಆಟೋಗಳ ಓಡಾಟವಿರಲಿ ಎಂದು ಸಲಹೆ ನೀಡಿದರು.

ಪುರಸಭೆ ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿ ಮಾತನಾಡಿ, ಪಟ್ಟಣದ ವ್ಯಾಪ್ತಿಯಲ್ಲಿ ನಿವೇಶನದ ಕೊರತೆ ಇರುವುದರಿಂದ ಯಾವುದೇ ಆಟೋ ನಿಲ್ದಾಣಗಳಿಗೆ ಸೂಕ್ತ ಸ್ಥಳಾವಕಾಶ ಕೊಡಲು ಸಾಧ್ಯವಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಸರ್ಕಾರಿ ಖಾಲಿ ನಿವೇಶಗಳನ್ನು ಪತ್ತೆ ಹಚ್ಚಿ ನಿಲ್ದಾಣಗಳಿಗೆ ಅವಕಾಶ ಮಾಡಿಕೊಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಶ್, ಪುರಸಭೆ ಸದಸ್ಯ ಮೆಡಿಕಲ್ ನಾಗರಾಜ್, ಮುಖಂಡರಾದ ಪ್ರಕಾಶ್, ಆಟೋ ಚಾಲಕರ ಸಂಘದ ಅಧ್ಯಕ್ಷ ಮಂಜುನಾಥ್, ಮಹದೇವ ಭೈರಾಪುರ, ಮರಿಸ್ವಾಮಿ, ಮಹೇಶ, ಮಲ್ಲೇಶ, ಪೊಲೀಸ್ ಸಿದ್ದರಾಜು, ಹೆಳವರ ಹುಂಡಿ ರಮೇಶ್, ಮಂಟ ಲಿಂಗಣ್ಣ, ಕನಕ ರಾಜ್, ಅಂಗಡಿ ಪ್ರಕಾಶ್, ಅನ್ವರ್ ಪಾಷಾ ಇನ್ನಿತರರಿದ್ದರು.


ಆಟೋ ನಿಲ್ದಾಣದ ನಾಮಫಲಕವನ್ನು ಸಿಪಿಐ ಧನಂಜಯ ಅನಾವರಣಗೊಳಿಸಿದರು.

ರೈತರು ಸಾವಯವ ಕೃಷಿಗೆ ಆದ್ಯತೆ ನೀಡಿ

ರಾಜ್ಯ ರೈತ ಕಲ್ಯಾಣ ಸಂಘ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ್‌ಗೌಡ

ಸರಗೂರು, ಡಿ.14– ರೈತರು ರಾಸಾಯನಿಕ ಮುಕ್ತ ಸಾವಯವ ಕೃಷಿಗೆ ಆದ್ಯತೆ ನೀಡಿ ಎಂದು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ್‌ಗೌಡ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹೆಚ್.ಡಿ.ಕೋಟೆಯ ಅಂಬೇಡ್ಕರ್ ಭವನದಲ್ಲಿ ಡಿ.23ರಂದು ನಡೆಯುವ ರೈತರ ಹಬ್ಬ ಹಾಗೂ ರಾಷ್ಟ್ರೀಯ ರೈತ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಅನ್ನದ ಋಣ ಮಣ್ಣಿನ ಋಣ ಎಂದಿಗೂ ತೀರಿಸಲಾಗದು. ರೈತ ಈ ದೇಶದ ಆಸ್ತಿ ರೈತ ಬೆಳೆ ಬೆಳೆದರೆ ಮಾತ್ರ ಜಗದ ಹಸಿವನ್ನು ನೀಗಿಸಲು ಸಾಧ್ಯ ಎಂದರು.

ಮಣ್ಣಿನ ಬಗ್ಗೆ ಆಲಸ್ಯ ಬೇಡ. ಮನುಷ್ಯ ಸತ್ತರೆ ಮಣ್ಣಿಗೆ ಮಣ್ಣು ಸತ್ತರೆ ಎಲ್ಲಿಗೆ ಎಂದ ಅವರು ಬಂಗಾರದಂತ ಭೂಮಿ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಇದನ್ನು ಅರಿತು ಪ್ರತಿಯೊಬ್ಬರೂ ಮಣ್ಣನ್ನು ರಕ್ಷಿಸುವ ಔದಾರ್ಯ ಬೆಳಸಿಕೊಳ್ಳಬೇಕು ಎಂದರು.

ಅನ್ನದಾತರ ಋಣ ತೀರಿಸಲು ಹೆಚ್.ಡಿ. ಕೋಟೆಯಲ್ಲಿ ರೈತರ ಹಬ್ಬ ಹಾಗೂ ರಾಷ್ಟ್ರೀಯ ರೈತ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿದೆ. ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಿ ಯಶಸ್ವಿಗೊಳಿಸಿ ಎಂದರು.

ಈ ವೇಳೆ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ರಾಜ್ಯ ರೈತ ಕಲ್ಯಾಣ ಸಂಘ ಪದಾಧಿಕಾರಿಗಳು ಹಾಗೂ ರೈತ ಬಾಂಧವರು ಉಪಸ್ಥಿತರಿದ್ದರು.


ಕಾರ್ಯಕ್ರಮದ ಆಹ್ವಾನ ಪತ್ರಿಕೆ ಬಿಡುಗಡೆಗೊಳಿಸಲಾಯಿತು

ಪ್ರತಿಯೊಬ್ಬರೂ ನದಿಗಳ ಸ್ವಚ್ಛತೆ, ಸಂರಕ್ಷಣೆಗೆ ಮುಂದಾಗಿ

ಕಪಿಲಾ ಆರತಿ ಕಾರ್ಯಕ್ರಮದಲ್ಲಿ ಶ್ರೀವಚನಾನಂದ ಸ್ವಾಮೀಜಿ



ನಂಜನಗೂಡಿನಲ್ಲಿ ಯುವ ಬ್ರಿಗೇಡ್ ವತಿಯಿಂದ ಕಪಿಲಾ ಆರತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು

ನಂಜನಗೂಡು, ಡಿ.14– ನದಿ ತೀರದಲ್ಲಿ ನಮ್ಮ ನಾಗರಿಕತೆ ಜನ್ಮ ತಾಳುವ ಮೂಲಕ ನಮ್ಮ ಆಚಾರ, ವಿಚಾರ, ಪರಂಪರೆ ನದಿಯೊಂದಿಗೆ ಬೆಸೆದುಕೊಂಡಿದೆ. ಆದ್ದರಿಂದ ನಮ್ಮ ದೇಶ, ನಾಡು ಶುದ್ಧಿಯಾಗಿರಲು ನದಿಗಳನ್ನು ಸ್ವಚ್ಛಗೊಳಿಸಿ ಸಂರಕ್ಷಿಸುವ ಕೆಲಸಕ್ಕೆ ಮುಂದಾಗಬೇಕಿದೆ ಎಂದು ಶ್ರೀವಚನಾನಂದ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಯುವ ಬ್ರಿಗೇಡ್ ವತಿಯಿಂದ ಏರ್ಪಡಿಸಿದ್ದ ಕಪಿಲಾ ಆರತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಮುದ್ರ ಮಂಥನದ ವೇಳೆ ಮೊದಲು ಬಂದ ವಿಷವನ್ನು ಕುಡಿದು ಶಿವ ವಿಷಕಂಠ, ಶ್ರೀಕಂಠೇಶ್ವರನೆಂದು ಹೆಸರು ಪಡೆದು ನಂಜನಗೂಡು ಪುಣ್ಯ ಕ್ಷೇತ್ರವಾಗಿದೆ. ನಂತರ ಬಂದ ಅಮೃತ ಬಿಂದುಗಳು ಹರಿದ್ವಾರ, ಉಜ್ಜೈನಿ, ಋಷಿಕೇಶ, ನಾಸಿಕ ಪ್ರಯಾಗ್ ರಾಜ್ ಕ್ಷೇತ್ರಗಳಲ್ಲಿ ಹರಡಿ ಪುಣ್ಯಕ್ಷೇತ್ರ ಎನಿಸಿವೆ. ಈ 5 ನದಿ ತೀರದಲ್ಲಿ ಕುಂಭಮೇಳಗಳು ಜರುಗುತ್ತವೆ. ಕುಂಭಮೇಳದ ವೇಳೆ ಪುಣ್ಯಸ್ನಾನ ಮಾಡಿದರೆ ನಮಗೆ ಅಮರತ್ವ, ಮೋಕ್ಷ ಪ್ರಾಪ್ತಿಯಾಗಲಿದೆ ಎಂಬ ನಂಬಿಕೆ ಇದೆ. ದೇಶದಲ್ಲಿ 450ಕ್ಕೂ ಹೆಚ್ಚು ನದಿಗಳಿದ್ದು, ಎಲ್ಲಾ ನದಿಗಳ ತೀರದಲ್ಲೂ ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳು ಬೆಸೆದುಕೊಂಡಿರುವ ಜೊತೆಗೆ ಅದ್ಭುತ ಸುಂದರ ತಾಣಗಳನ್ನಾಗಿ ನಿರ್ಮಿಸಿವೆ. ನಮ್ಮ ದೇಹ ಆರೋಗ್ಯವಾಗಿರಲು ಹೇಗೆ ನಮ್ಮ ನರ ನಾಡಿಗಳು ಶುದ್ಧಿಯಾಗಿರಬೇಕೋ ಹಾಗೆಯೇ ನಮ್ಮ ದೇಶ ನಾಡು ಸುಂದರವಾಗಿರಲು ನದಿಗಳು ಸ್ವಚ್ಛವಾಗಿರಬೇಕು. ನದಿಗಳು ನಾವು ಮಾಡುವ ಪಾಪವನ್ನು ಸ್ವೀಕರಿಸಿ ನಮಗೆ ಅಮೃತ ನೀಡುತ್ತವೆ. ಆದ್ದರಿಂದ ನದಿಗಳಿಗೆ ಬಟ್ಟೆ ಬರೆಗಳನ್ನು ಎಸೆದು ಮಲೀನಗೊಳಿಸದೆ ಸ್ವಚ್ಛವಾಗಿಟ್ಟುಕೊಂಡು ನದಿಗಳ ಸಂರಕ್ಷಣೆ ಮಾಡುವ ಕಾರ್ಯಕ್ಕೆ ನಾವೆಲ್ಲಾ ಮುಂದಾಗಬೇಕು ಎಂದು ಕರೆ ನೀಡಿದರು.

ಗಂಗಾ ಆರತಿ ನೋಡಲು ನಾವು ಕಾಶಿಗೆ ತೆರಳಬೇಕಾಗಿತ್ತು. ಆದರೆ ಇಲ್ಲಿನ ಯುವ ಬ್ರಿಗೇಡ್ ತಂಡ ಉತ್ತರ ಕಾಶಿಯಂತೆಯೇ, ದಕ್ಷಿಣ ಕಾಶಿ ನಂಜನಗೂಡಿನಲ್ಲೂ ಸಹ ಕಪಿಲಾ ಆರತಿ ಕಾರ್ಯಕ್ರಮ ಆಯೋಜಿಸುವ ಮೂಲಕ ಭಕ್ತರಿಗೆ ಕಪಿಲಾ ಆರತಿ ನೋಡುವ ಸೌಭಾಗ್ಯ ಕಲ್ಪಿಸಿದೆ. ನಂಜನಗೂಡಿನ ಕಪಿಲಾ ಆರತಿಯಿಂದ ಪ್ರೇರಣೆಗೊಂಡು ನಾಡಿನ ಎಲ್ಲೆಡೆ ನದಿ ತೀರಗಳಲ್ಲಿ ಆರತಿ ಕಾರ್ಯಕ್ರಮಗಳನ್ನು ಆಯೋಜಿಸುವಂತಾಗಿದೆ. ನಾವು ಸಹ ತುಂಗಭದ್ರಾ ಆರತಿ ಕಾರ್ಯಕ್ರಮ ಆಯೋಜಿಸುತ್ತಿದ್ದೇವೆ ಎಂದರು.

ಮಲೆ ಮಹದೇಶ್ವರ ಬೆಟ್ಟದ ಸಾಲೂರು ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಯುವ ಬ್ರಿಗೇಡ್ ತಂಡ ಕಪಿಲಾ ನದಿಯಂತೆಯೇ ಮಲೆ ಮಹದೇಶ್ವರ ಬೆಟ್ಟದ ಅಂತರಗಂಗೆಯಲ್ಲೂ ಸಹ ಸ್ವಚ್ಛತಾ ಕಾರ್ಯ ನಡೆಸುವ ಮೂಲಕ ತನ್ನ ಸೇವಾ ಕಾರ್ಯವನ್ನು ನಾಡಿನ ಎಲ್ಲೆಡೆ ನದಿಗಳ ಸ್ವಚ್ಛತೆ ಕಾರ್ಯದಲ್ಲಿ ನಿರತವಾಗಿದೆ. ಅವರ ಸ್ವಚ್ಛತೆ ಕಾರ್ಯದಿಂದ ಇತರರು ಪ್ರೇರಣೆಗೊಂಡು ನದಿಗಳ ಸ್ವಚ್ಛತೆಗೆ ಮುಂದಾಗಬೇಕು. ಪುಣ್ಯಕ್ಷೇತ್ರಗಳಲ್ಲಿ ಬಟ್ಟೆ ಬರೆಗಳನ್ನು ಎಸೆದಾಕ್ಷಣ ನಮ್ಮ ಪಾಪ ಕಳೆಯುವುದಿಲ್ಲ. ಆದ್ದರಿಂದ ಭಕ್ತರು ಬಟ್ಟೆ ಬರೆಗಳನ್ನು ನದಿಗಳಿಗೆ ಬಿಸಾಡದೆ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದರು.

ಇದೇ ವೇಳೆ ಡಾ.ಚಂದ್ರಶೇಖರ್, ಡಾ.ಗುರು, ಮುಡಗೂರು ಮಠದ ಇಮ್ಮಡಿ ಉದ್ದಾನ ಸ್ವಾಮೀಜಿ, ಯುವ ಬ್ರಿಗೇಡ್ ದಕ್ಷಿಣ ಭಾರತ ಸಂಚಾಲಕ ಚಂದ್ರಶೇಖರ್, ಸುನೀಲ್, ಕೃಷ್ಣಜೋಯಿಸ್, ಕಿಶೋರ್, ಚಂದನ್, ಶ್ರೀನಿವಾಸ್, ನಿತಿನ್, ಗಿರೀಶ್, ರವಿ, ಮಹದೇವ್, ಶ್ರೀಕಂಠ, ರವಿಶಾಸ್ತ್ರಿ, ಅಭಿ, ಯಶಸ್, ಪುನೀತ್, ದೀಪು ಸೇರಿದಂತೆ ಯುವ ಬ್ರಿಗೇಡ್ ತಂಡದವರು ಮತ್ತು ಭಕ್ತರು ಉಪಸ್ಥಿತರಿದ್ದರು.

> **ಕಪಿಲಾ ಆರತಿ ಕಣ್ತುಂಬಿಕೊಂಡ ಜನಸಾಗರ**
>
> ಬೆಳಗ್ಗೆ ಕಪಿಲಾ ನದಿ ತೀರದಲ್ಲಿರುವ ಐತಿಹಾಸಿಕ ಹದಿನಾರು ಕಾಲು ಮಂಟಪದ ಮಣಿಕರ್ಣಿಕ ಘಟ್ಟದ ಬಳಿ ಇರಿಸಲಾಗಿದ್ದ ಶಿವಲಿಂಗಕ್ಕೆ ಅಭಿಷೇಕ ನಡೆಸಲಾಯಿತು. ನಂತರ ಲೋಕ ಕಲ್ಯಾಣಾರ್ಥ ಹೋಮ ನೆರವೇರಿಸಲಾಯಿತು. ಬಳಿಕ ರಾತ್ರಿ 7.30ಕ್ಕೆ ನದಿ ಮಧ್ಯಭಾಗದಲ್ಲಿ ಸ್ಥಾಪಿಸಲಾಗಿದ್ದ ವೇದಿಕೆಗೆ ತೆರಳಿ ವಚನಾನಂದ ಸ್ವಾಮೀಜಿ, ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಮುಡಗೂರು ಮಠದ ಶ್ರೀ ಉದ್ದಾನ ಸ್ವಾಮೀಜಿ, ಕಪಿಲಾ ಆರತಿಗೆ ಚಾಲನೆ ನೀಡಿದರು.
>
> ಕೇಸರಿ ತೋರಣ, ಕೇಸರಿ ಧ್ವಜ, ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದ ಕಪಿಲಾ ನದಿ ಸ್ನಾನಘಟ್ಟದಲ್ಲಿ ಕೃಷ್ಣ ಜೋಯಿಸ್ ನೇತೃತ್ವದ ಐವರು ಋತ್ವಿಜರು ಕಪಿಲಾ ಮಾತೆಗೆ ಧೂಪ, ದೀಪ, ಕರ್ಪೂರದ ಆರತಿಯನ್ನು ವಾರಣಾಸಿ ಮಾದರಿಯಲ್ಲೆ ಬೆಳಗಿದರು. ನೆರೆದಿದ್ದ ಭಕ್ತರು ಶ್ರದ್ಧಾಭಕ್ತಿಯಿಂದ ಕಪಿಲಾ ನದಿ ತೀರದ ಸೋಪಾನಕಟ್ಟೆಗಳ ಮೇಲೆ ಒಂದು ಲಕ್ಷ ದೀಪಗಳನ್ನು ಹಚ್ಚುವ ಮೂಲಕ ಭಕ್ತಿ ಭಾವ ಮೆರೆದರು.
>
> ಇದೇ ಮೊದಲ ಬಾರಿಗೆ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ಹಾಗೂ ಕಪಿಲಾ ನದಿ, ಕಪಿಲಾ ಆರತಿ ಇತಿಹಾಸ ಸಾರುವ ಲೇಸರ್ ಶೋ ಮತ್ತು ಬಾಣಬಿರುಸುಗಳು ಭಕ್ತರ ಮನಸೂರೆಗೊಂಡಿತು. ವಿಶೇಷವಾಗಿ ಹೆಜ್ಜಿಗೆ ಸೇತುವೆ ಬಳಿ ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗಿತ್ತು. ನೆರೆದಿದ್ದ ಲಕ್ಷಾಂತರ ಭಕ್ತರು ಕಪಿಲಾ ಆರತಿ ಕಣ್ತುಂಬಿಕೊಂಡರು.

ರಾಷ್ಟ್ರೀಯ ಲೋಕ ಅದಾಲತ್: 6176 ಪ್ರಕರಣಗಳು ಇತ್ಯರ್ಥ



ಹುಣಸೂರು, ಡಿ.14– ನಗರದ 5 ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ವ್ಯಾಜ್ಯ ಪೂರ್ವ ಹಾಗೂ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಒಟ್ಟು 6176 ಪ್ರಕರಣಗಳು ಇತ್ಯರ್ಥವಾಗಿದೆ ಎಂದು 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗೋವಿಂದಯ್ಯ ತಿಳಿಸಿದರು.

ಒಟ್ಟು 40 ಚೆಕ್ ಅಮಾನ್ಯ ಪ್ರಕರಣಗಳು 1,48,90,300 ರೂ.ಗಳಿಗೆ, ಹಣ ವಸೂಲಾತಿ 7 ಪ್ರಕರಣಗಳು 12,76,500 ರೂ. ಹಾಗೂ ಮೋಟಾರು ವಾಹನ ಕಾಯ್ದೆ ಉಲ್ಲಂಘನೆಯ 3 ಪ್ರಕರಣಗಳು 10,20,200 ರೂ.ಗಳಿಗೆ ಇತ್ಯಾರ್ಥವಾಗಿದೆ. ಒಟ್ಟಾರೆ ಎಲ್ಲಾ ಪ್ರಕರಣಗಳು 8.37 ಕೋಟಿ ರೂ.ಗಳಿಗೆ ಪ್ರಕರಣಗಳು ಇತ್ಯರ್ಥವಾಗಿವೆ ಎಂದರು.

ತಮಗೆ ಹುಟ್ಟಿದ ಮಗುವಿಗೆ ತಾಯಿ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ವಂಶಿಕ ಎಂದು ಹೆಸರಿಟ್ಟರೆ ತಂದೆ ಆಧಿ ಎಂದು ಹೆಸರಿಟ್ಟು ಪ್ರತಿಷ್ಠೆಯಿಂದ ದಂಪತಿಗಳಿಬ್ಬರೂ ದೂರವಾಗಿ ವಿಚ್ಛೇದನಕ್ಕೆ ನ್ಯಾಯಾಲಯ ಮೆಟ್ಟಿಲೇರಿ ದ್ದರು. ಈ ವೇಳೆ 8ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶ ಗೋವಿಂದಯ್ಯ ಮತ್ತಿತರ ನ್ಯಾಯಾಧೀಶರು ನಿಮ್ಮ ಯಾವುದೇ ಹೆಸರು ಬೇಡ ನಿಮ್ಮಿಬ್ಬರಿಗೆ ಮೆಚ್ಚುವಂತಹ ಹೆಸರು ಇಡುತ್ತೇವೆ ಎಂದು ಹೇಳಿ ಮಗುವಿಗೆ ಆರ್ಯವರ್ಧನ್ ಎಂದು ನಾಮಕರಣ ಮಾಡಿ ಪ್ರಕರಣಕ್ಕೆ ತೆರೆ ಎಳೆದರು.

ಅಲ್ಲದೇ ಅದಾಲತ್‌ನಲ್ಲಿ ಹೆಣ್ಣು ಮಗುವಾಗಿದ್ದಕ್ಕೆ ಪತ್ನಿ ಬೇಡವೆಂದು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ ಪ್ರಕರಣ, ಕ್ಷುಲ್ಲಕ ಕಾರಣಕ್ಕೆ ದೂರವಾಗಿದ್ದ ದಂಪತಿ, ಬೇರೆಯವರ ಮಾತಿನಿಂದ ಕಳೆದ 5 ತಿಂಗಳಿಂದ ದೂರವಾಗಿದ್ದ ದಂಪತಿಗಳು ಒಂದಾದರು.

ಇದೇ ವೇಳೆ ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಜಯಬುನ್ನೀಸಾ, ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಪೂಜಾ ಬಿಳಕೇರಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಅನಿಲ್, ಮೂವರು ಎಪಿಪಿಗಳಾದ ಪಾರ್ವತಿ, ಅನಿತಾ, ಸೌಮ್ಯ, ವಕೀಲರ ಸಂಘದ ಅಧ್ಯಕ್ಷ ಶಿವಣ್ಣೇಗೌಡ, ಉಪಾಧ್ಯಕ್ಷ ಹರೀಶ್ ಕುಮಾರ್, ವಕೀಲ ಮುರಳೀಧರ್ ಸೇರಿದಂತೆ ಇತರರಿದ್ದರು.

ಬಿಜೆಪಿ ಹಿರಿಯ ಮುಖಂಡ, ಗಾಯಕ, ಪ್ರಾಣಿಪ್ರಿಯ ಬಿ.ಪಿ.ಮಂಜುನಾಥ್‌ಗೆ 'ಗಾನ ಗಂಧರ್ವ' ಪ್ರಶಸ್ತಿ ಪ್ರದಾನ



ಹಿರಿಯ ಕಲಾವಿದ, ಕರ್ನಾಟಕ ರಾಜ್ಯ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಅವರಿಗೆ 'ಗಾನ ಗಂಧರ್ವ' ಪ್ರಶಸ್ತಿಯನ್ನು ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಶನಿವಾರ ಪ್ರದಾನ ಮಾಡಿದರು.

ಮೈಸೂರು, ಡಿ.14(ಎಸ್‌ಪಿಎನ್)– ಹಿರಿಯ ಕಲಾವಿದ, ಕರ್ನಾಟಕ ರಾಜ್ಯ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಅವರಿಗೆ 'ಗಾನ ಗಂಧರ್ವ' ಪ್ರಶಸ್ತಿಯನ್ನು ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಶನಿವಾರ ಪ್ರದಾನ ಮಾಡಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಕಲಾಕೂಟ, ಕಾವ್ಯಲೋಕ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದ ಬಿ.ಪಿ.ಮಂಜುನಾಥ್ ಅವರಿಗೆ 'ಗಾನಗಂಧರ್ವ' ಪ್ರಶಸ್ತಿಯನ್ನು ನೀಡಿ, ಗೌರವಿಸಿದರು.

ನಂತರ ಮಾತನಾಡಿದ ಅವರು, ಬಿ.ಪಿ.ಮಂಜುನಾಥ್ 1985ರಲ್ಲಿ ಭಾಜಪ ಸೇರ್ಪಡೆಗೊಂಡು ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಿದ್ದಾರೆ. ಅಲ್ಲದೆ, ಬಿಜೆಪಿಯ ಸಭೆ–ಸಮಾರಂಭದಲ್ಲಿ ಹಲವು ದೇಶ ಭಕ್ತಿಗೀತೆಗಳನ್ನು ಹಾಡಿ, ಪಕ್ಷದ ಮುಖಂಡರು, ಕಾರ್ಯಕರ್ತರನ್ನು ತಮ್ಮತ್ತ ಆಕರ್ಷಿಸುತ್ತಿದ್ದರು. ಇದಕ್ಕೂ ಮೊದಲು ಮೈಸೂರಿನ ಪ್ರತಿಯೊಂದು ಬಡಾವಣೆಯಲ್ಲೂ ಆರ್ಕೆಸ್ಟ್ರಾದಲ್ಲಿ ಹಾಡಿ ಜನಪ್ರಿಯ ಗಾಯಕರಾಗಿದ್ದರು. 1957ರಲ್ಲಿ ಜನಿಸಿರುವ ಮಂಜುನಾಥ್, ಮೈಸೂರಿಗರಿಗೆ ಆರ್ಕೆಸ್ಟ್ರಾ ಮಂಜು ಎಂದೇ ಖ್ಯಾತಿಗಳಿಸಿದ್ದಾರೆ ಎಂದು ಬಣ್ಣಿಸಿದರು.

ಗಾಯನ ಕ್ಷೇತ್ರವಲ್ಲದೆ, ರಾಜಕೀಯ ಕ್ಷೇತ್ರದಲ್ಲೂ ಗುರುತಿಸಿಕೊಂಡು ನರಸಿಂಹರಾಜ ಕ್ಷೇತ್ರದಲ್ಲಿ ಭಾಜಪ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. 1970–80ರ ದಶಕದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಆ ಅಭ್ಯರ್ಥಿಗಳು ಸಾರ್ವಜನಿಕವಾಗಿ ಅಪಹಾಸ್ಯಕ್ಕೆ ಗುರಿಯಾಗಬೇಕಾಗಿತ್ತು ಜನ ಸಂಘ ಭಾಜಪ ಆಗಿ ಪರಿವರ್ತನೆಗೊಂಡ ನಂತರವೂ ಗ್ರಾಪಂನಿಂದ ಸಂಸತ್‌ವರೆಗೂ ನಮ್ಮ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದರು. ಆದರೆ, ಗೆಲುವು ಎಂಬುದು ಮರೀಚಿಕೆಯಾಗಿತ್ತು ಎಂದು ಬಿಜೆಪಿ ಪಕ್ಷದ ಬೆಳೆದು ಬಂದ ಹಾದಿಯನ್ನು ಸ್ಮರಿಸಿದರು.

ಈಗ ದೇಶದ ಬಹುತೇಕ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಭಾಜಪ ಸಾಕಷ್ಟು ಬೆಳವಣಿಗೆ ಕಂಡಿದೆ. ಒಂದು ವಿಚಾರಕ್ಕೆ, ಸಿದ್ಧಾಂತಕ್ಕೆ ಬದ್ಧರಾಗಿ ರಾಜಕೀಯ ಕ್ಷೇತ್ರದಲ್ಲಿರುವುದು ಸಾಮಾನ್ಯ ಸಂಗತಿಯಲ್ಲ. ಆದರೆ, ಬಿ.ಪಿ.ಮಂಜುನಾಥ್ ಮತ್ತು ನಾನು ಒಂದು ವಿಚಾರಕ್ಕೆ ಬದ್ಧರಾಗಿ ಹಲವು ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇವೆ. ಭಾಜಪದಲ್ಲಿ ಸಮಾಜ ದೇವೋಭವ, ರಾಷ್ಟ್ರದೇವೋಭವ ಹಾಗೂ ದೇಶ ಮೊದಲು ಎಂಬ ವಿಚಾರಗಳ ಮುಂದಿಟ್ಟುಕೊಂಡು ರಾಜಕಾರಣ ಮಾಡುವುದು ಪ್ರಸ್ತುತ ಸನ್ನಿವೇಶದಲ್ಲಿ ಕಷ್ಟದ ಕೆಲಸ ಎಂದರು.

ಬಿ.ಪಿ.ಮಂಜುನಾಥ್, ಗಾಯನ, ರಾಜಕೀಯ ಕ್ಷೇತ್ರವಲ್ಲದೆ, ಸಾಕುಪ್ರಾಣಿಗಳನ್ನು ಪೋಷಿಸುವುದರಲ್ಲೂ ಆಸಕ್ತಿ ಹೊಂದಿದ್ದಾರೆ. ಇವೆಲ್ಲವನ್ನೂ ಪರಿಗಣಿಸಿ, ಕನ್ನಡ ಸಾಹಿತ್ಯ ಕಲಾಕೂಟ, ಕಾವ್ಯಲೋಕ ಟ್ರಸ್ಟ್ ಸಹಯೋಗದೊಂದಿಗೆ 'ಗಾನಗಂಧರ್ವ' ಬಿರುದು ನೀಡಿ, ಗೌರವಿಸಿರುವುದು ಅಭಿನಂದನಾರ್ಹ. ಇವರೊಂದಿಗೆ ಅವರ ಧರ್ಮಪತ್ನಿಯನ್ನು ಸನ್ಮಾನಿಸಿರುವುದು ಸಂತೋಷದ ಸಂಗತಿ ಎಂದರು.

ವೇದಿಕೆಯಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಲೇಖಕ ಅಂಶಿಪ್ರಸನ್ನಕುಮಾರ್, ವಕೀಲ ಹರೀಶ್ ಹೆಗಡೆ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕಾವ್ಯಲೋಕ ಟ್ರಸ್ಟ್ ಅಧ್ಯಕ್ಷ ಡಾ.ಹೆಚ್.ಬಿ. ರಾಜಶೇಖರ್, ಕವಿಯತ್ರಿ ಡಾ.ಲತಾರಾಜ ಶೇಖರ್, ಶರಣಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ ಸೇರಿದಂತೆ ಇತರರಿದ್ದರು.

ಶಾಂತಿನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಎಡಿಸಿ ದಿಢೀರ್ ಭೇಟಿ

ಕಾಲರಾ, ವಾಂತಿ-ಭೇದಿ ಬಗ್ಗೆ ಪರಿಶೀಲನೆ



ಮೈಸೂರು, ಡಿ. 14(ಆರ್‌ಕೆ)– ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು ಇಂದು ಮೈಸೂರಿನ ಶಾಂತಿನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಕಾಲರಾದಿಂದ ಉಂಟಾಗಿದ್ದ ವಾಂತಿ–ಭೇದಿ ಪರಿಸ್ಥಿತಿ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮದ ಬಗ್ಗೆ ಪರಿಶೀಲನೆ ನಡೆಸಿದ ಅವರು, ಆ ವೇಳೆ ಕೇಂದ್ರದಲ್ಲಿದ್ದ ರೋಗಿಗಳು ಹಾಗೂ ಸಂಬಂಧಿಕರೊಂದಿಗೆ ಸಮಾಲೋಚನೆ ನಡೆಸಿದರು.

ಕುಡಿಯುವ ನೀರು ಸರಬರಾಜು, ಸ್ವಚ್ಛತೆ, ಆರೋಗ್ಯ ತಪಾಸಣೆಯ ಪ್ರಗತಿ ಪರಿಶೀಲಿಸಿದ ಎಡಿಸಿ ಅವರು, ವಾಂತಿ–ಭೇದಿ ಪ್ರಕರಣಗಳು ಮರುಕಳಿಸದಂತೆ ಅಗತ್ಯ ಕ್ರಮ ಕೈಗೊಂಡು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೂಕ್ತ ಚಿಕಿತ್ಸೆಗೆ ನೀಡಬೇಕೆಂದೂ ಅವರು ಇದೇ ಸಂದರ್ಭ ತಿಳಿಸಿದರು.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ವೈದ್ಯಕೀಯ ತಪಾಸಣೆ ನಡೆಸಿ ಚಿಕಿತ್ಸೆ ನೀಡಬೇಕು, ಬಡಾವಣೆ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಬೇಕೆಂದ ಡಾ. ಪಿ.ಶಿವರಾಜು, ಏನಾದರೂ ಸಮಸ್ಯೆ ಇದ್ದಲ್ಲಿ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ನಿವಾಸಿಗಳ ಆರೋಗ್ಯ ಸುಧಾರಣೆಗೆ ಕ್ರಮ ಕೈಗೊಳ್ಳುವಂತೆಯೂ ಕೇಂದ್ರದ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಒಳ ಮೀಸಲಾತಿ ವಿರೋಧಿ ಧೋರಣೆ ಖಂಡಿಸಿ ಶಾಸಕರ ಮನೆ ಮುಂದೆ ತಮಟೆ ಚಳವಳಿ ಯತ್ನ; ಪೊಲೀಸರ ವಶಕ್ಕೆ



ಮಾದಿಗ ಮತ್ತು ಮಾದಿಗ ಉಪಜಾತಿಗಳ ಸಂಘಟನೆಗಳ ಒಕ್ಕೂಟದ ವತಿಯಿಂದ ಎನ್‌ಆರ್ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಆಪ್ತ ಸಹಾಯಕರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಡಿ.14(ಜಿಎ)– ಸರ್ಕಾರ ಒಳ ಮೀಸಲಾತಿ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಮಾದಿಗ ಮತ್ತು ಉಪಜಾತಿಗಳ ಸಂಘಟನೆಗಳ ಒಕ್ಕೂಟವು ಶನಿವಾರ ಸ್ಥಳೀಯ ಎಲ್ಲಾ ಶಾಸಕರ ಮನೆ ಮುಂದೆ ತಮಟೆ ಚಳುವಳಿ ನಡೆಸಲು ಯತ್ನಿಸಿತು. ಆದರೆ, ಇದಕ್ಕೆ ಅವಕಾಶ ನೀಡದ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು.

ಉದಯಗಿರಿಯ ಖಾಸಗಿ ಹೋಟೆಲ್ ಬಳಿ ಪ್ರತಿಭಟನಾಕಾರರು ಜಮಾಯಿಸಿ, ಶಾಸಕ ತನ್ವೀರ್ ಸೇಠ್ ಮನೆಗೆ ತೆರಳಲು ಸಿದ್ಧರಾದಾಗ ಪೊಲೀಸರು ತಡೆದರು. ಅವರ ಮನೆ ಬಳಿಯ ವೃತ್ತದಲ್ಲಿ ಪ್ರತಿಭಟನೆ ನಡೆಸಬೇಕು ಎಂದು ಸೂಚಿಸಿದರು. ಸ್ಥಳಕ್ಕೆ ಶಾಸಕರ ಕಚೇರಿ ಸಿಬ್ಬಂದಿ ಆಗಮಿಸಿ ಮನವಿ ಪತ್ರ ಪಡೆದರು. ಮನವಿ ನೀಡುತ್ತಿದ್ದಂತೆ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು.

ಹೋರಾಟದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ನ್ಯಾಯ ಕೇಳಲು ಬಂದವರ ಮೇಲೆ ಯಾಕೆ ದಬ್ಬಾಳಿಕೆ ಮಾಡುತ್ತಿದ್ದೀರಿ. ಇತರೆ ಶಾಸಕರ ಮನೆಗೂ ತೆರಳಿ ಮನವಿ ನೀಡಲು ಅವಕಾಶ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಪೊಲೀಸರು ಅವರ ಮನವಿಯನ್ನು ಪುರಸ್ಕರಿಸದೆ, ಅವರನ್ನು ಬಂಧಿಸಿ ನಗರ ಸಶಸ್ತ್ರ ಮೀಸಲು ಪಡೆಯ ಮೈದಾನಕ್ಕೆ ಕರೆತಂದರು. ಮನವಿ ನೀಡಲು ಅವಕಾಶ ನೀಡದ್ದನ್ನು ಖಂಡಿಸಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು, ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸಿದರು.

ನಂತರ ಎಲ್ಲಾ ಶಾಸಕರ ಕಚೇರಿಯ ಸಿಬ್ಬಂದಿ ಹಾಗೂ ಮುಖ್ಯಮಂತ್ರಿಗಳ ಪರವಾಗಿ ಉಪತಹಶೀಲ್ದಾರ್ ಮೈದಾನಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು.

ಒಳ ಮೀಸಲಾತಿ ಜಾರಿಗೊಳಿಸುವಂತೆ ಸುಪ್ರೀಂಕೋರ್ಟ್ ತೀರ್ಪು ಬಂದು ಎರಡು ತಿಂಗಳು ಕಳೆದರೂ, ರಾಜ್ಯ ಸರ್ಕಾರ ವಿಳಂಬ ಧೋರಣೆ ಅನುಸರಿಸಿದೆ. ಕಾಟಾಚಾರಕ್ಕೆ ಆಯೋಗ ರಚಿಸಿ ಸುಮ್ಮನಾಗಿದೆ. ತಕ್ಷಣವೇ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಂಘಟನೆಯ ರಾಜ್ಯ ಸಹ ಸಂಚಾಲಕ ಡಾ. ಆನಂದ ಕುಮಾರ್, ಸಿ.ವಿ.ರಾಜಣ್ಣ ಮೈಸೂರು, ಸ್ವಾಮಿ ತಿಲಕ್ ನಗರ, ಶ್ರೀನಿವಾಸ್, ಅರಕಲವಾಡಿ ನಾಗೇಂದ್ರ, ಪುಟ್ಟಯ್ಯ ಹುಣಸೂರು, ರಾಚಪ್ಪ ಹುಣಸೂರು, ಗಂಗಯ್ಯ ರೈಲ್ವೆ, ಮಾದೇಶ ಮೆಕಟರುಮ, ಕರ್ಣ ಭಾಗವಹಿಸಿದ್ದರು.

ಮೈಸೂರು ಪ್ರವಾಸಿ ತಾಣ ವೀಕ್ಷಿಸಿದ ಕಾಶ್ಮೀರಿ ವಿದ್ಯಾರ್ಥಿಗಳು



ಮೈಸೂರು, ಡಿ. 14– ಮೈಸೂರು ಜಿಲ್ಲೆಯ ಅನೇಕ ಪ್ರವಾಸಿ ತಾಣಗಳನ್ನು ವೀಕ್ಷಿಸಿದ ಕಾಶ್ಮೀರಿ ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದರು.

ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಜಿಲ್ಲಾ ನೆಹರು ಯುವ ಕೇಂದ್ರಗಳ ಸಹಯೋಗದಲ್ಲಿ ಡಿ.14ರವರೆಗೆ ನಗರದ ರಾಜ್ಯ ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾಶ್ಮೀರಿ ಯುವಜನ ವಿನಿಮಯ ಕಾರ್ಯಕ್ರಮದ ಅಂಗವಾಗಿ ಬಂದ ವಿದ್ಯಾರ್ಥಿಗಳು ಪ್ರವಾಸಿ ತಾಣಗಳ ಕಣ್ತುಂಬಿಕೊಂಡರು.

ಗುರುವಾರ ಸಂತ ಫಿಲೋಮಿನ ಚರ್ಚ್, ಶ್ರೀರಂಗಪಟ್ಟಣ ತಾಲೂಕು ಕೃಷ್ಣರಾಜಸಾಗರ ಅಣೆಕಟ್ಟೆ ವೀಕ್ಷಿಸಿದರು. ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ಅರಮನೆ, ಶ್ರೀ ಜಯಚಾಮರಾಜೇಂದ್ರ ಮೃಗಾಲಯವನ್ನು ವೀಕ್ಷಿಸಿದರು. ಜಿಲ್ಲಾ ಯುವಜನ ಅಧಿಕಾರಿ ಅಭಿಷೇಕ್ ಎಸ್. ಚವರೆ, ಸುಷ್ಮಾಗವಾಲಿ, ಸತೀಶ್ ಪಡೋಡೆ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಡಿ.16ರಂದು ವಿದುಷಿ ಡಾ.ಸುಮ ಹರಿನಾಥ್‌ರಿಂದ ಭಕ್ತಿ ಸಂಗೀತ


ಹನುಮ ಜಯಂತಿ ಪ್ರಯುಕ್ತ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಆಯೋಜನೆ



ಮೈಸೂರು, ಡಿ.14–ನಗರದ ಅರಮನೆ ಕೋಟೆ ಉತ್ತರ ದ್ವಾರ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಮೂಹ ದೇವಾಲಯಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ವತಿಯಿಂದ ಶ್ರೀ ಹನುಮ ಜಯಂತಿ ಮಹೋತ್ಸವದ ಪ್ರಯುಕ್ತ ಡಿ.16ರಂದು ಸೋಮವಾರ ಸಂಜೆ 7ರಿಂದ 9.30ರವರೆಗೆ ವಿದುಷಿ ಡಾ.ಸುಮಾ ಹರಿನಾಥ್ ಅವರಿಂದ ಭಕ್ತಿ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇವರಿಗೆ ಪಕ್ಕವಾದ್ಯದಲ್ಲಿ ಮೃದಂಗದಲ್ಲಿ ವಿದ್ವಾನ್ ಶ್ಯಾಮ್ ಹಾಗೂ ವಯಲಿನ್‌ನಲ್ಲಿ ವಿದ್ವಾನ್ ಚೇತನ್ ಸಹಕರಿಸಲಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಭಕ್ತಾದಿಗಳ ಲೂಟಿ ಆರೋಪ: ಮೈಸೂರು ಕನ್ನಡ ವೇದಿಕೆಯಿಂದ ಪ್ರತಿಭಟನೆ

ಹೊರಗಿನಿಂದ ಬರುವ ಭಕ್ತಾಧಿಗಳ ಕಾಣಿಕೆ ಹಣ ದುರ್ಬಳಕೆಯಾಗುತ್ತಿದೆ ; ದೂರು



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಭಕ್ತಾದಿಗಳ ಹಣವನ್ನು ಲೂಟಿ ಮಾಡುತ್ತಿರುವ ಅಧಿಕಾರಿ ವರ್ಗ ಮತ್ತು ಸಿಬ್ಬಂದಿಗಳನ್ನು ಅಮಾನತುಗೊಳಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿಯ ಮುಂದೆ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.14(ಜಿಎ)–ಚಾಮುಂಡಿಬೆಟ್ಟದಲ್ಲಿ ಭಕ್ತಾದಿಗಳ ಹಣವನ್ನು ಲೂಟಿ ಮಾಡುತ್ತಿರುವ ಅಧಿಕಾರಿ ವರ್ಗ ಮತ್ತು ಸಿಬ್ಬಂದಿಗಳನ್ನು ಅಮಾನತುಗೊಳಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿಯ ಮುಂದೆ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಚಾಮುಂಡಿಬೆಟ್ಟದಲ್ಲಿ ಭಕ್ತಾದಿಗಳ ಸುಲಿಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇವೆಲ್ಲವನ್ನು ಕಂಡೂ ಧಾರ್ಮಿಕ ದತ್ತಿ ಇಲಾಖೆ ಮೌನವಾಗಿರುವುದನ್ನು ನೋಡಿದರೆ ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತಿದೆ. ನಂದಿ ಮೂರ್ತಿಯ ಕಡೆ ಹೋಗುವುದಕ್ಕೆ ದಾರಿ ಇನ್ನೂ ಕೂಡ ಸರಿಯಾಗಿಲ್ಲ. ಐದು ವರ್ಷಗಳಿಂದ ಈ ಕಾಮಗಾರಿ ನಡೆಯುತ್ತಲೇ ಇದೆ. ಇದರ ಬಗ್ಗೆ ಜನಪ್ರತಿನಿಧಿಗಳು, ಮುಜರಾಯಿ ಇಲಾಖೆಯವರು ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ. ಚಾಮುಂಡಿಬೆಟ್ಟದ ಚಪ್ಪಲಿ ಸ್ಟ್ಯಾಂಡ್‌ನಲ್ಲೂ ಲಕ್ಷಾಂತರ ರೂಪಾಯಿ ಲೂಟಿ ಮಾಡುತ್ತಿದ್ದಾರೆ. ಚಾಮುಂಡಿಬೆಟ್ಟದ ಲೆಕ್ಕಾಧಿಕಾರಿಗಳ ಲೆಕ್ಕ ರಾಮನ ಲೆಕ್ಕ ಕೃಷ್ಣನ ಲೆಕ್ಕವಾಗಿದೆ ಎಂದು ಕಿಡಿಕಾರಿದರು.

ಒಂದು ಕಡೆ ಸರ್ಕಾರ ಗ್ಯಾರಂಟಿ ಯೋಜನೆಯಿಂದ ಕಾಮಗಾರಿಗಳತ್ತ ಗಮನವನ್ನು ಕೊಡದೆ, ಬರೀ ಬೆಟ್ಟದ ಹುಂಡಿಯಲ್ಲಿ ಎಷ್ಟು ಹಣ ಸಂಗ್ರಹವಾದರೂ ಅದನ್ನು ನಮಗೆ ನೀಡಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಇದರಿಂದ ಅಧಿಕಾರಿಗಳು ಲೂಟಿಗಿಳಿದಿದ್ದಾರೆ. ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಬರುವ ಭಕ್ತಾದಿಗಳಿಂದ ದೇವಸ್ಥಾನದ ಸೆಕ್ಯೂರಿಟಿ ಗಾರ್ಡ್‌ಗಳು ದಿನಕ್ಕೆ ಸಾವಿರಾರು ರೂಪಾಯಿ ಸಂಗ್ರಹಿಸುತ್ತಿದ್ದಾರೆ ಅವರನ್ನ ವಿಚಾರಿಸಿದನ್ನಿಲ್ಲಿ ಎಲ್ಲರಿಗೂ ನಾವು ಹಣ ಕೊಡಬೇಕು. ಇಲ್ಲವಾದರೆ ನಮ್ಮನ್ನು ಬೇರೆ ಕಡೆ ವರ್ಗಾವಣೆ ಮಾಡುತ್ತಾರೆ ಎಂದು ಹೇಳುತ್ತಾರೆ. ಪ್ರತಿನಿತ್ಯ ದೇಶ ವಿದೇಶಗಳಿಂದ ಸಾವಿರಾರು ಭಕ್ತಾದಿಗಳು ಬೆಟ್ಟಕ್ಕೆ ಭೇಟಿ ನೀಡುತ್ತಿದ್ದು, ತಮ್ಮ ಕಷ್ಟಗಳನ್ನು ತಾಯಿ ಚಾಮುಂಡೇಶ್ವರಿ ನಿವಾರಿಸಲಿ ಎಂದು ಭಕ್ತಿ ಭಾವದಿಂದ ಹಲವಾರು ಪದಾರ್ಥಗಳನ್ನು ದೇವಸ್ಥಾನಕ್ಕೆ ಕಾಣಿಕೆಯಾಗಿ ನೀಡುತ್ತಾ ಬಂದಿದ್ದು ಇದು ಸಂಪ್ರದಾಯವಾಗಿದೆ. ವಿಪರ್ಯಾಸವೆಂದರೆ ಭಕ್ತಾದಿಗಳು ನೀಡುವ ಕಾಣಿಕೆಯನ್ನು ದೇವಸ್ಥಾನದ ಸಿಬ್ಬಂದಿ ದುರುಪಯೋಗಪಡಿಸಿಕೊಳ್ಳುತ್ತಿರುವುದು ಬೆಳಕಿಗೆ ಬಂದರೂ ಇದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಬೇಸರದ ಸಂಗತಿ ಎಂದರು.

ದೇವಸ್ಥಾನದ ಕಾರ್ಯನಿರ್ವಾಹಣಾಧಿಕಾರಿಗಳ ವಿರುದ್ಧ ಹಲವಾರು ದೂರು ಕೇಳಿಬಂದಿದ್ದರೂ ಇವರನ್ನು ವರ್ಗಾವಣೆ ಮಾಡುವುದಾಗಲೀ ಇಲ್ಲವೇ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದೆ ಕೈಕಟ್ಟಿ ಕುಳಿತಿರುವ ನಮ್ಮ ಧಾರ್ಮಿಕ ಧತ್ತಿ ಇಲಾಖೆಯ ಸಚಿವರು, ಆಯುಕ್ತರು, ತಹಸೀಲ್ದಾರ್ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂಬುದು ಯಕ್ಷ ಪ್ರಶ್ನೆ. ದೇವಸ್ಥಾನಕ್ಕೆ ಭಕ್ತಾದಿಗಳಿಂದ ಹಣ ಹರಿದು ಬರುತ್ತಿದ್ದರೂ ಇದನ್ನು ಸಮರ್ಪಕವಾಗಿ ಬಳಸಿಕೊಳ್ಳದೆ ದುರ್ಬಳಕೆ ಮಾಡಿಕೊಳ್ಳುತ್ತಿರುವ ಭ್ರಷ್ಟ ಅಧಿಕಾರಿಗಳ ವಿರುದ್ಧ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕು, ಇಲ್ಲವಾದಲ್ಲಿ ದೇವಸ್ಥಾನದ ಮುಂದೆಯೇ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಮಹದೇವಸ್ವಾಮಿ, ಗುರುಬಸಪ್ಪ, ಪ್ಯಾಲೇಸ್‌ಬಾಬು, ಮನೋಹರ್, ಅರವಿಂದ್ ಹರೀಶ್, ಸಿದ್ದಪ್ಪ, ಗೋವಿಂದರಾಜು, ಸ್ವಾಮಿ, ಮದನ್, ಸುನೀಲ್, ಶಿವಣ್ಣನಾಯಕ, ಶಿವು, ಮಾಲಿನಿ, ಪುಷ್ಪಲತಾ, ಮಾದಪ್ಪ, ಸ್ವಾಮಿಗೌಡ, ಚಿನ್ನಪ್ಪ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮುತ್ತು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಿಸ್ ಯು (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪುಷ್ಪ–2 (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.10ಕ್ಕೆ, ಮ.1.55ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ರುಧೀರಂ (ಮ): ರಾ.9.50ಕ್ಕೆ.
ಸ್ಕ್ರೀನ್ 2	ಸೌಧುಕವ್ವಂ (ತ): ಬೆ.11.05ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಮೋನಾ 2 (3ಡಿ)(ಇಂ): ಸಂ.4.40ಕ್ಕೆ, ಮಿಸ್ ಯು (ತ): ರಾ.7ಕ್ಕೆ, ಪುಷ್ಪಾ 2 (ಕ): ರಾ.9.40ಕ್ಕೆ.
ಸ್ಕ್ರೀನ್ 3	ದಿ ಲಾರ್ಡ್ ಆಫ್ ದಿ ರಿಂಗ್ಸ್ (ಇಂ): ಬೆ.11.10ಕ್ಕೆ, ರಾ.9.55ಕ್ಕೆ, ಮೋನಾ 2 (3ಡಿ) (ಇಂ): ಮ.1.55ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.05ಕ್ಕೆ.
ಸ್ಕ್ರೀನ್ 4	ಮೋನಾ 2(3ಡಿ)(ಇಂ): ಬೆ.11.55ಕ್ಕೆ, ಪುಷ್ಪಾ 2 (ತೆ): ಮ.2.10ಕ್ಕೆ, ಸಂ.6.ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ವೈದ್ಯ ದಂಪತಿಯಿಂದ ರಾಜಸ್ಥಾನ ಹುಡುಗಿಗೆ 'ಹೊಸ ದೃಷ್ಟಿ'

ಮೈಸೂರು, ಡಿ. 14– ಹುಟ್ಟಿನಿಂದ ಎರಡೂ ಕಣ್ಣುಗಳಲ್ಲಿ ಬಿಳಿ ಪೊರೆಯ ಕಾರಣಕ್ಕಾಗಿ ಮಂದ ದೃಷ್ಟಿ ಸಮಸ್ಯೆಯಿಂದ ಬಳಲುತ್ತಿದ್ದ ರಾಜಸ್ಥಾನದ 11 ವರ್ಷದ ಬಾಲಕಿ ಈಗ ಹೊಸ "ದೃಷ್ಟಿ" ಪಡೆದಿದ್ದಾಳೆ. ನಗರದ ಉಷಾ ಕಿರಣ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ದಂಪತಿ ಡಾ. ಕೆವಿ. ರವಿಶಂಕರ್ ಹಾಗೂ ಡಾ.ಉಮಾ ರವಿಶಂಕರ್ ಯಶಸ್ವಿ ಶಸ್ತ್ರಚಿಕಿತ್ಸೆಯಿಂದ ಇದು ಸಾಧ್ಯವಾಗಿದೆ. ನಗರದ ಶ್ರೀಮತಿ ಚಿತ್ರಾ ವೆಂಕಟ್ರಾಮಣಿ ಮತ್ತು ಅವರ ಕುಟುಂಬಸ್ಥರು ಈ ಬಡ ಬಾಲಕಿಯ ಶಸ್ತ್ರಚಿಕಿತ್ಸೆಯ ದಾನಿಗಳಾಗಿದ್ದಾರೆ.

ಹುಟ್ಟಿನಿಂದಲೇ ಅಲುಗಾಡುವ ಕಣ್ಣುಗಳು ಮತ್ತು ದೃಷ್ಟಿಹೀನತೆಯ ಸಮಸ್ಯೆಯಿಂದ ಬಳಲುತ್ತಿದ್ದ ಬಾಲಕಿ ರೇಷ್ಮಾ ಬಾನು ಅವರ ಪೋಷಕರು ಕಳೆದ ವಾರ ಮಕ್ಕಳ ಕಣ್ಣಿನ ಸಮಸ್ಯೆಗೆ ಉಚಿತ ಚಿಕಿತ್ಸೆ ದೊರೆಯುತ್ತದೆ ಎಂದು ತಿಳಿದ ನಂತರ ಆಸ್ಪತ್ರೆಯನ್ನು ಸಂಪರ್ಕಿಸಿದ್ದರು.

ಹುಟ್ಟಿನಿಂದಲೇ ಎರಡೂ ಕಣ್ಣುಗಳಲ್ಲಿ ಕಣ್ಣಿನ ಪೊರೆ ಇತ್ತು. ಆಕೆಯ ಐಕ್ಯೂ ಸ್ವಲ್ಪ ಕಡಿಮೆ ಇದೆ ಎಂದು ಡಾ.ರವಿಶಂಕರ್ ತಿಳಿಸಿದ್ದು, ಆಕೆಯ ಪೋಷಕರು ರಾಜಸ್ಥಾನದಿಂದ ವಲಸೆ ಬಂದು ಹುಣಸೂರು ಪಟ್ಟಣದಲ್ಲಿ ರಸ್ತೆ ಬದಿಯಲ್ಲಿ ವ್ಯಾಪಾರದ ಮೂಲಕ ಜೀವನ ಸಾಗಿಸುತ್ತಿದ್ದಾರೆ.

ಪೋಷಕರು ಕಡು ಬಡವರು. ಎಡಗಣ್ಣಿಗೆ ಸಾಮಾನ್ಯ ಅರಿವಳಿಕೆ ಅಡಿಯಲ್ಲಿ ಫೋಲ್ಡಬಲ್ ಐಒಎಲ್ ಇಂಪ್ಲಾಂಟೇಶನ್, ಪ್ರಾಥಮಿಕ ಹಿಂಭಾಗದ ಕ್ಯಾಪ್ಸುಲೋಟಮಿ ಮತ್ತು ಮುಂಭಾಗದ ವಿಟ್ರೆಕ್ಟಮಿ ಎಲ್‌ಇ ಜೊತೆಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ. ಬಲಗಣ್ಣಿಗೆ ಇದೇ ರೀತಿಯ ಶಸ್ತ್ರಚಿಕಿತ್ಸಾ ವಿಧಾನವನ್ನು ಅನುಸರಿಸಲು ನಿರ್ಧರಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9845971425

ಉಚಿತ ಆರೋಗ್ಯ ಶಿಬಿರ

ಮೈಸೂರು, ಡಿ. 14– ಮೈಸೂರಿನ ಸ್ವಾಸ್ಥ್ಯ ಹೆಲ್ತ್ ಕೇರ್‌ನಲ್ಲಿ ನಾಳೆ(ಡಿ.15) ಉಚಿತ ಆರೋಗ್ಯ ಶಿಬಿರ ಆಯೋಜಿಸಿದ್ದು ಬಿಪಿ, ಷುಗರ್ ಸೇರಿದಂತೆ ಎಲ್ಲಾ ಆರೋಗ್ಯ ಸಮಸ್ಯೆಗಳ ತಪಾಸಣೆ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ರೈತರ ಮಕ್ಕಳಿಗೆ ಜ.19ರಂದು ಉದ್ಯೋಗ ಮೇಳ

ಮೈಸೂರು, ಡಿ. 14– ರೈತರ ಮಕ್ಕಳಿಗಾಗಿ ಜನವರಿ 19 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಅನ್ನ, ಅಕ್ಷರ, ಅವಕಾಶ ಕಲ್ಪಿಸುವ ಸಂಕಲ್ಪದೊಂದಿಗೆ ಒಕ್ಕಲಿಗ ಯುವ ಬ್ರಿಗೇಡ್ ನೇತೃತ್ವದಲ್ಲಿ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಜಯಂತ್ಯುತ್ಸವ ಅಂಗವಾಗಿ ಉದ್ಯೋಗ ಮೇಳವನ್ನು, ಪಿರಿಯಾಪಟ್ಟಣದಲ್ಲಿರುವ ಆದಿ ಚುಂಚನಗಿರಿ ಪದವಿ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ವಿವಿಧ ವಿದ್ಯಾಹರ್ತೆಗೆ ಅವಕಾಶ: ಉದ್ಯೋಗಾಕಾಂಕ್ಷಿಗಳಿಗೆ ಈ ಮೇಳವು ಸಂಪೂರ್ಣ ಉಚಿತವಾಗಿದ್ದು, ಪ್ರತಿ ಅಭ್ಯರ್ಥಿಯು 5 ಕಂಪನಿಗಳ ಸಂದರ್ಶನ ಎದುರಿಸಬಹುದಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ವಿವಿಧ ಕೋರ್ಸ್‌ಗಳ ಪದವಿ (ಪಾಸ್, ಫೇಲ್), ITI , ಡಿಪ್ಲೋಮಾ, ಇಂಜಿನಿಯರಿಂಗ್, ಸ್ನಾತಕೋತ್ತರ ಪದವೀಧರರು ಈ ಮೇಳದಲ್ಲಿ ಭಾಗವಹಿಸುವ ಮೂಲಕ ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ. ಈ ಮೇಳದಲ್ಲಿ ಸುಮಾರು 50 ಕಂಪನಿಗಳು ಭಾಗವಹಿಸಲಿದ್ದು, 2000 ಕ್ಕಿಂತ ಹೆಚ್ಚು ಉದ್ಯೋಗಾವಕಾಶಗಳು ಲಭ್ಯವಿದೆ. ಈ ಮೇಳದಲ್ಲಿ ವಿಶೇಷವಾಗಿ ವಿಶೇಷಚೇತನ ಹಾಗೂ ಅಂಗವಿಕಲರಿಗೂ ಉದ್ಯೋಗ ಅವಕಾಶ ಕಲ್ಪಿಸುವ ವ್ಯವಸ್ಥೆ ಮಾಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೋಹನ್: 96865 64192 ಮತ್ತು ಶಿವಕುಮಾರ್: 63631 44181 ಅವರನ್ನು ಸಂಪರ್ಕಿಸಬಹುದು ಎಂದು ಒಕ್ಕಲಿಗ ಯುವ ಬ್ರಿಗೇಡ್‌ನ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ತಿಳಿಸಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಪುಟ್ಟಮ್ಮ

ದಿನಾಂಕ 14–12–2024 ಸಂಜೆ ದೈವಾಧೀನರಾಗಿದ್ದು, ಇವರ ಅಂತ್ಯಕ್ರಿಯೆಯನ್ನು ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ದಿನಾಂಕ: 15–12–2024ರಂದು ಬೆಳಿಗ್ಗೆ 11 ಗಂಟೆಗೆ ನೆರವೇರಿಸಲಾಗುತ್ತದೆ

ದುಃಖತಪ್ತರು: ಪತಿ ಸ್ವಾಮಿ ಮತ್ತು ಮಗ ಸೊಸೆ, ಹೆಣ್ಣುಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು ಕುಟುಂಬವರ್ಗದವರು ಕೆ.ಜಿ.ಕೊಪ್ಪಲ್

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು